ಸಂಪುಟ: 13 Volume | ಸಂಚಿಕೆ: 339 Issue | ಪುಟಗಳು 08 Pages | ಮಂಗಳವಾರ 03 ಮಾರ್ಚ್ 2026 | ₹6 | PRGINO.120927(RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಮಹತ್ವಾಕಾಂಕ್ಷೆ ಇಲ್ಲದ ಬುದ್ಧಿವಂತಿಕೆ ರೆಕ್ಕೆಗಳಿಲ್ಲದ ಹಕ್ಕಿಯಂತೆ.

–ಸಾಲ್ವಡೋರ್ ಡಾಲಿ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

ಸಿಎಂ ಬಳಿ ಸರ್ವ ಪಕ್ಷಗಳ ನಿಯೋಗ: ಕರಡಿ 6 | ಮದ್ಯ ಮಾರಾಟ, ಸಾಗಾಣಿಕೆ ನಿಷೇಧ 7 | 3ನೇ ಹಂತದ ಶುದ್ಧೀಕರಣಕ್ಕೆ ಅನುದಾನ 8

## ಮಲ್ಲಮ್ಮ ನುಡಿ ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಶಾಸಕರಿಂದ ಸಚಿವರಿಗೆ ಘೇರಾವ್

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರಿಗೆ ಬಿಜೆಪಿ ಶಾಸಕ ಡಾ. ಸಿದ್ದು ಪಾಟೀಲ್ ಹಾಗೂ ಬಿಜೆಪಿ ಕಾರ್ಯಕರ್ತರು ಪ್ರತಿಭಟಿಸಿ ಘೇರಾವ್ ಹಾಕಿದ್ದಾರೆ.

ತಾಲೂಕಿನ ತಾಳಮಡಗಿ (ಹಿಪ್ಪರಗಾಂವ) ಗ್ರಾಮದ ಹೊರವಲಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಗುದ್ದಲಿ ಪೂಜೆ ನೆರವೇರಿಸಿಲು ಈಶ್ವರ ಖಂಡ್ರೆ ಅವರು ಹೋಗುತ್ತಿದ್ದಾಗ ಸಿದ್ದು ಪಾಟೀಲ್ ಹಾಗೂ ಬಿಜೆಪಿ ಕಾರ್ಯಕರ್ತರು ವಾಹನ ತಡೆದು ಘೋಷಣೆ ಕೂಗಿದ್ದಾರೆ. ಈ ವೇಳೆ ಪೊಲೀಸರು ಶಾಸಕ ಡಾ. ಸಿದ್ದು ಪಾಟೀಲ್ ಸೇರಿದಂತೆ ಕಾರ್ಯಕರ್ತರನ್ನು ವಶಕ್ಕೆ ಪಡೆದು ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಕಳೆದ ತಿಂಗಳು ಇದೇ ವಸತಿ ಶಾಲೆಯ ಶಂಕುಸ್ಥಾಪನೆಯನ್ನು ಶಾಸಕ ಡಾ. ಸಿದ್ದು ಪಾಟೀಲ್ ನೆರವೇರಿಸಿದ್ದರು. ಶಿಷ್ಟಾಚಾರ ಉಲ್ಲಂಘಿಸಿ ಗುದ್ದಲಿ ಪೂಜೆ ನೆರವೇರಿಸಿದ್ದಾರೆ ಎಂದು ಆರೋಪಿಸಿ ಈಶ್ವರ ಖಂಡ್ರೆ ಅವರು ವಸತಿ ಶಾಲೆಯ ಗುದ್ದಲಿ ಪೂಜೆ ನೆರವೇರಿಸಲು ಹೋಗುತ್ತಿದ್ದಾಗ ಈ ಘಟನೆ ನಡೆದಿದೆ.



## 24 ಮಠಕ್ಕೆ ಯಲಹಂಕ ಭೂಮಿ



• ಮಲ್ಲಮ್ಮ ನುಡಿ ವಾರ್ತೆ ಯಲಹಂಕ

ಯಲಹಂಕ ಕ್ಷೇತ್ರದ ದಾಸನಪುರ ಹೋಬಳಿಯ ರಾವುತ್ತನಹಳ್ಳಿ ಗ್ರಾಮದಲ್ಲಿ 24 ಹಿಂದುಳಿದ ಹಾಗೂ ದಲಿತ ಸಮುದಾಯಗಳ ಮಠಗಳಿಗೆ ಭೂಮಿ ನೀಡಿಡಲಾಗಿದೆ. ಈ ಹಿನ್ನೆಲೆಯಲ್ಲಿ ಭೂಮಿ ಪಡೆದ 24 ಮಠಾಧೀಶರು ಶಾಸಕ ಎಸ್.ಆರ್.ವಿಶ್ವನಾಥ್ ಅವರ ಮನೆಗೆ ಆಗಮಿಸಿ ವಿಶ್ವನಾಥ್ ಹಾಗೂ ಅವರ ಕುಟುಂಬ ವರ್ಗಕ್ಕೆ ಆಶೀರ್ವದಿಸಿ ಹರಸಿದ್ದಾರೆ. ಧರ್ಮದ ಬೆಳವಣಿಗೆ, ಸಂಸ್ಕೃತಿ, ಪರಂಪರೆಯ ಪ್ರಗತಿಗೆ ಈ ಎಲ್ಲಾ ಮಠಾಧೀಶರು ಹೆಚ್ಚಿನ ರೀತಿಯಲ್ಲಿ ಶ್ರಮಿಸುವಂತಾಗಲಿ, ತನ್ಮೂಲಕ ನಮ್ಮ ದೇಶ ನಮ್ಮ ಸಮಾಜಕ್ಕೆ ಒಳಿತಾಗಲಿ ಶಾಸಕ ಎಸ್.ಆರ್. ವಿಶ್ವನಾಥ್ ತಿಳಿಸಿದ್ದಾರೆ.

# ಹಿಂಸಾಚಾರ ಕಟ್ಟೆಚ್ಚರ

### ಭೀಕರ ಯುದ್ಧ | ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ | ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸುತ್ತೋಲೆ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಇಸ್ರೇಲ್–ಇರಾನ್–ಅಮೆರಿಕಾ ದಾಳಿ, ಪ್ರತಿದಾಳಿ ತೀವ್ರಗೊಳಿಸಿದೆ. ಇದರಿಂದಾಗಿ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ನಿರ್ಮಾಣವಾಗಿದೆ. ಇದರ ಬೆನ್ನಲ್ಲೇ ಭಾರತದಲ್ಲಿ ಸಂಭಾವ್ಯ ಹಿಂಸಾಚಾರದ ಬಗ್ಗೆ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ. ಕುರಿತು ಫೆ.28 ರಂದು ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ಸುತ್ತೋಲೆ ಹೊರಡಿಸಿದೆ. ಸುತ್ತೋಲೆಯಲ್ಲಿ, ದೇಶದಲ್ಲಿ ಹಿಂಸಾಚಾರ ಸಂಭವಿಸುವ ಸಾಧ್ಯತೆಯಿದೆ.

**ಪ್ರಚಾರಕರ ಪತ್ತೆ ಮಾಡಿ:** ಎಲ್ಲಾ ರಾಜ್ಯ ಸರ್ಕಾರಗಳು ಮತ್ತು ಭದ್ರತಾ ಸಂಸ್ಥೆಗಳು ಜಾಗರೂಕತೆಯಿಂದ ಇರಬೇಕು. ಅಶಾಂತಿಯನ್ನ ಪ್ರಚೋದಿಸುವ ಇರಾನ್ ಪರ ಮೂಲಭೂತ ಪ್ರಚಾರಕರನ್ನ ಪತ್ತೆ ಮಾಡಬೇಕು ಎಂದು ಕೇಂದ್ರ ಸೂಚಿಸಿದೆ.

**ಉದ್ರೇಕತಿ ಭಾಷಣ ಎಚ್ಚರ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ದೇಶದ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ. ಅದರಲ್ಲೂ ವಿಶೇಷವಾಗಿ ಧಾರ್ಮಿಕ ಕೂಟಗಳಲ್ಲಿ ಉದ್ರೇಕಿತ ಭಾಷಣಗಳ ಮೂಲಕ ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಸಾಧ್ಯತೆಗಳಿವೆ. ಹೀಗಾಗಿ ರಾಜ್ಯ ಸರ್ಕಾರಗಳು ಮತ್ತು ಭದ್ರತಾ ಸಂಸ್ಥೆಗಳು ಎಚ್ಚರಿಕೆಯಿಂದಿರಬೇಕು.




### ಅಗತ್ಯ ಕ್ರಮಕ್ಕೆ ಸೂಚನೆ

ಅಯತೊಲ್ಲಾ ಅಲಿ ಖಮೇನಿ ಹತ್ಯೆ ಬಗ್ಗೆ ಆಕ್ರೋಷಿತ ಶಿಯಾ ಮುಸ್ಲಿಮರು ಭಾರತದ ವಿವಿಧ ಭಾಗಗಳಲ್ಲಿ ತಿಭಟನೆ ನಡೆಸಿದ್ದಾರೆ. ಅಶಾಂತಿ ಮತ್ತು ಉದ್ವಿಗ್ನತೆ ಉಂಟು ಮಾಡುವ ಇರಾನ್ ಪರವಾದ ಮೂಲಭೂತ ಪ್ರಚಾರಕರನ್ನ ಗುರುತಿಸಿ ಮೇಲ್ವಿಚಾರಣೆ ಮಾಡಬೇಕು ಎಂದು ಎಚ್ಚರಿಸಿದೆ. ಕಾನೂನು, ಸುವ್ಯವಸ್ಥೆ ನಿಯಂತ್ರಿಸಲು ಗುಪ್ತಚರ, ಭದ್ರತಾ ಸಂಸ್ಥೆಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಿ ಹೇಳಿದೆ.

### ಸಂತ್ರಸ್ತರಿಗಾಗಿ ಸಹಾಯವಾಣಿ

ಯು.ಎ.ಇ ಯ ಭಾರತೀಯ ರಾಯಭಾರಿ ಕಚೇರಿ ಸಹಾಯವಾಣಿ ಸಂಖ್ಯೆ +971569916774, +971563888288, +971507576238 ಸ್ಟೇಟ್ ಎಮರ್ಜೆನ್ಸಿ ಆಪರೇಷನ್ ಸೆಂಟರ್ 080– 22340676/ 22253707 ನಂಬರ್ ಗೆ ಫೋನ್ ಮಾಡಬಹುದು. ಏರ್ ಪೋರ್ಟ್‌ನಲ್ಲಿ ಸಿಕ್ಕಾಕಿಕೊಂಡವರು ಕಾಲ್ ಸೆಂಟರ್‌ಗೆ ಸಂಪರ್ಕಿಸಿದರೆ ಸ್ಥಳೀಯ ರಾಯಭಾರಿ ಕಚೇರಿಗೆ ಮಾಹಿತಿ ನೀಡಿ ವೀಸಾ ಸಿಗಲು ಅವಕಾಶ ಮಾಡಿಕೊಡುವ ವ್ಯವಸ್ಥೆ ಕೇಂದ್ರ ಮಾಡಿದೆ.

### ಯುದ್ಧಭೂಮಿಯಲ್ಲಿರುವವರು?

ರಾಜ್ಯ ಸರ್ಕಾರ ದುಬೈ, ಬಹರೈನ್‌ನಲ್ಲಿ ಇರುವ ಕನ್ನಡಿಗರ ಬಗ್ಗೆ ಮಾಹಿತಿ ನೀಡಿದೆ. ದುಬೈನಲ್ಲಿ: ಬಳ್ಳಾರಿ– 32, ಬೆಂಗಳೂರು– 25, ಚಿಕ್ಕಬಳ್ಳಾಪುರ –2, ಚಿಕ್ಕಮಗಳೂರು– 5, ಚಿತ್ರದುರ್ಗ– 2, ದಕ್ಷಿಣ ಕನ್ನಡ– 3, ದಾವಣಗೆರೆ ? 9, ಕಲಬುರಗಿ ? 2, ಶಿವಮೊಗ್ಗ 3, ಕೊಡಗು– 4, ತುಮಕೂರು– 1, ಉಡುಪಿ– 2, ವಿಜಯಪುರ 4, ರಾಯಚೂರು– 3; ಬಹರೈನ್‌ನಲ್ಲಿ: ಹಾಸನ– 4, ಕೊಡಗು ? 1, ಉಡುಪಿ– 3 ಜನ ಇದ್ದಾರೆ.

### ಸೌದಿ, ಇರಾನ್ ನಂಬರ್

ಇಸ್ರೇಲ್, ಇರಾನ್, ಸೌದಿ ಅರೆಬಿಯಾ, ಬಹರೈನ್ ಸೇರಿದಂತೆ ಗಲ್ಫ್ ರಾಷ್ಟ್ರಗಳಲ್ಲಿ ಸಿಕ್ಕಿ ಹಾಕಿಕೊಂಡಿರುವ ಕನ್ನಡಿಗರ ರಕ್ಷಣೆಗಾಗಿ ಸರ್ಕಾರದ ಸಹಾಯವಾಣಿ ಇಂತಿದೆ: ಇಸ್ರೇಲ್ – +972–54–7520711, ಇರಾನ್ – +989128109115, +989128109109, ಸೌದಿ,ರಿಯಾದ್: 00–966–11–4884697, 00–966–542126748 (ವಾಟ್ಸಪ್), 8002471234 ( ಟೋಲ್ ಫ್ರೀ) ಜಿದ್ದಾ: +966536209704 (ವಾಟ್ಸಪ್) ಸಂಪರ್ಕಿಸಬಹುದು.

## ಕುಸಿದ ಪ್ರಬುದ್ಧ ಅಕಾಡೆಮಿ ಕಟ್ಟಡ..!

**ಕಲಬುರಗಿ:** ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಂದ ಲೋಕಾರ್ಪಣೆಗೊಂಡಿದ್ದ ಪ್ರಬುದ್ಧ ಅಕಾಡೆಮಿಯ ಕಟ್ಟಡವೊಂದರ ಮೇಲ್ಛಾವಣಿ ಕುಸಿದು ಬಿದ್ದಿದೆ. ವಿದ್ಯಾರ್ಥಿನಿಯೊಬ್ಬಳು ಪ್ರಾಣಾಪಾಯದಿಂದ ಪಾರಾಗಿದ್ದಾಳೆ.



ಜನವರಿಯಲ್ಲಿ ಪ್ರಿಯಾಂಕ್ ಖರ್ಗೆ ಇದನ್ನು ಉದ್ಘಾಟಿಸಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ–ಕ್ಕೆ ಚಾಲನೆ ನೀಡಿದ್ದರು. ಆವರಣದಲ್ಲಿರುವ ಉಪಾಹಾರ ಕೊಠಡಿಯಲ್ಲಿ ಮೇಲ್ಛಾವಣಿ ಕುಸಿದು ಬಿದ್ದಿದ್ದು, ಆಕ್ರೋಶಕ್ಕೆ ಕಾರಣವಾಗಿದೆ. ಮೇಲ್ಛಾವಣಿ ಕುಸಿದಿರುವ ಬಗ್ಗೆ ಕಟ್ಟಡ ಕಂಟ್ರ್ಯಾಕ್ಟರ್ ಲ್ಯಾಂಡ್ ಆರ್ಮಿ ಇಲಾಖೆಯವರಿಗೆ ತಿಳಿಸಿದ್ದೇವೆ. ಉಪಹಾರ ಕೇಂದ್ರವನ್ನು ಉಪಯೋಗಿಸದ ಕಾರಣ ಘಟನೆಯಲ್ಲಿ ಯಾರಿಗೂ ಗಾಯವಾಗಿಲ್ಲಎಂದಿದ್ದಾರೆ.

## ಅತ್ಯಾಚಾರ: 5 ಆರೋಪಿಗಳು ಸೆರೆ

**ಬೆಂಗಳೂರು:** ಕಾಲೇಜು ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣ ಸಂಬಂಧ ಅಮೃತಹಳ್ಳಿ ಠಾಣೆ ಪೊಲೀಸರು ಮತ್ತೆ ಮೂವರು ಯುವಕರನ್ನು ಬಂಧಿಸಿದ್ದಾರೆ. ಇದರಿಂದ ಆರೋಪಿಗಳ ಸಂಖ್ಯೆ 5ಕ್ಕೆ ಏರಿಕೆಯಾಗಿದೆ. ದಾವಣಗೆರೆ ಮಾಜಿ ಕಾರ್ಪೋರೇಟರ್ ಪುತ್ರನೂ ಶಾಮೀಲಾಗಿರುವುದು ತನಿಖೆಯಲ್ಲಿ ತಿಳಿದುಬಂದಿದೆ. ಪ್ರಮುಖ ಆರೋಪಿಗಳಾದ ಪಶ್ಚಿಮ ಬಂಗಾಳ ಮೂಲದ ಡಿಕ್ಸನ್‌ಮತ್ತು ಮಲ್ಲೇಶ್ವರದ ಎಚ್ಚಿ ನಿಖಿಲ್ನನ್ನು ಈಗಾಗಲೇ ಬಂಧಿಸಿದ್ದು, ಈ ಕೃತ್ಯಕ್ಕೆ ಪರೋಕ್ಷವಾಗಿ ಸಹಕರಿಸಿದ್ದ ಶ್ರವಣ್, ದಾವಣಗೆರೆ ಜಿಲ್ಲೆಯ ಅನಿರುದ್ಧ್, ಗುಜರಾತ್‌ನ ಮೋಹಿತ್ ಜೈನ್ ಬಂದಿತರು.

## ಭಿನ್ನ ಬಣದ ಶಾಸಕರ ಮೇಲೆ ನಿಗಾ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಬಣವು ಹೆಚ್ಚಿನ ಶಾಸಕರ ಬೆಂಬಲವನ್ನು ಗಳಿಸುತ್ತಿದ್ದು, ಅವರ ಸಂಖ್ಯೆ ಹೆಚ್ಚುತ್ತಿದೆ ಎಂದು ಸಿಎಂ ಬಣ ಆತಂಕ ವ್ಯಕ್ತಪಡಿಸುತ್ತಿದೆ. ಆದರೆ, ಅವರ ಮೇಲೆ ನಿಗಾ ಇಡಲು ರಾಜ್ಯದ ಗುಪ್ತಚರ ಯಂತ್ರ ಬಳಸಲು ನಿರ್ಧರಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರ ಹುಟ್ಟುಹಬ್ಬದ ಮುನ್ನಾದಿನದಂದು ಡಿಕೆ ಶಿವಕುಮಾರ್ ಕ್ಯಾಂಪ್ ಹೋಟೆಲ್‌ನಲ್ಲಿ ಭೋಜನಕ್ಕೆ ಒಟ್ಟುಗೂಡಿದ ಬಳಿಕ, ಸಿದ್ದರಾಮಯ್ಯ ಅವರು ಶಾಸಕರ ಚಲನವಲನಗಳ ಬಗ್ಗೆ ಸೂಕ್ಷ್ಮ ವಿವರಗಳನ್ನು ಕೋರಿದ್ದಾರೆ ಎಂದು ಮೂಲಗಳು ಖಚಿತ ಪಡಿಸಿವೆ. ಈಗ ಸಿಎಂ ನಿಯಂತ್ರಣದಲ್ಲಿರುವ ರಾಜ್ಯ ಗುಪ್ತಚರ ಇಲಾಖೆಗೆ ದಿನನಿತ್ಯದ ಮಾಹಿತಿಗಿಂತ ಹೆಚ್ಚಿನ ಮಾಹಿತಿಯನ್ನು ಪ್ರತಿದಿನ ನೀಡುವಂತೆ ಸೂಚಿಸಲಾಗಿದೆ. ಆದರೆ ಭೋಜನಕೂಟಕ್ಕೆ ಆಹ್ವಾನಿಸಿದ್ದ 69 ಶಾಸಕರಲ್ಲಿ ಕೇವಲ 32 ಮಂದಿ ಮಾತ್ರ ಹಾಜರಾಗಿದ್ದರು.

## ಬಿಎಸ್‌ವೈ ಭರ್ಜರಿ ಸಮಾವೇಶಕ್ಕೆ ಸಿದ್ಧತೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಾರ್ವಜನಿಕ ಜೀವನ ಪ್ರವೇಶಿಸಿ 50 ವರ್ಷ ಭರ್ತಿಯಾದ ಹಿನ್ನೆಲೆಯಲ್ಲಿ ಸಿದ್ದರಾಮೋತ್ಸವ ಮಾದರಿಯಲ್ಲಿ ಬೃಹತ್ ಸಮಾವೇಶ ನಡೆಸುವುದಕ್ಕೆ ರಾಜ್ಯ ಬಿಜೆಪಿ ಮುಂದಾಗಿದೆ. ಈ ಮೂಲಕ ಪಕ್ಷದ ಒಳಗೆ ಹಾಗೂ ಹೊರಗೆ ಮಹತ್ವದ ರಾಜಕೀಯ ಸಂದೇಶ ಸಾರುವ ಪ್ರಯತ್ನಗಳು ನಡೆಯುತ್ತಿವೆ ಎನ್ನಲಾಗಿದೆ. ಕರ್ನಾಟಕ ರಾಜಕೀಯದಲ್ಲಿ ನಾಲ್ಕು ದಶಕಗಳಿಗಿಂತ ಹೆಚ್ಚು ಕಾಲ ಪ್ರಭಾವ ಬೀರಿದ ನಾಯಕನಾಗಿ ಯಡಿಯೂರಪ್ಪ ಅವರ ಹೆಸರು ಅಚ್ಚಳಿಯಾಗಿ ಉಳಿದಿದೆ. ಈಗ ಅವರ ರಾಜಕೀಯ ಜೀವನಕ್ಕೆ 50 ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ, ಬಿಜೆಪಿ ಅವರನ್ನು ಮತ್ತೆ ಕೇಂದ್ರಬಿಂದುವಾಗಿಸಲು ಮುಂದಾಗಿದೆ. ಇದು ಕೇವಲ ಸ್ಮರಣೋತ್ಸವವಲ್ಲ, 2028ರ ರಾಜಕೀಯ ಸಮೀಕರಣಗಳ ಪೂರ್ವಭಾವಿ ಸಿದ್ಧತೆಯಾಗಿದೆ ಎನ್ನುವುದು ರಾಜಕೀಯ ವಲಯದಲ್ಲಿ ಕೇಳಿಬರುತ್ತಿರುವ ಅಭಿಪ್ರಾಯವಾಗಿದೆ.



## ಶ್ರೀಮಂತರು ಗ್ಯಾರೆಂಟಿ ಬಿಟ್ಟುಕೊಡಿ..!

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ರಾಜ್ಯದ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಶ್ರೀಮಂತರು ಸ್ವಯಂ ಪ್ರೇರಿತರಾಗಿ ಕೈ ಬಿಡಬೇಕು ಎಂದು ಸಚಿವ ಎಂಬಿ ಪಾಟೀಲ್ ಮನವಿ ಮಾಡಿದ್ದಾರೆ.

ವಿಜಯಪುರದ ಆಲಮಟ್ಟಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಹೊರೆಯಾಗಿವೆ ಎಂಬ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, ಸರ್ಕಾರದ ಗ್ಯಾರಂಟಿಗಳು ಬಡವರ ಶ್ರೇಯೋಭಿವೃದ್ಧಿಗಾಗಿ ಜಾರಿಗೆ ತಂದಿರುವ ಯೋಜನೆಗಳಾಗಿದ್ದು, ಶ್ರೀಮಂತರು ಇವುಗಳ ಪ್ರಯೋಜನ ಪಡೆಯುವುದನ್ನು ಸ್ವಯಂಪ್ರೇರಿತವಾಗಿ ಬಿಡಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಕರೆ ನೀಡಿದ್ದಾರೆ.

ಗ್ಯಾರಂಟಿ ಯೋಜನೆಗಳು ಅಭಿವೃದ್ಧಿಯ ಒಂದು ಭಾಗ. ಇವು ಬಡವರಿಗಾಗಿ ಇರುವ ಯೋಜನೆಗಳಾಗಿವೆ. ಶ್ರೀಮಂತರು ಇವುಗಳನ್ನು ಪಡೆಯುವುದನ್ನು ಸ್ವಯಂಪ್ರೇರಿತವಾಗಿ ಬಿಡಬೇಕು. ಈ ಯೋಜನೆಗಳು ಬಡವರ ಆರ್ಥಿಕ ಸಬಲೀಕರಣಕ್ಕೆ ಅಗತ್ಯವಾಗಿದ್ದು, ಅರ್ಹರು ಮಾತ್ರ ಇದರಪ್ರಯೋಜನ ಪಡೆಯಬೇಕು ಎಂದಿದ್ದಾರೆ.



> ಗ್ಯಾರಂಟಿ ಯೋಜನೆಗಳು ಬಡವರ ಪಾಲಿಗೆ ಅಭಿವೃದ್ಧಿಯ ಆಧಾರಸ್ತಂಭ. ಆರ್ಥಿಕವಾಗಿ ಸದೃಢರಾದವರು, ಅರ್ಹ ಬಿಪಿಎಲ್ ಕುಟುಂಬದವರು ಗ್ಯಾರಂಟಿ ಯೋಜನೆ ತೆಗೆದುಕೊಳ್ಳಲಿ. ಆದರೆ ತೆರಿಗೆ ಪಾವತಿದಾರರು ಈ ಸೌಲಭ್ಯಗಳಿಂದ ದೂರವಿರುವುದು ಉತ್ತಮ.
>
> –ಎಂ.ಬಿ.ಪಾಟೀಲ್, ಕೈಗಾರಿಕಾ ಸಚಿವ

### ಅಭಿವೃದ್ಧಿಗೆ ಯಾವುದೇ ಅಡೆತಡೆ ಇಲ್ಲ: ಎಂಬಿ ಪಾಟೀಲ್

ಗ್ಯಾರಂಟಿ ಯೋಜನೆಗಳ ಜೊತೆಗೆ ರಾಜ್ಯ ಸರ್ಕಾರ ಅಭಿವೃದ್ಧಿ ಕೆಲಸಗಳನ್ನೂ ಮಾಡುತ್ತಿದೆ. ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿ ಕೆಲಸಗಳು ಕುಂಠಿತಗೊಳ್ಳುವುದಿಲ್ಲ. ಸಿಎಂ ಅವರು ಹಣಕಾಸು ತಜ್ಞ, ಹಣಕಾಸಿನ ವ್ಯವಹಾರವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಅವರು 16 ಬಜೆಟ್ ಕೊಟ್ಟಿದ್ದಾರೆ ಎಂದು ಎಂಬಿ ಪಾಟೀಲ್ ಶ್ಲಾಘಿಸಿದ್ದಾರೆ.






**ಎಲ್ಲೆಲ್ಲೂ ಯುದ್ಧದ ಕಾರ್ಮೋಡ ದಟ್ಟವಾಗಿ ಆವರಿಸಿದೆ. ಇಂತಹ ಸಂದರ್ಭ ಅಲ್ಲಿರುವ ಕನ್ನಡಿಗರನ್ನು ಕರೆತರುವುದು ಕಷ್ಟ: ಎಚ್.ಡಿ, ಕುಮಾರಸ್ವಾಮಿ, ಕೇಂದ್ರ ಸಚಿವ**

# ಹೋಳಿ ರಂಜಾನ್ ನಿಮಿತ್ಯ ಶಾಂತಿ ಸಭೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಬಗದಲ ಪೊಲೀಸ್ ಠಾಣೆಯಲ್ಲಿ ಹೋಳಿ ಹಾಗೂ ರಂಜಾನ್ ಹಬ್ಬಗಳ ಪ್ರಯುಕ್ತ ಶಾಂತಿ ಸಭೆ ಆಯೋಜಿಸಲಾಯಿತು.

ಸಭೆಯಲ್ಲಿಉಪನಿರೀಕ್ಷಕರಾದಕಿರಣ್ ಧೋತ್ರೆಮಾತನಾಡಿ,ಹಬ್ಬಗಳನ್ನು ಪರಸ್ಪರ ಸೌಹಾರ್ದತೆ ಹಾಗೂ ಸಹಕಾರದಿಂದ ಆಚರಿಸಬೇಕು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು ಹಾಗೂ ಸಮಸ್ಯೆಗಳಿದ್ದರೆ ತಕ್ಷಣ ಪೊಲೀಸ್ ಠಾಣೆಗೆಮಾಹಿತಿನೀಡಬೇಕು ಎಂದು ಹೇಳಿದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಲ್ಲರೂ ಜಾಗೃತರಾಗಿರಬೇಕು ಎಂದು ಸಲಹೆ ನೀಡಿದರು,

ಇದೇ ಸಂದರ್ಭದಲ್ಲಿ ಶಿವರುದ್ರಪ್ಪ ಪಾಟೀಲ್, ಬಶೀರ್, ಸೂರ್ಯಕಾಂತ್ ದಂಡಿ, ಗೌತಮ್ ,ಬಗದಲ ಪೊಲೀಸ್ ಠಾಣೆಯ ಸಿಬ್ಬಂದಿಯವರಾದ ಎಎ ಸುನಿಲ್ ಕೋರಿ, ಅಶೋಕ್, ಧೂಳಪ್ಪ, ರವಿಕಾಂತ್, ಸಿದ್ದಪ್ಪಾ ಸೇರಿದಂತೆ ಅನೇಕ ಗ್ರಾಮಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದರು,

## ಆತ್ಮಹತ್ಯೆಗೆ ಯತ್ನಿಸಿ ಚಿಕಿತ್ಸೆ ಪಡೆಯುತ್ತಿರುವ ಬ್ರಿಮ್ಸ್

# ಲ್ಯಾಬ್ ಟೆಕ್ನಿಷಿಯನ್ ಆರೋಗ್ಯ ವಿಚಾರಿಸಿದ ಖಂಡ್ರೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಬ್ರಿಮ್ಸ್ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನಿಷಿಯನ್ ಆಗಿ ಸೇವೆ ಸಲ್ಲಿಸುತ್ತಿರುವ ನಿಲೋಫರ್ ಅವರು, ಆಸ್ಪತ್ರೆಯ ಕೆಲ ಪುರುಷ ಸಿಬ್ಬಂದಿಗಳ ಕಿರುಕುಳದಿಂದ ಮನನೊಂದು ಆತ್ಮಹತ್ಯೆಗೆ ಯತ್ನಿಸಿ ಚಿಕಿತ್ಸೆ ಪಡೆಯುತ್ತಿರುವ ಘಟನೆ ಅತ್ಯಂತ ದುಃಖಕರವಾಗಿದೆ.

ಈ ಹಿನ್ನೆಲೆಯಲ್ಲಿ ಇಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಆಸ್ಪತ್ರೆಗೆ ಭೇಟಿ ನೀಡಿ ನಿಲೋಫರ್ ಅವರ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದರು.

ಘಟನೆಯ ಕುರಿತು ಸಂಪೂರ್ಣ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸಚಿವರು ಸೂಚನೆ ನೀಡಿದರು. ಮಹಿಳಾ ಸಿಬ್ಬಂದಿಗಳ ಸುರಕ್ಷತೆ ಹಾಗೂ ಗೌರವದ ವಿಚಾರದಲ್ಲಿ ಯಾವುದೇ ನಿರ್ಲಕ್ಷ ಸಹಿಸಲಾಗದು ಎಂದು ಸ್ಪಷ್ಟಪಡಿಸಿದರು.

ಜೊತೆಗೆ ಬ್ರಿಮ್ಸ್ ಆಸ್ಪತ್ರೆಯ ಎಲ್ಲಾ ಸಿಬ್ಬಂದಿಗಳಿಗೆ ಸಮಯಕ್ಕೆ ಸರಿಯಾಗಿ ಸಂಬಳ ಪಾವತಿಸುವಂತೆ ನಿರ್ದೇಶಕರಿಗೆ ಖಡಕ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಬ್ರಿಮ್ಸ್ ನಿರ್ದೇಶಕಿಯಾದ ಡಾ. ಶಾಂತಲಾ ಕೌಜಲಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪ್ರದೀಪ ಗುಂಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ದೇಶಿ ಹಸುವಿನ ಆಧಾರಿತ ಕೃಷಿ, ಉತ್ಪಾದನಾ ವೆಚ್ಚದಲ್ಲಿ ಕಡಿತ: ನೀಲಂ ಪಟೇಲ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಡೋಣಗಾಂವ ಗ್ರಾಮದ ಪ್ರಗತಿಪರ ರೈತ ಬಾಬುರಾವ ಸೋಮುರೆ ಅವರು ಇತೀಚಿಗೆ ನಡೆದ ಗುಜರಾತ ರಾಜ್ಯದ ಭುಜ ಪಟ್ಟಣದಲ್ಲಿ ನಡೆದ ಎರಡು ದಿನಗಳ ರಾಷ್ಟ್ರೀಯ ಮಟ್ಟದ ನ್ಯಾಚುರಲ್ ಫಾರ್ಮಿಂಗ್ ಕಾರ್ಯಾಗಾರ ಉತ್ಸಾಹಭರಿತವಾಗಿ ನೆರವೇರಿತು. ದೇಶದ ಎಲ್ಲಾ ರಾಜ್ಯಗಳಿಂದ ರೈತ ಪ್ರತಿನಿಧಿಗಳು, ಕೃಷಿ ತಜ್ಞರು ಹಾಗೂ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ಕಾರ್ಯಾಗಾರವನ್ನು ನೀತಿ ಆಯೋಗ ಅವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು.ನೀತಿಆಯೋಗದ ಮುಖ್ಯ ಸಲಹೆಗಾರ್ತಿ ನೀಲಂ ಪಟೇಲ್ ಅವರ ನ್ಯಾಚುರಲ್ ಫಾರ್ಮಿಂಗ್‌ನ ಐದು ಪ್ರಮುಖ ತತ್ವಗಳನ್ನು ವಿವರವಾಗಿ ತಿಳಿಸಲಾಯಿತು. ಅದರಲ್ಲಿ ಬೀಜಾಮೃತ, ಜೀವಾಮೃತ, ಮಲ್ಚಿಂಗ್ (ಆವರಣೆ), ವಾಫ್ಸಾ ಮತ್ತು ಸ್ವಾಭಾವಿಕ ಕೀಟ ನಿಯಂತ್ರಣ ಬ್ರಹ್ಮಾಸ್ತ್ರ ಇತ್ಯಾದಿ) ತತ್ವಗಳು ಒಳಗೊಂಡಿವೆ.

ದೇಶಿ ಹಸುವಿನ ಆಧಾರಿತ ಕೃಷಿ, ಉತ್ಪಾದನಾ ವೆಚ್ಚದಲ್ಲಿ ಕಡಿತ, ಮಣ್ಣಿನ ಸಸ್ಯೋತ್ಪಾದಕತೆ ಹೆಚ್ಚಿಸುವುದು ಹಾಗೂ ರಾಸಾಯನಿಕರಹಿತ ಆಹಾರ ಉತ್ಪಾದನೆ ಕುರಿತು ತಜ್ಞರು ಮಾರ್ಗದರ್ಶನ ನೀಡಿದರು. ಶಾಶ್ವತ ಕೃಷಿ ಮತ್ತು ಆತ್ಮನಿರ್ಭರ ಭಾರತದ ದಿಸೆಯಲ್ಲಿ ನ್ಯಾಚುರಲ್ ಫಾರ್ಮಿಂಗ್ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

ಈ ಕಾರ್ಯಾಗಾರದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಗ್ರಾಮೀಣ ಕೃಷಿ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆ ಅಧ್ಯಕ್ಷ ಶ್ರೀ ಬಾಬುರಾವ್ ಸೋಮೂರೆ (ಕಮಲನಗರ್, ಜಿ. ಬೀದರ) ಭಾಗವಹಿಸಿದರು. ಅವರು ಕಮಲನಗರ್ ತಾಲ್ಲೂಕು ಕೃಷಿ ಅಧಿಕಾರಿ ಶತ್ರುಘ್ನ ಮಾರ್ಗದರ್ಶನ ಹಾಗೂ ಶ್ರೀ ಸಾಹೇಬರ ಮಾರ್ಗದರ್ಶನದಲ್ಲಿ ಈ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಹಾಜರಿದ್ದರು. ಕಾರ್ಯಾಗಾರದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡು ವಿವಿಧ ರಾಜ್ಯಗಳ ರೈತರೊಂದಿಗೆ ಸಂವಾದ ನಡೆಸಿದರು.

ಭುಜ್‌ನಲ್ಲಿ ನಡೆದ ಈ ರಾಷ್ಟ್ರೀಯ ಕಾರ್ಯಾಗಾರದಿಂದ ಪ್ರೇರಣೆ ಪಡೆದು ಕಮಲನಗರ್ ತಾಲ್ಲೂಕಿನ ರೈತರಿಗೆ ಶೀಘ್ರದಲ್ಲೇ ಮಾರ್ಗದರ್ಶನ ಶಿಬಿರ, ಪ್ರಾತ್ಯಕ್ಷಿಕೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಶ್ರೀ ಸೋಮೂರೆ ತಿಳಿಸಿದ್ದಾರೆ. ನ್ಯಾಚುರಲ್ ಫಾರ್ಮಿಂಗ್ ಮೂಲಕ ರೈತರ ಆದಾಯ ಹೆಚ್ಚಿಸುವುದು, ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು ಹಾಗೂ ಶಾಶ್ವತ ಕೃಷಿಗೆ ಉತ್ತೇಜನ ನೀಡುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದರು. ರಾಷ್ಟ್ರೀಯ ಮಟ್ಟದ ಈ ಕಾರ್ಯಾಗಾರದಿಂದ ಕಮಲನಗರ್ ತಾಲ್ಲೂಕಿನ ಗೌರವ ಹೆಚ್ಚಿದ್ದು, ಸ್ಥಳೀಯ ರೈತರಲ್ಲಿ ಉತ್ಸಾಹದ ವಾತಾವರಣ ನಿರ್ಮಾಣವಾಗಿದೆ.

# ಅನಧಿಕೃತ ಕೋಚಿಂಗ್ ಸೆಂಟರ್ ಬಂದ್ ಮಾಡಿ




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ,

ಪಟ್ಟಣ ಸೇರಿ ತಾಲೂಕಿನ ವಿವಿಧೆಡೆ ಅನಧಿಕೃತವಾಗಿ ನಡೆಯುತ್ತಿರುವ ಕೋಚಿಂಗ್ ಸೆಂಟರ್‌ಗಳನ್ನು ಬಂದ್ ಮಾಡುವಂತೆ ನಮ್ಮ ಕರ್ನಾಟಕ ಸೇನೆಯ ಜಿಲ್ಲಾ ಘಟಕದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ. ಈ ಕುರಿತು ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ನಮ್ಮ ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಗಣೇಶ ಪಾಟೀಲ್ ನೇತೃತ್ವದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಸರಕಾರದ ಪರುವಾನಿಗೆ ಇಲ್ಲದೇ ಬೇಸಿಗೆ ವಿಶೇಷ ತರಗತಿ ನಡೆಸುವ ಹೆಸರಿನಲ್ಲಿ ರಾಜಾರೋಷವಾಗಿ ಪ್ರತಿವರ್ಷ ಅನಧಿಕೃತ ಕೋಚಿಂಗ್ ಸೆಂಟರ್‌ಗಳ ಹಾವಳಿ ಹೆಚ್ಚುತಲೇ ಇದೆ. ಈಗಾಗಲೇ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಅನಧಿಕೃತ ಕೋಚಿಂಗ್ ಸೆಂಟರ್‌ಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಸೂಚನೆ ನೀಡಿದ್ದಾರೆ.

ಆದರೆ, ತಾಲೂಕಿನಲ್ಲಿ ಇದು ವರೆಗೂ ಅನಧಿಕೃತ ಕೋಚಿಂಗ್ ಸೆಂಟರ್ ವಿರುದ್ಧ ಒಂದು ಕೂಡ ಪ್ರಕರಣ ದಾಖಲಾಗಿಲ್ಲ. ಇದನ್ನು ಗಮನಿಸಿದರೆ ಶಿಕ್ಷಣ ಇ

ಲಾಖೆ ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆ ಎಂಬ ಅನುಮಾನ ವ್ಯಕ್ತವಾಗುತ್ತದೆ. ಬೇಸಿಗೆ ರಜೆ ಆರಂಭಕ್ಕೆ ದಿನಗಣನೇ ಶುರುವಾಗುತ್ತಿದ್ದು, ಈಗಾಗಲೇ ಪರುವಾನಿಗೆ ಇಲ್ಲದ ಕೋಚಿಂಗ್ ಸೆಂಟರ್‌ಗಳು ಬೇಸಿಗೆ ತರಗತಿ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿವೆ. ಕೂಡಲೇ ಶಿಕ್ಷಣ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಅನಧಿಕೃತ ಸೆಂಟರ್‌ಗಳನ್ನು ಬಂದ್ ಮಾಡಿಸಿ ಸಂಬಂಧಿತರ ಎಫ್‌ಐಆರ್ ದಾಖಲಿಸಬೇಕು ಎಂದು ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಪ್ರಮುಖರಾದ ಸುದೀಪ ತೂಗಾವೆ, ಪ್ರಶಾಂತ ಹಣಮಶೆಟ್ಟಿ, ಭದ್ರಯ್ಯ ಸ್ವಾಮಿ, ಜಗದೀಶ ಪಾಟೀಲ್, ರಾಜು ಕುಂಬಾರ, ಮಹೇಶ ರಾಜೋಟೆ, ಸಂಗಮೇಶ ಮಾರ್ಗೆ, ರವಿ ಜವಲಕೋಟ್ ಸೇರಿದಂತೆ ಹಲವರು ಇದ್ದರು.

## ಮಲ್ಲಿಕಾರ್ಜುನ ಮುತ್ತ್ಯಾ ಪರ ಮನವಿ

# ಪೋಕ್ಸೋ ಪ್ರಕರಣ ರದ್ದುಪಡಿಸಲು ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಶ್ರೀ ಮಲ್ಲಿಕಾರ್ಜುನ ಮುತ್ಯಾ ಅವರ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ಮರುಪರಿಶೀಲಿಸಿ, ವಾಸ್ತವಾಂಶಗಳ ಮೇಲೆ ಪರೀಕ್ಷಿಸಬೇಕೆಂದು ಆಗ್ರಹಿಸಿ ತಾಲ್ಲೂಕಿನ ಭಕ್ತಾದಿಗಳು ಹಾಗೂ ಸಮಾಜದ ಬಾಂಧವರು ಮನವಿ ಸಲ್ಲಿಸಿದರು.

ಮನವಿಯನ್ನು ಮುಖ್ಯಮಂತ್ರಿ , ಗೃಹ ಸಚಿವರಿಗೆ ಉದ್ದೇಶಿಸಿ ಭಾಲ್ಕಿ ತಹಸೀಲ್ದಾರ್ ಅವರ ಮುಖಾಂತರ ಸಲ್ಲಿಸಲಾಯಿತು.

ಮನವಿಯಲ್ಲಿ, ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲ್ ರೋಜಾ ಗ್ರಾಮದ ಮಠದ ಪೀಠಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಮುತ್ಯಾ ಅವರು ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಯಾಗಿದ್ದು, ದಾಖಲಾಗಿರುವ ಪೋಕ್ಸೋ ಪ್ರಕರಣವು ಸಂಪೂರ್ಣವಾಗಿ ವಾಸ್ತವಾಂಶಗಳ ಆಧಾರದ ಮೇಲೆ ಮರುಪರಿಶೀಲನೆಗೊಳಪಡಿಸಬೇಕು ಎಂದು ಒತ್ತಾಯಿಸಿ ದರು. ವೈರಲ್ ವಿಡಿಯೋವನ್ನು ವಿಧಿವಿಜ್ಞಾನ ಪ್ರಯೋಗಾಲಯ ಮೂಲಕ ಪರಿಶೀಲಿಸಿ ನೈಜತೆ ಪತ್ತೆಹಚ್ಚಬೇಕು. ಯಾವುದೇ ಅಪರಾಧದ ಅಂಶ ಸಾಬೀತಾಗದಿದ್ದಲ್ಲಿ ಬಿ–ರಿಪೋರ್ಟ್ ಸಲ್ಲಿಸಿ ಪೋಕ್ಸೋ ಪ್ರಕರಣವನ್ನು ರದ್ದುಪಡಿಸಬೇಕು ಎಂದು ಮನವಿಯಲ್ಲಿ ಸ್ಪಷ್ಟವಾಗಿ ಆಗ್ರಹಿಸಲಾಗಿದೆ.

ದುರುದ್ದೇಶಪೂರ್ವಕವಾಗಿ ವಿಡಿಯೋ ತಿರುಚಿ ಹರಡಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮಗುವಿನ ಗೌಪ್ಯತೆಯನ್ನು ಕಾಪಾಡುವ ಕ್ರಮ ಕೈಗೊಳ್ಳಬೇಕು ಎಂಬುದನ್ನೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಸಂದರ್ಭದಲ್ಲಿ ವಿಶ್ವನಾಥ್ ಬೆಳಕಟ್ಟೆ, ಸಂತೋಷ್ ನಾಟೇಕರ್, ಅಶೋಕ್ ಅಂಬಿಗರ್, ಲಾಲಪ್ಪ ಕಂದಗೋಳೆ, ಸಂತೋಷ್ ಜಮಾದಾರ್, ಸಿದ್ದು ಜಮಾದಾರ್, ಧನರಾಜ್ ಹುಗ್ಗೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಭಕ್ತರು ಪ್ರಕರಣದ ಕುರಿತು ನ್ಯಾಯಯುತ ತನಿಖೆ ನಡೆಸಿ ಸತ್ಯಾಸತ್ಯತೆ ಹೊರತಂದು, ನಿರಪರಾಧಿಯ ಮಾನಹಾನಿ ತಪ್ಪಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

# ಬಿಜೆಪಿಗೆ ಅಶೋಕ ಕುಮಾರ ಸೇರ್ಪಡೆ




• ಮಲ್ಲಮ್ಮ ನುಡಿ ವಾರ್ತೆ ಬೀದರ

ಭಾರತೀಯ ಜನತಾ ಪಕ್ಷ ವತಿಯಿಂದ ಆಯೋಜಿಸಲಾದ ಪಂಡಿತ ದಿನ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನ 2026 ಜಿಲ್ಲಾ ಮಟ್ಟದ ಯೋಜನಾ ಸಭೆ ಹಾಗೂ ಕಾರ್ಯಕಾರಿಣಿ ಸಭೆ ನಗರದ ನೌಬಾದ ಬಿಜೆಪಿ ಕಚೇರಿಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಹಾಗೂ ಜಗತಗುರು ರೇಣುಕಾಚಾರಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಲಾಯಿತು.

ಜಿಲ್ಲಾ ಮಟ್ಟದ ಯೋಜನಾ ಸಭೆ ಹಾಗೂ ಕಾರ್ಯಕಾರಿಣಿ ಸಭೆಯಲ್ಲಿ ಹಿರಿಯ ಮುಖಂಡರು ಹಾಗೂ ಮಾಜಿ ಸೈನಿಕರಾದ ಅಶೋಕ ಕುಮಾರ ಕರಂಜಿ ಅವರು ಇಂದು ಬಿಜೆಪಿ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಮುಖ್ಯ ಸಚೇತಕರಾದ ಎನ್. ರವಿಕುಮಾರ್, ರಾಜ್ಯ ಕಾರ್ಯದರ್ಶಿ ಹಾಗೂ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾ ಅಧ್ಯಕ್ಷರಾದ ಸೋಮನಾಥ ಪಾಟೀಲ್, ಕೇಂದ್ರದ ಮಾಜಿ ಸಂಸದ ಭಗವಂತ ಖೂಬಾ, ಬಸವಕಲ್ಯಾಣ ಶಾಸಕರಾದ ಶರಣು ಸಲಗರ, ಔರಾದ್ (ಬಿ) ಶಾಸಕರಾದ ಪ್ರಭು ಚೌವಾಣ್, ಹುಮನಾಬಾದ್ ಶಾಸಕರಾದ ಸಿದ್ದು ಪಾಟೀಲ್, ಮಾಜಿ ಶಾಸಕ ಪ್ರಕಾಶ್ ಖಂಡ್ರೆ ,ಗುಂಡಪ್ಪ ವಕೀಲ, ಇಸವಸಿರ್ಂಗ ಠಾಕೂರ್, ಜಯಕುಮಾರ್ ಕಾಂಗೆ, ಶಕುಂತಲ ಬೆಲ್ದಾಳೆ, ಶಿವಂದ ಮಂಠಾಳಕರ್, ಪೀರಪ್ಪ ಔರಾದೆ, ಕಿರಣ ಪಾಟೀಲ್ ,ಶ್ರೀನಿವಾಸ ಚೌದ್ರಿ ಸೇರಿದಂತೆ ಬಿಜೆಪಿ ಪ್ರಮುಖ ಮುಖಂಡರು ಹಾಗೂ ಜಿಲ್ಲೆಯ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಭೆಯಲ್ಲಿ ಪಕ್ಷದ ಸಂಘಟನೆ ಬಲಪಡಿಸುವುದು, 2026ರ ಅಭಿಯಾನ ಯಶಸ್ವಿಗೊಳಿಸುವುದು ಹಾಗೂ ಕಾರ್ಯಕರ್ತರ ಪಾತ್ರ ಕುರಿತು ಚರ್ಚೆ ನಡೆಯಿತು.

# ದೇಶದ ಅಭಿವೃದ್ಧಿಯಲ್ಲಿ ವೈಜ್ಞಾನಿಗಳ ಕೊಡುಗೆ ಅಪಾರ: ಗುಂಡಪ್ಪ ಹುಡಗೆ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ದೇಶದ ಅಭಿವೃದ್ಧಿಯಲ್ಲಿ ವೈಜ್ಞಾನಿಗಳ ಕೊಡುಗೆ ಅಪಾರವಾಗಿದೆ ಎಂದು ಗುಂಡಪ್ಪ ಹುಡುಗೆ ತಾಲೂಕಿನ ನಿರ್ಣಾ ಗ್ರಾಮದ ಸರ್ಕಾರಿ ಕನ್ಯಾ ಪ್ರೌಢ ಶಾಲೆಯಲ್ಲಿ ರಾಷ್ಟ್ರೀಯ ಹಸಿರು ಪಡೆ ಯೋಜನೆ ಅಡಿಯಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ದಿನಾಚರಣೆ ಹಾಗೂ ಪರಿಸರ ಸಂರಕ್ಷಣೆ ಜನಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಪರಿಸರ ಸಮತೋಲನ ಕಾಪಾಡಲು ಪ್ರತಿಯೊಬ್ಬರು ಮರ ಗಿಡ ಬೆಳೆಸಿ ಉಳಿಸಬೇಕೆಂದು ತಿಳಿಸಿದರು. ಪರಿಸರವಾದಿ ಶೈಲೇಂದ್ರ ಕಾವಡಿ ಮಾತನಾಡಿ, ಈ ವರ್ಷದ ವಿಶ್ವ ಪರಿಸರ ದಿನಾಚರಣೆಯ ಘೋಷ ವಾಕ್ಯವಾದ ಪ್ಲಾಸ್ಟಿಕ್ ಮಾಲಿನ್ಯ

ಹೋಗಲಾಡಿಸಿ ಪ್ರತಿಯೊಬ್ಬರು ಕಡ್ಡಾಯವಾಗಿ ಈ ಘೋಷವಾಕ್ಯವನ್ನು ಕೃತಿಯಲ್ಲಿ ತರಲು ತಮ್ಮ ತಮ್ಮ ಮನೆಯಲ್ಲಿ ಪ್ಲಾಸ್ಟಿಕ್ ನಿಷೇಧಿಸುವ ಸಂಕಲ್ಪ ವಿದ್ಯಾರ್ಥಿಗಳು ಮಾಡಬೇಕೆಂದು ತಿಳಿಸಿದರು. ಪ್ರತಿ ವರ್ಷ ಎರಡು 220 ಕೋಟಿ ಟನ್ ಪ್ಲಾಸ್ಟಿಕ್ ತಾಜ್ಯ ಉತ್ಪತ್ತಿಯಾಗುತ್ತಿದೆ, ಇದ–ರಿಂದ ಜಲ ಮಾಲಿನ್ಯ, ಮಣ್ಣಿನ ಮಾಲಿನ್ಯವಾಗುತ್ತಿದೆ ಎಂದು ತಿಳಿಸಿದರು.

ಪತ್ರಕರ್ತರ ರಾಜಕುಮಾರ್ ಆರ್. ಹಡಪದ ಮಾತನಾಡಿ, ರಾಷ್ಟ್ರೀಯ ಹಸಿರು ಪಡೆ ಯೋಜನೆ ಪರಿಸರ ಅರಿವು ಒಡ ಮೂಡಿಸಲು ತುಂಬಾ ಸಹಾಯವಾಗಿದೆ ಎಂದರು. ಡಾ. ರವಿ ಸ್ವಾಮಿ ನಿರ್ಣಾ ಮಾತನಾಡಿ, ಈ ವರ್ಷದ 10ನೇ ತರಗತಿಗ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದವರಿಗೆ 5000 ರೂಪಾಯಿ ಕೊಡುವುದಾಗಿ ಘೋಷಣೆ ಮಾಡಿದರು. ಶಾಲೆಯ ಮುಖ್ಯ ಶಿಕ್ಷಕಿ ಸರುಬಾಯಿ ಪವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಶಾಲೆ ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಿದ್ದೇವೆ. ಹಾಗೂ ವಿಜ್ಞಾನ ತಂತ್ರಜ್ಞಾನ ಅರಿವು ಒಡ ಮೂಡಿಸಲು ನಮ್ಮ ಶಾಲೆಯ ಶಿಕ್ಷಕರು ಶ್ರಮಿಸುತ್ತಿದ್ದಾರೆ ಎಂದರು. ವಿಜ್ಞಾನ ಶಿಕ್ಷಕ ಮಲ್ಲಪ್ಪ ಅವರು ವಿಜ್ಞಾನ ದಿನಾಚರಣೆ ಬಗ್ಗೆ ಸುದೀರ್ಘವಾಗಿ ಮಾತನಾಡಿದರು.

ವಿದ್ಯಾರ್ಥಿಗಳಿಂದ ಕಿರು ನಾಟಕಗಳು ಪ್ರದರ್ಶನ ಮಾಡಲಾಯಿತು. ಪ್ರಬಂಧ, ಚಿತ್ರಕಲಾ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರಾದ ಸುರೇಖಾ, ಮೌನೇಶ್ವರಿ, ಆಶಾರಾಣಿ, ಸುನೀತಾ,

ವಿಜ್ಞಾನ ಶಿಕ್ಷಕಿ ಭವ್ಯ ನಿರೂಪಿಸಿದರು. ದೈಹಿಕ ಶಿಕ್ಷಕ ಜೈಪಾಲ ರೆಡ್ಡಿ ಕೊನೆಯಲ್ಲಿ ವಂದಿಸಿದರು. ಶಾಲೆ ಸಿಬ್ಬಂದಿ ವರ್ಗ ಸೇರಿದಂತೆ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ಸಕ್ಕರೆ ಕಾರ್ಖಾನೆಗಳಲ್ಲಿ ಸಿಡಿಓಗಳ ದರ್ಬಾರ ನಿಲ್ಲಬೇಕು

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ರೈತರ ಬದುಕಿಗೆ ಆಧಾರವಾಗಿವೆ. ಕಬ್ಬು ಬೆಳೆದ ರೈತರು ತಮ್ಮ ಉತ್ಪನ್ನವನ್ನು ಕಾರ್ಖಾನೆಗಳಿಗೆ ನೀಡುವ ಮೂಲಕ ಬದುಕು ಸಾಗಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳಲ್ಲಿ ಮಾಲೀಕರಿಗಿಂತಲೂ ಸಿಡಿಓಗಳ (ಆುಜಜಿ ಆಜತಜಟಠಿಟಜಟಣ ಔಜಿಜಿಛಿಜಡಿ) ದರ್ಬಾರ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಈ ಪ್ರವೃತ್ತಿ ರೈತರ ಹಿತಕ್ಕೂ, ಕಾರ್ಖಾನೆಗಳ ಅಭಿವೃದ್ಧಿಗೂ ಹಾನಿಕಾರಕವಾಗಿದೆ.

ಸಿಡಿಓಗಳ ಮುಖ್ಯ ಕರ್ತವ್ಯ ಕಾರ್ಖಾನೆಯ ಅಭಿವೃದ್ಧಿ, ರೈತರೊಂದಿಗೆ ಸಮನ್ವಯ ಮತ್ತು ಕಬ್ಬು ಸರಬರಾಜು ವ್ಯವಸ್ಥೆಯನ್ನು ಸುಗಮಗೊಳಿಸುವುದಾಗಿದೆ. ಆದರೆ ಕೆಲವು ಕಡೆಗಳಲ್ಲಿ ಅಧಿಕಾರ ದುರುಪಯೋಗವಾಗುತ್ತಿರುವ ಬಗ್ಗೆ ರೈತರ ನಡುವೆ ಅಸಮಾಧಾನ ವ್ಯಕ್ತವಾಗುತ್ತಿದೆ. ರೈತರ ಸಮಸ್ಯೆಗಳನ್ನು ಪರಿಹರಿಸುವ ಬದಲು, ಅಧಿಕಾರದ ಪ್ರಭಾವ ತೋರಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ವಿಷಾದಕರ ಸಂಗತಿ.

ಕಬ್ಬು ಕಟಾವು, ಸಾಗಣೆ ವ್ಯವಸ್ಥೆ, ಬಿಲ್ ಪಾವತಿ ಸೇರಿದಂತೆ ಹಲವು ವಿಷಯಗಳಲ್ಲಿ ಸಿಡಿಓಗಳ ನಿರ್ಧಾರಗಳು ರೈತರ ಬದುಕಿನ ಮೇಲೆ ನೇರ ಪರಿಣಾಮ ಬೀರುತ್ತವೆ. ಆದ್ದರಿಂದ ಈ ಹುದ್ದೆಯಲ್ಲಿ ಇರುವವರು ರೈತರೊಂದಿಗೆ ಸಹಾನುಭೂತಿ ಹಾಗೂ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಅತ್ಯಗತ್ಯ. ಆದರೆ ಕೆಲವು ಕಾರ್ಖಾನೆಗಳಲ್ಲಿ ರೈತರ ಮಾತಿಗೆ ಮೌಲ್ಯ ನೀಡದೆ ಏಕಪಕ್ಷೀಯ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಸಕ್ಕರೆ ಕಾರ್ಖಾನೆಗಳು ರೈತರ ಸಹಕಾರದಿಂದಲೇ ನಡೆಯುವ ಸಂಸ್ಥೆಗಳು. ರೈತರು ಸಂತೋಷವಾಗಿದ್ದರೆ ಮಾತ್ರ ಕಾರ್ಖಾನೆಗಳು ಸುಗಮವಾಗಿ ಕಾರ್ಯನಿರ್ವಹಿಸಬಹುದು. ಆದ್ದರಿಂದ ಕಾರ್ಖಾನೆಗಳ ಆಡಳಿತದಲ್ಲಿ ಪಾರದರ್ಶಕತೆ ಇರಬೇಕು. ಸಿಡಿಓಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದೆ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು.

ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸಕ್ಕರೆ ಕಾರ್ಖಾನೆಗಳ ಕಾರ್ಯವೈಖರಿಯನ್ನು ಪರಿಶೀಲಿಸುವುದು ಅಗತ್ಯವಾಗಿದೆ. ರೈತರಿಗೆ ಅನ್ಯಾಯವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸಿಡಿಓಗಳ ದರ್ಬಾರ ನಿಲ್ಲಿಸಿ, ರೈತಪರ ಆಡಳಿತಕ್ಕೆ ಆದ್ಯತೆ ನೀಡಿದಾಗ ಮಾತ್ರ ಸಕ್ಕರೆ ಕಾರ್ಖಾನೆಗಳು ನಿಜವಾದ ಅರ್ಥದಲ್ಲಿ ಅಭಿವೃದ್ಧಿಯ ದಾರಿಗೆ ಸಾಗಲಿವೆ.

# ಅನನ್ಯ ಸೇವೆಗಾಗಿ ಸಿಎಂ ಪದಕಕ್ಕೆ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆ ವಡಗೇರಾ

ತಾಲ್ಲೂಕಿನ ಬೆಂಡ ಬೆಂಬಳಿ ಗ್ರಾಮದ ವೀರಭದ್ರಪ್ಪ ಸಜ್ಜನ ಹಾಗೂ ಮಲ್ಲಮ್ಮ ಸಜ್ಜನ ದಂಪತಿಯ ಮಕ್ಕಳಾದ ಮಲ್ಲಿಕಾರ್ಜುನ ಸಜ್ಜನ ಮತ್ತು ಪ್ರಭು ಸಜ್ಜನ ಎಂಬ ಇಬ್ಬರು ಸಹೋದರರು ಕರ್ನಾಟಕ ಕಾರಾಗೃಹ ಸೇವೆಯಲ್ಲಿ ಅನನ್ಯ ಸೇವೆ ಸಲ್ಲಿಸಿದ್ದಕ್ಕಾಗಿ 2025 ಸಾಲಿನ ಮುಖ್ಯಮಂತ್ರಿಗಳ ಪದಕಕ್ಕೆ ಅಯ್ಕೆಯಾಗಿರುವುದು ತಾಲ್ಲೂಕಿನ ವ್ಯಾಪ್ತಿಯ ಜನರಲ್ಲಿ ಹರ್ಷವನ್ನುಂಟು ಮಾಡಿದೆ.

ಬಡ ಕುಟುಂಬದ ವೀರಭದ್ರಪ್ಪ ಸಜ್ಜನ ಅವರಿಗೆ ನಾಲ್ವರು ಪುತ್ರರು. ಇವರಲ್ಲಿ ಮಲ್ಲಿಕಾರ್ಜುನ ಮತ್ತು ಪ್ರಭು ಅವರು ಕರ್ನಾಟಕ ಕಾರಾಗೃಹ ಸೇವೆಯಲ್ಲಿ, ಸೋಮಶೇಖರ ಮತ್ತು ಬೂದೇಣ್ಣ ಸಜ್ಜನ್ ಅವರು ನಾಗರಿಕ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಒಂದೇ ಮನೆಯ ನಾಲ್ಕು ಜನ ಅಣ್ಣ ತಮ್ಮರು ಖಾಕಿ ಧರಿಸಿ ಕಾರ್ಯನಿರ್ವಹಿಸುತ್ತಿರುವುದು ವಿಶೇಶ.

ಮಲ್ಲಿಕಾರ್ಜುನ ಸಜ್ಜನ್ ಸಹೋದರರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಬೆಂಡೆ ಬಂಬಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿ ಮುಂದೆ ಉನ್ನತ ಶಿಕ್ಷಣಕ್ಕಾಗಿ ವೆಂಕಟರೆಡ್ಡಿ ಎಸ್. ಗಿರಣಿ ಅವರ ಮಾರ್ಗದರ್ಶನದಲ್ಲಿ ಸುರಪುರದ ಬಸವೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ವ್ಯಾಸಂಗ ಮಾಡಿ ಇಂದು

ಸರ್ಕಾರಿ ನೌಕರಿಯಲ್ಲಿದ್ದಾರೆ. ಮನೆಗೆ ಹಿರಿಯಣ್ಣನ ಸ್ಥಾನದಲ್ಲಿ ನಿಂತು ತಂದೆ ತಾಯಿ ಪಡುವ ಕಷ್ಟವನ್ನು ನೋಡದೆ ಹಗಲಿರಳು ಶ್ರಮವಹಿಸಿ ಮಲ್ಲಿಕಾರ್ಜುನ ಸಜ್ಜನ್ ವಿಶ್ವರಾಧ್ಯ ಡಿ.ಇಡಿ ಕಾಲೇಜಿನಲ್ಲಿ ಶಿಕ್ಷಕರ ತರಬೇತಿಯನ್ನು ಪಡೆದು 2009ನೇ ಸಾಲಿನಲ್ಲಿ ಶೇ.93 ರಷ್ಟು ಅಂಕ ಪಡೆದು ರಾಜ್ಯಕ್ಕೆ ಎರಡನೇ ಸ್ಥಾನ ಪಡೆದುಕೊಂಡರು.

ಶಿಕ್ಷಕನಾಗಬೇಕೆಂದು ಕನಸು ಕಂಡಿದ್ದ ಇವರು ಶಿಕ್ಷಕರ ನೇಮಕಾತಿ ಆಗದೇ ಇರುವುದರಿಂದ ಇವರ ತಮ್ಮನಾದ ಪ್ರಭು ಸಜ್ಜನ್ ರವರ ಜೊತೆ ಸೇರಿಕೊಂಡು 2012ರಲ್ಲಿ ಕರ್ನಾಟಕ ರಾಜ್ಯ ಕಾರಾಗೃಹ ಸೇವೆಗೆ ಸೇರಿಕೊಂಡು ಜಿಲ್ಲಾ ಕಾರಾಗೃಹ ರಾಯಚೂರಿನಲ್ಲಿ ಒಂದೇ ಸ್ಥಳಕ್ಕೆ ಇಬ್ಬರು ಅಣ್ಣತಮ್ಮಂದಿರು ಸೇವೆಗೆ ಸೇರಿಕೊಂಡು ಒಂದೇ ತರಬೇತಿ ಶಾಲೆಯಲ್ಲಿ ತರಬೇತಿಯನ್ನು ಪಡೆದು ಮುಂದೆ 2025ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಇಬ್ಬರ ಸಹೋದರರು ಒಂದೇ ಆದೇಶ ಮತ್ತು ಸಮಯಕ್ಕೆ ಇಬ್ಬರೂ ಭಾಜನರಾಗಿದ್ದಾರೆ.

ಇವರ ಇನ್ನಿಬ್ಬರು ಸಹೊದರರಾದ ಸೋಮಶೇಖರ ಸಜ್ಜನ್ ಅವರು ಹುಮನಾಬಾದ ಪೊಲೀಸ್ ಠಾಣೆಯಲ್ಲಿ ಹಾಗೂ ಬೂದಣ್ಣ ಸಜ್ಜನ ಅವರು ಯಾದಗಿರಿ ಡಿವೈಎಸ್‌ಪಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತಿದ್ದಾರೆ. ಇವರಿಬ್ಬರು ಸಹ ಏಕಕಾಲಕ್ಕೆ ಪೊಲೀಸ್ ಹುದ್ದೆಗೆ ಆಯ್ಕೆಯಾಗಿದ್ದಾರೆ. ಮಲ್ಲಿಕಾರ್ಜುನ ಸಜ್ಜನ್‌ರವರು ತಾವು ಓದುವ ಸಮಯದಲ್ಲಿ ಅನೇಕ ಸ್ಪರ್ದಾತ್ಮಕ ತರಬೇತಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಿ ಸುಮಾರು 70ಕ್ಕೂ ಅಧಿಕ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಇಂದು ಪೊಲೀಸ್ ಸೇವೆಯಲ್ಲಿದ್ದಾರೆ.

ನಿಜಕ್ಕೂ ಬೆಂಡೆಬೆಂಬಳಿ ಎಂಬ ಗ್ರಾಮದಲ್ಲಿ ಜನಿಸಿದ ಸಾಧಕರು ಸಮಾಜಕ್ಕೆ ಹಾಗೂ ಬಡವರಿಗೆ ಯಾವುದೇ ಅಹಿತಕರ ಘಟನೆಯಾದಂತೆ ನೋಡಿಕೊಳ್ಳುವ ಶಕ್ತಿ ಇವರದಾಗಿದೆ. . ಇವರ ಕಾರ್ಯಕ್ಕೆ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಹೀಗೆ ಇವರಿಬ್ಬರಿಗೂ ಮುಖ್ಯಮಂತ್ರಿ ಪದಕವಲ್ಲದೇ ರಾಷ್ಟ್ರಮಟ್ಟದ ರಾಷ್ಟ್ರಪತಿ ಸೇವಾ ಸುಧಾರಣಾ ಪದಕ ಲಭಿಸಲಿ ಎನ್ನುವುದು ತಾಲ್ಲೂಕಿನ ವ್ಯಾಪ್ತಿಯ ಸಾರ್ವಜನಿಕರ ಒತ್ತಾಯವಾಗಿದೆ.

# ಬಾಲ್ಯ ವಿವಾಹ ತಡೆಗೆ ಎಲ್ಲರ ಪಾತ್ರ ಬಹು ಮುಖ್ಯ

• ಮಲ್ಲಮ್ಮ ನುಡಿ ವಾರ್ತೆ
ಕೊಪ್ಪಳ

ಬಾಲ್ಯ ವಿವಾಹವು ಶಿಕ್ಷಾರ್ಹ ಅಪರಾಧವಾಗಿದ್ದು, ಇದರಿಂದ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಹಾಗಾಗಿ ಬಾಲ್ಯ ವಿವಾಹ ತಡೆಗಟ್ಟಲು ಎಲ್ಲರ ಪಾತ್ರ ಬಹು ಮುಖ್ಯವಾಗಿದೆ ಎಂದು ಕೊಪ್ಪಳ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ್ ಅವರು ಹೇಳಿದರು.




ಬಾಲ್ಯ ವಿವಾಹ ಮುಕ್ತ ಭಾರತಕ್ಕಾಗಿ ಹಮ್ಮಿಕೊಂಡಿರುವ 100 ದಿನಗಳ ಅಭಿಯಾನದ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ 1098/112 ಹಾಗೂ ಸ್ಪಂದನ ಆಸೋಶಿಯೇಷನ್ ಇವರುಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ಜಿಲ್ಲಾಡಳಿತ ಭವನದ ಆವರಣದಲ್ಲಿ ಹಮ್ಮಿಕೊಂಡಿದ್ದ ಬಾಲ್ಯವಿವಾಹ ಮುಕ್ತಿ ರಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳ ಬಾಲ್ಯವು ಅತ್ಯಮೂಲ್ಯವಾದದ್ದು, 18 ವರ್ಷದೊಳಗಿನ ಮಕ್ಕಳಲ್ಲಿ ದೈಹಿಕ, ಮಾನಸಿಕ, ಸಾಮಾಜಿಕ, ಬೌದ್ಧಿಕ ಹಾಗೂ ಶಾರೀರಿಕ ಬೆಳವಣಿಗೆಯು ತೀವ್ರವಾಗಿರುತ್ತದೆ. ಈ ಸಂದರ್ಭದಲ್ಲಿ ಮಕ್ಕಳು ಅವರ ಹಕ್ಕುಗಳನ್ನು ಅನುಭವಿಸುವಂತಹ ವಾತಾವರಣ ನಿರ್ಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ. ಅಪ್ರಾಪ್ತ ವಯಸ್ಸಿನಲ್ಲಿ ಮಕ್ಕಳಿಗೆ ವಿವಾಹವನ್ನು ಮಾಡಿದರೆ ಅವರ ಬೆಳವಣಿಗೆ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರುತ್ತದೆ. ಇದಕ್ಕಾಗಿ ಬಾಲ್ಯವಿವಾಹ ನಿಷೇಧ ಕಾಯ್ದೆ-2006 ಮತ್ತು ಕರ್ನಾಟಕ ತಿದ್ದುಪಡಿ-2016ರ ಕಾಯ್ದೆಗಳು ಜಾರಿಯಲ್ಲಿವೆ ಎಂದರು.

ಬಾಲ್ಯ ವಿವಾಹ ಒಂದು ಶಿಕ್ಷಾರ್ಹ ಅಪರಾಧ, ಅದು ಯಾರ ಗಮನಕ್ಕೆ ಬರುತ್ತದೆಯೊ ಅವರು, ಅದನ್ನು ತಡೆಗಟ್ಟುವುದು ಅವರ ಆದ್ಯ ಕರ್ತವ್ಯವಾಗಿದೆ. ಹಾಗಾಗಿ ಬಾಲ್ಯವಿವಾಹವನ್ನು ನೆರವೇರಿಸಿದ, ಪ್ರೋತ್ಸಾಹಿಸಿದ ಮತ್ತು ಪಾಲ್ಗೊಂಡವರಿಗೂ ಸಹ ಜೈಲು ಶಿಕ್ಷೆ ಜೊತೆಗೆ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದ್ದು, ಯಾರು ಸಹ ಬಾಲ್ಯ ವಿವಾಹಗಳಲ್ಲಿ ಭಾಗವಹಿಸಬೇಡಿ ಮತ್ತು ಯಾವುದೇ ರೀತಿಯ ಬಾಲ್ಯವಿವಾಹಗಳಿಗೆ ಅವಕಾಶವನ್ನು ನೀಡಬಾರದು. ಬಾಲ್ಯ ವಿವಾಹ ತಡೆಗಟ್ಟಲು ಸಾರ್ವಜನಿಕರ ಸಹಭಾಗಿತ್ವವೂ ತುಂಬಾ ಅತ್ಯವಶ್ಯಕವಾಗಿದ್ದು, ಜಿಲ್ಲೆಯಾದ್ಯಂತ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಕುರಿತು ಜನ ಸಮುದಾಯದಲ್ಲಿ ಅರಿವು ಮೂಡಿಸಬೇಕೆಂದು ಹೇಳಿದರು.

ಬೆಳಗಾವಿಯ ಸ್ಪಂದನ ಆಸೋಶಿಯೇಷನ್ ಸಂಸ್ಥೆಯ ಕಾರ್ಯದರ್ಶಿ ವಿ.ಸುಶೀಲಾ ಅವರು ಮಾತನಾಡಿ, 2024ರ ನವೆಂಬರ್ 27 ರಂದು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಸಚಿವಾಲಯವು 'ಬಾಲ್ಯ ವಿವಾಹ ಮುಕ್ತ ಭಾರತ' ಎಂಬ ಅಭಿಯಾನವನ್ನು ಪ್ರಾರಂಭಿಸಿದ್ದು, ಇದರಿಂದ ಬಾಲ್ಯ ವಿವಾಹಗಳ ಸಂಖ್ಯೆ ತುಂಬಾ ಕಡಿಮೆಯಾಗುತ್ತಾ ಬಂದಿದೆ. 2030ಕ್ಕೆ ಬಾಲ್ಯ ವಿವಾಹ ಮುಕ್ತ ಸಮಾಜ ನಿರ್ಮಾಣ ಮಾಡಬೇಕು. ಬಾಲ್ಯ ವಿವಾಹ ಕುರಿತು ಗ್ರಾಮೀಣ ಪ್ರದೇಶದ ಜನರಿಗೆ ಅರಿವು ಮೂಡಿಸಬೇಕು ಎಂಬ ಮುಖ್ಯ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಅಧಿಕಾರಿಗಳು, ಮಕ್ಕಳು, ಸಾರ್ವಜನಿಕರು ಪ್ರತಿಯೊಬ್ಬರು ಸೇರಿ ಬಾಲ್ಯ ವಿವಾಹ ಮುಕ್ತ ಮಾಡುವಲ್ಲಿ ಕೈಜೋಡಿಸಬೇಕು. ಬಾಲ್ಯವಿವಾಹ ಮುಕ್ತ ರಥ ವಾಹನವು ಕೊಪ್ಪಳ ಜಿಲ್ಯಾದಂತ ಒಂದು ವಾರ ಸಂಚಾರಿಸಲಿದ್ದು ಸುಮಾರು 50 ರಿಂದ 60 ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲಿದೆ ಎಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ್ ಕುಮಾರ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಟಿ. ಕೃಷ್ಣಮೂರ್ತಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ

ಮಹಾಂತಸ್ವಾಮಿ ಪೂಜಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ ಜಾಬಗೌಡರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ವಿ.ಬಿ ಅಂಗಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಪಂದನ ಸಂಸ್ಥೆಯ ಸಿಬ್ಬಂದಿಗಳು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಲ್ಲಿಕಾರ್ಜುನ ಮುತ್ತ್ಯಾ ಮೇಲಿನ ಪೋಕ್ಸೊ ಪ್ರಕರಣ ಹಿಂಪಡೆಯಲು ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ
ಬೀದರ

ಯಾದಗಿರಿ ಜಿಲ್ಲೆಯ ಮಹಲ್‌ರೋಜಾ ಮಠದ ಪೀಠಾಧಿಪತಿ ಮಲ್ಲಿಕಾರ್ಜುನ ಮುತ್ಯಾ ಅವರ ಮೇಲೆ ದಾಖಲಾಗಿರುವ ಪೋಕ್ಸೊ ಪ್ರಕರಣವನ್ನು ತಕ್ಷಣ ಹಿಂಪಡೆಯುವಂತೆ ಬೀದರ ಜಿಲ್ಲಾ ಟೋಕರಿಕೋಳಿ ಸಮಾಜ ಸಂಘ ಒತ್ತಾಯಿಸಿದೆ.



ಸಂಘದ ಪ್ರಧಾನ ಕಾರ್ಯದರ್ಶಿ ಮಾರುತಿ ಮಾಸ್ತರ್ ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ ರಾಜ್ಯ ಹಾಗೂ ಅಂತರರಾಜ್ಯಗಳಿಂದ ಭಕ್ತರನ್ನು ಹೊಂದಿರುವ ಮಹಲ್‌ರೋಜಾ ಮಠಕ್ಕೆ ಅನೇಕರು ಭೇಟಿ ನೀಡಿ ಆಶೀರ್ವಾದ ಪಡೆಯುತ್ತಾರೆ. ಇತ್ತೀಚೆಗೆ ಜಾಲತಾಣದಲ್ಲಿ ಹರಿದಾಡಿದ ವಿಡಿಯೋ ಆಧರಿಸಿ, ಯಾವುದೇ ಸಮಗ್ರ ತನಿಖೆ ನಡೆಸದೇ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗವು ಸ್ವಯಂ ಪ್ರೇರಿತವಾಗಿ ಪೋಕ್ಸೊ ಪ್ರಕರಣ ದಾಖಲಿಸಿರುವುದು ಸರಿಯಲ್ಲ ಎಂದು ಅವರು ಆರೋಪಿಸಿದ್ದಾರೆ.

ಘಟನೆಯ ಸಂದರ್ಭದಲ್ಲಿ ಮಗುವಿನ ಕುಟುಂಬದ ಸದಸ್ಯರು ಹಾಗೂ ಭಕ್ತರು ಉಪಸ್ಥಿತರಿದ್ದರೆಂದು ತಿಳಿಸಿರುವ ಸಂಘ, ಸಾಮಾಜಿಕ ಜಾಲತಾಣದಲ್ಲಿ ವಿಡಿಯೋವನ್ನು ತಪ್ಪಾಗಿ ಹರಿದಾಡಿದ್ದು, ಸಂಬಂಧಪಟ್ಟವರಿಂದ ಸಮಗ್ರ ವಿಚಾರಣೆ ನಡೆಸಬೇಕಾಗಿತ್ತು ಎಂದು ಹೇಳಿದೆ.

ಸಂಘವು ರಾಜ್ಯದ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರಿಗೆ ಮನವಿ ಸಲ್ಲಿಸಿದ್ದು, ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ರದ್ದುಪಡಿಸಬೇಕು ಹಾಗೂ ತಪ್ಪು ಮಾಹಿತಿ ಹರಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಮಕ್ಕಳ ಹಕ್ಕುಗಳ ಆಯೋಗದ ಕ್ರಮದ ಕುರಿತೂ ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ.

ಒಂದು ವೇಳೆ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಧರಣಿ, ಸತ್ಯಾಗ್ರಹ ಸೇರಿದಂತೆ ಹೋರಾಟಗಳನ್ನು ನಡೆಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಸಂಘದ ಉಪಾಧ್ಯಕ್ಷ ಸುನೀಲ ಖಾಸೆಂಪೂರ, ಹಿರಿಯ ಮುಖಂಡರಾದ ನಂದಕುಮಾರ ಜಂಬಗಿಕರ್, ಅಶೋಕ ಜಮಾದರ, ಬಸವರಾಜ ಖಾಶೆಂಪೂರ, ಸುನೀಲ ಭಾವಿಕಟ್ಟಿ, ಶರಣಪ್ಪ ಖಾಶೆಂಪೂರ, ಅನೀಲ ಐಸಪೂರ, ಪಂಡರಿ ನೇಳಗಿ, ಶಿವಕುಮಾರ ಹಾಲಹಳ್ಳಿ, ರಾಜು ಜಮಾದರ, ಸಂಜುಕುಮಾರ ಸಿರ್ಸೆ, ಚಂದ್ರಕಾಂತ್ ಹಳ್ಳಿಖೇಡಕರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಜ್ಞಾನ ಪ್ರತಿಜ್ಞಾವಿಧಿ



• ಮಲ್ಲಮ್ಮ ನುಡಿ ವಾರ್ತೆ
ಕಂಪ್ಲಿ

ಪಟ್ಟಣದ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆ ಯಲ್ಲಿ ಪ್ರತಿ ವರ್ಷದಂತೆ ಫೆಬ್ರವರಿ 28 ಶನಿವಾರದಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಿ ಪ್ರತಿಜ್ಞಾವಿಧಿ ಸ್ವೀಕರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ನಿವೇ ದಿತಾ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಗುರುಗಳಾದ ಮರಿಯಪ್ಪ ಹೆಚ್ ಮಾತನಾಡಿ ವಿಜ್ಞಾನ ಹಾಗೂ ನಮ್ಮ ಜೀವನದಲ್ಲಿ ಅದರ ಮಹತ್ವದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು "ರಾಷ್ಟ್ರೀಯ ವಿಜ್ಞಾನ ದಿನ'ದ ಆಚರಣೆಯ ಉದ್ದೇಶವಾಗಿದೆ.

ವಿಜ್ಞಾನ ಹಾಗೂ ನಮ್ಮ ಜೀವನದಲ್ಲಿ ಅದರ ಮಹತ್ವದ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸು ವುದು "ರಾಷ್ಟ್ರೀಯ ವಿಜ್ಞಾನ ದಿನ'ದ ಆಚರಣೆಯ ಉದ್ದೇಶವಾಗಿದೆ. ಉಪನ್ಯಾಸಗಳು, ಚರ್ಚಾಸ್ಪರ್ಧೆಗಳು,

ರಸಪ್ರಶ್ನೆ, ವಸ್ತುಪ್ರದರ್ಶನ – ಹೀಗೆ ಅನೇಕ ಚಟುವಟಿಕೆ "ಗಳನ್ನು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಂದರ್ಭದಲ್ಲಿ ದೇಶದ ವಿವಿಧೆಡೆ ಹಮ್ಮಿಕೊಳ್ಳಲಾಗುತ್ತದೆ. ಪ್ರತೀ ವರ್ಷ ರಾಷ್ಟ್ರೀಯ ವಿಜ್ಞಾನ ದಿನಾಚರಣೆ-ಯ ಚಟುವಟಿಕೆಗಳನ್ನು ಒಂದು ನಿರ್ದಿಷ್ಟ ವಿಷಯದ ಸುತ್ತ ಆಯೋಜಿಸಲಾಗುತ್ತದೆ ಎಂದರು.

ನಂತರ ವಿಜ್ಞಾನ ಸಹಶಿಕ್ಷಕ ಶ್ರೀಮತಿ ಕಾವ್ಯ ಮಾತಾಡಿ ಭಾರತದ ಹೆಮ್ಮೆಯ ವಿಜ್ಞಾನಿ ಸರ್ ಸಿ ವಿ ರಾಮನ್ ಅವರ ಅಪೂರ್ವ ಸಾಧನೆಯ ನೆನಪಿನಲ್ಲಿ ಈ ದಿನವನ್ನು ರಾಷ್ಟ್ರೀಯ ವಿಜ್ಞಾನ ದಿನ ಎಂದು ಗುರುತಿಸಲಾಗಿದೆ. ಅವರು 1928ರ ಫೆಬ್ರವರಿ 28ರಂದು 'ರಾಮನ್ ಇಫೆಕ್ಟ್' ಎಂದೇ ಪ್ರಸಿದ್ಧವಾದ ತಮ್ಮ ಅಧ್ಯಯನದ ವಿವರಗಳನ್ನು ಜಗತ್ತಿಗೆ ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಷ್ಯಾದ ಮೊತ್ತಮೊದಲ ವಿಜ್ಞಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಸಿ ವಿ ರಾಮನ್ ಅವರ ಪೂರ್ಣ ಹೆಸರು ಚಂದ್ರಶೇಖರ ವೆಂಕಟರಾಮನ್ ಇವರು ಜನಿಸಿದ್ದು ತಮಿಳುನಾಡಿನ ತಿರುಚಿನಾಪಳ್ಳಿಯಲ್ಲಿ, 1888ರ ನವೆಂಬರ್ 7ರಂದು. ಅವರ ತಂದೆ ಚಂದ್ರಶೇಖರ ಅಯ್ಯರ್ ಗಣಿತ ಹಾಗೂ ಭೌತವಿಜ್ಞಾನದ ಶಿಕ್ಷಕರಾಗಿದ್ದರು ನಂತರ ನೋಬೆಲ್ ಪ್ರಶಸ್ತಿ ಪಡೆದ ಮತ್ತೋರ್ವ ವಿಜ್ಞಾನಿ ಸುಬ್ರಹ್ಮಣ್ಯಂ ಚಂದ್ರಶೇಖರ್ ಅವರು ಸಿ ವಿ ರಾಮನರ ಸ್ವಂತ ಅಣ್ಣನ ಮಗ ಅಂದಿನ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮ್ಮ ಶಿಕ್ಷಣ ಮುಗಿಸಿದ ರಾಮನ್. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉನ್ನತ ಸ್ಥಾನ ಗಳಿಸುವ ಮೂಲಕ ಕಲ್ಕತ್ತೆಯಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್ ಆಗಿ ನೇಮಕಗೊಂಡರು.

ಸರಕಾರದಲ್ಲಿ ಉನ್ನತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ಅವರಲ್ಲಿ ವಿಜ್ಞಾನದ ಕಡೆಗಿನ ತುಡಿತ ಹಾಗೆಯೇ ಉಳಿದಿತ್ತು. ಅದರ ಪರಿಣಾಮವಾಗಿ ಅವರು ತಮ್ಮ ಹುದ್ದೆಯನ್ನು ತ್ಯಜಿಸಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದರು.

ಮುಂದೆ ಇಂಡಿಯನ್ ಇನ್ಸ್ ಟಿಟ್ಯೂಟ್ ಆಫ್ ಸೈನ್ಸ್ ನಿರ್ದೇಶಕರಾಗಿ ಬೆಂಗಳೂರಿಗೆ ಬಂದವರು ತಮ್ಮ ಕೊನೆಯ ಉಸಿರಿನ ತನಕ ವಿವಿಧ ಸಂಶೋಧನೆಗಳಲ್ಲಿ ಮಗ್ನರಾಗಿದ್ದರು ಎಂದು ತಿಳಿಸಿದರು.

ನಂತರ ಸಹ ಶಿಕ್ಷಕಿ ಅಪ್ರೋಜ್ ವಿಜ್ಞಾನ ಪ್ರತಿಜ್ಞಾವಿಧಿ ಬೋಧಿಸಿ. ನಂತರ ಪ್ರತಿ ತರಗತಿಯಲ್ಲಿ ಸಹ ಶಿಕ್ಷಕ ಶುಭಾಶ್, ಮಹೇಶ್ ಕುಮಾರ್ ವಿಜ್ಞಾನದ ಪ್ರತಿಜ್ಞಾವಿಧಿ ಜೊತೆಗೆ ಮಕ್ಕಳಿಗೆ ವಿಜ್ಞಾನ ಮೌಲ್ಯಗಳನ್ನು ಮನವರಿಕೆ ಮಾಡಿಕೊಟ್ಟರು.

ಈ ಸಂದರ್ಭದಲ್ಲಿ ನಿವೇದಿತಾ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿ ಶ್ರೀ ಕೆ.ರಾಮು ಮುಖ್ಯ ಶಿಕ್ಷಕಿ ಎಂ ಪುಷ್ಪ ಸೇರಿದಂತೆ ಎಲ್ಲಾ ಸಹ ಶಿಕ್ಷಕರು ಶಿಕ್ಷಕಿಯರು ಮಕ್ಕಳು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

# ಮಧ್ಯ ಪೂರ್ವದಲ್ಲಿ ಯುದ್ಧ ಪರಿಸ್ಥಿತಿ: ಸಹಾಯವಾಣಿ ಸಂಪರ್ಕಿಸಿ

• ಮಲ್ಲಮ್ಮ ನುಡಿ ವಾರ್ತೆ
ಕಲಬುರಗಿ

ಮಧ್ಯ ಪ್ರಾಚ್ಯ ಹಾಗೂ ಕೊಲ್ಲಿ ದೇಶಗಳಲ್ಲಿ ಯುದ್ಧ ಸಂಭವಿಸಿದ್ದು, ಅಪಾರ ಪ್ರಮಾಣದ ಸಾವು ನೋವು ಸಂಭವಿಸಿರುವ ಹಿನ್ನಲೆಯಲ್ಲಿ ಜಿಲ್ಲಾ ಮಟ್ಟದಿಂದ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಆರಂಭಿಸಿರುವ ಸಹಾಯವಾಣಿಗಳ ಸಹಾಯ ಪಡೆಯುವಂತೆ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

ಈ ಕುರಿತಂತೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು ಕರ್ನಾಟಕ ಸೇರಿಂದತೆ ಕಲಬುರಗಿಯ ಹಲವರು ಸಿಲುಕಿಕೊಂಡಿರುವ ಮಾಹಿತಿಯಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ಪ್ರಸ್ತುತ ನೆಲೆಸಿರುವ ಕಲಬುರಗಿ ಜಿಲ್ಲೆಯ ನಿವಾಸಿಗಳು ಮತ್ತು ಸಹಾಯದ ಅಗತ್ಯವಿರುವವರು ಆಯಾ ಭಾರತೀಯ ರಾಯಭಾರ ಕಚೇರಿಗಳ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ರಾಯಭಾರ ಕಚೇರಿಗಳೊಂದಿಗೆ ಸಂಪರ್ಕದಲ್ಲಿರಲು ಮತ್ತು ಒಇಂಯ ಸಾರಥಿ ಸಹಾಯತಾ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವಂತೆ ಹಾಗೂ ಸರ್ಕಾರದ ಸೂಚನೆಗಳನ್ನು ಅನುಸರಿಸಲು ವಿನಂತಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಯಾರಾದರೂ ಈ ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿಕೊಂಡಿದಲ್ಲಿ ಅಂತಹವರುಗಳ ಮಾಹಿತಿಯನ್ನು ಸಂಬಂಧಿಸಿದವರು ಜಿಲ್ಲಾ ವಿಪತ್ತು ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ: 08472-278677 ಹಾಗೂ ಪೊಲೀಸ್ ಕಂಟ್ರೋಲ್ ಸಂಖ್ಯೆ: 9480805500, 9480803500, 08472-263604, 228112 ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಜಾಕಾರರಿಗೆ ಸಿಂಹಸ್ವಪ್ನವಾಗಿದ್ದ ಕುಳಗೇರಿ

• ಮಲ್ಲಮ್ಮ ನುಡಿ ವಾರ್ತೆ
ಕಲಬುರಗಿ

ಸ್ವಾತಂತ್ರ್ಯ ಹೋರಾಟಗಾರರು, ಸಹಕಾರಿ ಧುರೀಣರು ಆಗಿದ್ದ ಚನ್ನಬಸಪ್ಪ ಕುಳಗೇರಿ ಅವರು, ರಜಾಕಾರರ ವಿರುದ್ಧ ಹೇಗೆ ಹೋರಾಡಿದರೋ ಅದೇ ರೀತಿ ಸ್ವಜನಪಕ್ಷಪಾತ, ವಂಚನೆ, ಭ್ರಷ್ಟಾಚಾರ, ಕಾಳಸಂತೆ ಮಾರಾಟಗಳ ವಿರುದ್ಧವೂ ಸಿಡಿದೆದ್ದಿದ್ದರು ಎಂದು ಪತ್ರಕರ್ತ-ಲೇಖಕ ಡಾ. ಶಿವರಂಜನ ಸತ್ಯಂಪೇಟೆ ಅಭಿಪ್ರಾಯಪಟ್ಟರು.




ನಗರದ ಎಚ್.ಕೆ.ಇ. ಸೊಸೈಟಿಯ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮಹಿಳಾ ವಿಜ್ಞಾನ, ವಾಣಿಜ್ಯ ಕಾಲೇಜಿನ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರರ ಉಪನ್ಯಾಸ ಮಾಲಿಕೆಯಲ್ಲಿ ಹೈದರಾಬಾದ ಸಂಸ್ಥಾನ ವಿಮೋಚನಾ ಹೋರಾಟಗಾರ ಚನ್ನಬಸಪ್ಪ ಕುಳಗೇರಿ ಕುರಿತು ಮಾತನಾಡಿದ ಅವರು, ಕುಳಗೇರಿಯವರು ಹೈ.ಕ. ಶಿಕ್ಷಣ ಸಂಸ್ಥೆಯ ಬೆಳವಣಿಗೆಗೂ ಕಾರಣರಾಗಿದ್ದರು ಎಂದು ತಿಳಿಸಿದರು.

ನಿಜಾಮ ಅರಸ ಮೀರ್ ಉಸ್ಮಾನ ಅಲಿ ಖಾನ್ ಸಂಸ್ಥಾನದ ರಜಾ-ಕಾರರ ಕಾಟೋ, ಲೂಟೋ, ಬಾಟೋ ವಿರುದ್ಧ ಕ್ವಿಟ್ ಕಾಲೇಜ್, ಟಿಟ್ ಫಾರ್ ಟ್ಯಾಟ್ ಚಳವಳಿ ರೂಪಿಸಿ ಕರ್ನಾಟಕದ ಚಂದ್ರಶೇಖರ ಆಜಾದ್ ಎಂದೇ ಗುರುತಿಸಿಕೊಂಡಿದ್ದರು. ರಜಾ-ಕಾರರಿಗೆ ಸಿಂಹಸ್ವಪ್ನವಾಗಿದ್ದರು ಎಂದು ಆ ಸಂದರ್ಭದ ರೋಚಕ ಇತಿಹಾಸವನ್ನು ವಿವರಿಸಿದರು.

ಮುಖ್ಯ ಅತಿಥಿಯಾಗಿದ್ದ ಅಮರನಾಥ ಪಾಟೀಲ ಕುಳಗೇರಿ ಮಾತನಾಡಿ, ಹೈ.ಕ. ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಮಹಾದೇವಪ್ಪ ರಾಂಪುರೆಯವರ ಸಲಹೆಗಾರರಾಗಿದ್ದ ಜಿ.ಆರ್. ಪಾಟೀಲ, ಸೂರಜ್ ಮಲ್ಲ ಲಾಹೋಟಿ, ಗಂಗಸಿರಿ, ಸಿದ್ದಪ್ಪ ಮರಗೋಳ್, ಭೂಮರೆಡ್ಡಿ, ಹೋಮಿ ಇರಾಣಿ ಮುಂತಾದ ಮುಖ್ಯರಲ್ಲಿ ನಮ್ಮ ತಂದೆ ಚನ್ನಬಸಪ್ಪ ಕುಳಗೇರಿ ಕೂಡ ಒಬ್ಬರಾಗಿದ್ದರು. ವಿ.ಜಿ. ಮಹಿಳಾ ಕಾಲೇಜು, ಮೆಡಿಕಲ್ ಕಾಲೇಜಿನ ವಸತಿ ಗೃಹ ಆರಂಭಿಸಲು ಅವರು ಸಲಹೆ ನೀಡಿದ್ದರು ಎಂಬುದನ್ನು ಸ್ಮರಿಸಿಕೊಂಡರು.

ಮಹಿಳಾ ಕಾಲೇಜಿನ ಸಮನಚಾಲಕರು ಹಾಗೂ ಹೈ.ಕ. ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ. ಮಹಾದೇವಪ್ಪ ರಾಂಪುರೆ ಅಧ್ಯಕ್ಷತೆ ವಹಿಸಿದ್ದರು. ಆಡಳಿತ ಮಂಡಳಿ ಸದಸ್ಯ ನಾಗಣ್ಣ ಎಸ್. ಘಂಟಿ ವೇದಿಕೆಯಲ್ಲಿದ್ದರು.

ಪ್ರಾಚಾರ್ಯರಾದ ಎನ್.ಜಿ. ಪಾಟೀಲ ಸ್ವಾಗತಿಸಿದರು. ಡಾ. ಮಹೇಶ ಗಂವ್ಹಾರ ಪ್ರಾಸ್ತಾವಿಕ ಮಾತನಾಡಿದರು. ಕವಿತಾ ಸಾವಳಗಿ ನಿರೂಪಿಸಿದರು. ಶರಣಪ್ರಕಾಶ ಆಲೂರ ವಂದಿಸಿದರು. ಅಕ್ಷರಾ ಜೋಶಿ ಮತ್ತು ಮಾನ್ಯತಾ ಪ್ರಾರ್ಥನೆಗೀತೆ ಹಾಡಿದರು.

## ಸಿಲಿಂಡರ್ ಸ್ಫೋಟಕ್ಕೆ ಧರೆಗುರುಳಿದ ಮನೆ

# ಸಮಯ ಪ್ರಜ್ಞೆಯಿಂದ ಪಾರಾದ ಕುಟುಂಬಸ್ಥರು

• ಮಲ್ಲಮ್ಮ ನುಡಿ ವಾರ್ತೆ
ತೋರಣಗಲ್ಲು.

ಮನೆಯೊಂದರಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ದೊಡ್ಡ ಮನೆಯೇ ಕುಸಿದು ಬಿದ್ದು ಹಲವು ಸೊತ್ತುಗಳಿಗೆ ಹಾನಿಗೀಡಾದ ಘಟನೆ ಸಮೀಪದ ವಡ್ಡು ತಾಳೂರು ಗ್ರಾಮದಲ್ಲಿ ಸೋಮವಾರ ಬೆಳಗ್ಗೆ 10.30ರ ಸುಮಾರಿಗೆ ನಡೆದಿದೆ. ಸ್ಫೋಟದ ತಿವ್ರತೆಗೆ ಇತ್ತಿಚೆಗೆ ನಿರ್ಮಾಣಗೊಂಡ ಮನೆಯೇ ಚಿದ್ರ, ಲಕ್ಷಾಂತರ ರೂಪಾಯಿ ಹಾನಿ.




ಸ್ಫೋಟಕ್ಕೆ ಮನೆಯೇ ಧರೆಗುರುಳಿದರು ಸಮಯಪ್ರಜ್ಞೆಯಿಂದ ಕುಟುಂಬಸ್ಥರು ಮನೆಯಿಂದ ಹೊರಗೆ ಬಂದು ನಂತರ ಸ್ಫೋಟ ಸಂಭವಿಸಿದೆ ಅದೃಷ್ಟವಶಾತ್ ಮನೆಯ ಯಾರಿಗೂ ಏನೂ ಆಗಿಲ್ಲ ಎಂದು ತಿಳಿದುಬಂದಿದೆ. ಗ್ರಾಮದ ಸುಭಾನ್ ಸಾಬ್ ಎಂಬುವವರು ಇಂದು ತುಂಬಿದ್ದ ಸಿಲಿಂಡರ್ ರನ್ನು ರೇಗುಲೇಟರ್ ಗೆ ಜೋಡಿಸುವ ಸಂದರ್ಭ ಪೀನ್ ಪೋರ್ಸ್ಗೆ ಗ್ಯಾಸ್ ಲೀಕ್ ಆಗಿದ್ದು ಸ್ಫೋಟಕ್ಕೆ ಕಾರಣ ಎಂದು ತಿಳಿದುಬಂದಿದೆ. ಸಿಲಿಂಡರ್ ಸ್ಫೋಟದ ಸದ್ದಿಗೆ ಅಕ್ಕಪಕ್ಕದ ಮನೆಯವರು ದಿಗ್ಭ್ರಾಂತರಾಗಿದ್ದು ಪಕ್ಕದ ಮನೆ ಮಾಬುಸಾಬ್ ಹಾಗೂ ಆಸೀಪ್ ಎಂಬುವವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಸಮೀಪದ ಜಿಂದಾಲ್ ಸಂಜೀವಿನಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಘಟನೆ ಸಂಬಂಧ ಸ್ಥಳಕ್ಕೆ ತೋರಣಗಲ್ಲು ಠಾಣೆ ಪಿಎ ರೇವಣಸಿದ್ದಪ್ಪ ಬೇಟಿ ನೀಡಿ ಪರಿಶೀಲನೆ ನಡೆಸಿದ್ದು ಕುಟುಂಬಸ್ಥರೊಂದಿಗೆ ಮಾಹಿತಿ ಪಡೆದು ಪ್ರಕರಣ ದಾಖಲು ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

# ದೊಡ್ಡ ಬಸವೇಶ್ವರ ಸ್ವಾಮಿಯ ಮಹಾರಥೋತ್ಸವ

• ಮಲ್ಲಮ್ಮ ನುಡಿ ವಾರ್ತೆ
ಕುರುಗೋಡು

ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀದೊಡ್ಡಬಸವೇಶ್ವರಸ್ವಾಮಿಯ ಮಹಾರಥೋತ್ಸವವು ಮಾರ್ಚ 3 ರಂದು ಸಹಸ್ರಾರು ಸಂ-ಖ್ಯೆಯ ಭಕ್ತಸಮೂಹದೊಂದಿಗೆ ಚಂದ್ರಗ್ರಹಣ ನಿಮಿತ್ತ ಮಧ್ಯಾಹ್ನ ಜರುಗುವುದು ಎಂದು ಕುರುಗೋಡು ಶ್ರೀದೊಡ್ಡಬಸವೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ ಅವರು ತಿಳಿಸಿದ್ದಾರೆ.



ಅವರು ಪಟ್ಟಣದ ದೇವಸ್ಥಾನದ ಕಛೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುರುಗೋಡು ಶ್ರೀದೊಡ್ಡಬಸವೇಶ್ವರಸ್ವಾಮಿ ಜಾತ್ರೆಗೆ ಕರ್ನಾಟಕ ರಾಜ್ಯದಿಂದ ಅಲ್ಲದೆ ಹೊರರಾಜ್ಯದಿಂದಲೂ ನಾಡಿನ ಮೂಲೆ-ಮೂಲೆಗಳಿಂದ ಲಕ್ಷಾಂತರ ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ. ಇದಕ್ಕಾಗಿ ದೇವಸ್ಥಾನ ಆಡಳಿತ ಮಂಡಳಿ ವತಿಯಿಂದ ಸಕಲಸಿದ್ದತೆ, ಕುರುಗೋಡು ಪುರಸಭೆ ಹಾಗು ಕುರುಗೋಡು ಪೋಲೀಸ್ ಠಾಣೆಯಿಂದ ಸೂಕ್ತಬಂದೋಬಸ್ತಾಗಿ ಪಟ್ಟಣದ 4 ಕಡೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ, ಕುಡಿಯುವನೀರು, ಸೇರಿದಂತೆ ಇತರೆ ಸೌಕರ್ಯಗಳನ್ನು ಅಚ್ಚುಕಟ್ಟಾಗಿ ಒದಗಿಸಲು ಭಕ್ತರಿಗೆ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ ಎಂದು ನುಡಿದರು.

ಜಾತ್ರಾಮಹೋತ್ಸವದ ಹಂಗವಾಗಿ ಬರುವ ಭಕ್ತಾದಿಗಳಿಗೆ ಅನುಕೂಲವಾಗಲೆಂದು ದೇವಸ್ಥಾನದ ಅತಿಯಿಂದ ರೈತಸಮುದಾಯ ಭವನದಲ್ಲಿ ಸತತ 2 ದಿನಗಳ ಕಾಲ ಅನ್ನದಾಸೋಹ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ಕುರುಗೋಡು ಜಾತ್ರೆಗೆ ಬರುವ ಭಕ್ತಾದಿಳಿಗೆ ಬಳ್ಳಾರಿ, ಕಂಪ್ಲಿ, ಕುಡಿತಿನಿ, ಸಿರುಗುಪ್ಪ ಮಾರ್ಗಗಳಿಂದ ಕುರುಗೋಡು ಜಾತ್ರೆಗೆ ಬರುವ ಭಕ್ತಾದಿಗಳಿಗೆ ಬಸ್ಸು ಸೌಕರ್ಯವನ್ನು ಕಲ್ಪಿಸಲಾಗಿದೆ. ಆದ್ದರಿಂದ ಕುರುಗೋಡು ಜಾತ್ರಾಮಹೋತ್ಸವಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಅಗಮಿಸಿ ಶ್ರೀದೊಡ್ಡಬಸವೇಶ್ವರಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪನವರು ಕೋರಿದ್ದಾರೆ.

# ಗ್ರಾಮ ಆಡಳಿತವನ್ನು ಮತ್ತಷ್ಟು ಬಲಪಡಿಸವುದು : ಪಾಟೀಲ

• ಮಲ್ಲಮ್ಮ ನುಡಿ ವಾರ್ತೆ
ವಿಜಯಪುರ

ಗ್ರಾಮ ಪಂಚಾಯಿತಿಗಳಲ್ಲಿ ಮೂಲಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮ ಆಡಳಿತವನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.




ಬಬಲೇಶ್ವರ ತಾಲೂಕಿನ ಮಮದಾಪುರದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಗೋದಾಮು ಕಟ್ಟಡ ಲ, ಅಗಸಿ ಬಾಗಿಲು ಹಾಗೂ ಬಸ್ ತಂಗುದಾಣ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು. ಗ್ರಾಮೀಣ ಭಾಗದಲ್ಲೂ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಮಮದಾಪುರದಲ್ಲಿ ಸಿಎರ್ ಅನುದಾನದಡಿ ಶಾಲೆಗಳು, ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಿಂದ ಗ್ರಾಮ ಆಡಳಿತವನ್ನು ಮತ್ತಷ್ಟು ಬಲಪಡಿಸಿ, ಸಾರ್ವಜನಿಕರಿಗೆ ಸುಲಭ ಮತ್ತು ಸಮರ್ಥ ಸೇವೆ ದೊರಕುವಂತೆ ಮಾಡಲಾಗುತ್ತಿದೆ. ಗ್ರಾಮಾಭಿವೃದ್ಧಿಯ ದಿಸೆಯಲ್ಲಿ ಇದು ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಮಮದಾಪುರ ಗ್ರಾಮ ವಿದ್ಯಾಕೇಂದ್ರವಾಗಿ ಅಭಿವೃದ್ಧಿಯಾಗುತ್ತಿದೆ. ರೈತರು ಮತ್ತು ರೈತಮಹಿಳೆಯರು ಕೃಷಿಯ ಜೊತೆಗೆ ಆರೋಗ್ಯದ ಕಡೆಗೂ ಗಮನ ನೀಡಬೇಕು. ಸುಂದರ ಪರಿಸರದಲ್ಲಿ ವಾಯುವಿಹಾರ ಮಾಡಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಮದಾಪುರ ವಿರಕ್ತಮಠದ ಶ್ರೀ ಮುರುಘೇಂದ್ರ ಮಹಾಸ್ವಾಮಿಗಳು, ಮುಖಂಡರಾದ ಬಸವರಾಜ ದೇಸಾಯಿ, ಕುಮಾರ ದೇಸಾಯಿ, ಈರಣ್ಣ ಕೊಪ್ಪದ, ಎಚ್. ಬಿ. ಹರನಟ್ಟಿ ಕೊಡಬಾಗಿ, ಬಿ. ಡಿ. ಪಾಟೀಲ ಹೊಸೂರ, ಮಧುರಾಜ ಕುಲಕರ್ಣಿ, ಕಿಟ್ಟು ಕುಲಕರ್ಣಿ, ರಫೀಕ್ ಅಹ್ಮದ್ ಕಾಣಿ, ಚಾಂದಸಾಬ ರ. ಟಕ್ಕಳಕಿ, ಕೌಸರ್ ನಿಯಾಜ ಅತ್ತಾರ, ಮಲ್ಲಿಕಾರ್ಜುನ ಗಂಗೂರ, ಹುಸೇನ್ ಕೀಜಿ ಶಬ್ಬೀರ್ ಕೀಜಿ ಮಲ್ಲು ಗಡ್ಡದಮಠ, ಉಪ್ಪಲದಿನ್ನಿ, ಹಂಚಿನಾಳ ಪಿ. ಎಂ. ಹಂಗರಗಿ, ಜೈನಾಪುರ ಮಂಗಳೂರು, ತಾಜಪುರ ಪಿ. ಎಂ., ಲಿಂಗದಳ್ಳಿ, ದೇವರ ಗೇಣ್ಣೂರ, ದೇವಾಪುರ ಜಂಬಗಿ ಎಚ್. ಕಣಬೂರ ಸುತಗುಂಡಿ ಸೇರಿದಂತೆ ನಾನಾ ಗ್ರಾಮದ ಮುಖಂಡರು, ಮಹಿಳೆಯರು, ಯುವಕರು ಉಪಸ್ಥಿತರಿದ್ದರು.

### ಶ್ರೀ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ಸಂಘಕ್ಕೆ

# ಅವಿರೋಧ ಆಯ್ಕೆ: ಸಾಹೇಬಗೌಡ ದೇಸಾಯಿ ಅಧ್ಯಕ್ಷ, ಮಲ್ಲಿಕಾರ್ಜುನ ಕೀಲಿ ಉಪಾಧ್ಯಕ್ಷ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣದ ಶ್ರೀ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ಸಂಘ ನಿ. ಕೆಂಭಾವಿ ಇದರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ಸಹಕಾರಿ ಸಂಘದ ಕಾರ್ಯಾಲಯದಲ್ಲಿ ಚುನಾವಣೆ ಜರುಗಿತು.

ಸಹಕಾರಿ ಸಂಘದ ಚುನಾವಣೆ ನೋಟಿಸ್ ಪ್ರಕಾರ ದಿನಾಂಕ 02/03/2026 ರಂದು ಬೆಳಿಗ್ಗೆ 9 ರಿಂದ 11 ಗಂಟೆಯವರೆಗೆ ನಡೆದ ಸಭೆಯಲ್ಲಿ ಸದಸ್ಯರು ಒಮ್ಮತದಿಂದ ಠರಾವು ಪಾಸು ಮಾಡಿದರು. ಮುಂದಿನ ಐದು ವರ್ಷಗಳ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಸಾಹೇಬಗೌಡ ಹಳ್ಳೇಪ್ಪಗೌಡ ದೇಸಾಯಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಲ್ಲಿಕಾರ್ಜುನ ನಿಂಗಪ್ಪ ಕೀಲಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಮನೋಹರ ಪ್ರಸಾದ್ ಸಭೆಯಲ್ಲಿ ಅಧಿಕೃತವಾಗಿ ಘೋಷಿಸಿದರು. ಇದೇ ವೇಳೆ ನೂತನ ಪದಾಧಿಕಾರಿಗಳನ್ನು ಹಾಗೂ ಚುನಾವಣಾಧಿಕಾರಿಯವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಸಹಕಾರಿಗಳಾದ ವೈ.ಟಿ. ಪಾಟೀಲ, ನಿರ್ದೇಶಕರುಗಳಾದ ಶಾಂತಗೌಡ ಬಿರಾದಾರ, ಹಣಮಂತ್ರಾಯಗೌಡ ಪಾಟೀಲ, ಅಪ್ಪಾಸಾಹೇಬಗೌಡ ದೇಸಾಯಿ, ಶಂಕರಗೌಡ ಪಾಟೀಲ, ರಾಘವೇಂದ್ರ ಡಿಗ್ಗಾವಿ, ವೀರೇಂದ್ರ ಪಾಟೀಲ್, ನಿಂಗನಗೌಡ ಜಿ. ಪಾಟೀಲ, ಬಸವರಾಜ ಪಾಟೀಲ, ದಂಡಪ್ಪರೆಡ್ಡಿ ಎಂ. ವಜ್ಜಲ್, ಸಿದ್ದನಗೌಡ ಪಾಟೀಲ್, ಕನಕಾಚಲನಾಯಕ, ಬಸಮ್ಮ ಬಿ. ಪಾಟೀಲ, ಜ್ಯೋತಿ ಕೆ. ಜಕರಡ್ಡಿ, ಮಧುಮತಿ ಪಾಟೀಲ, ಮುಖ್ಯ ಕಾರ್ಯನಿರ್ವಾಹಕ ವೈ.ಎಸ್. ಪಾಟೀಲ ಹಾಗೂ ಸಿಬ್ಬಂದಿ ಚೇತನ ಹಿರೇಮಠ ಉಪಸ್ಥಿತರಿದ್ದರು.

# ಖಮೇನಿ ಹತ್ಯೆ; ಶಾಂತಿ ಕದಡುವ ಕೆಲಸ ಮಾಡಿದ್ರೆ ಗುಂಡು ಹಾರಿಸಿ: ಯತ್ನಾಳ್

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಖಮೇನಿ ಸಾವಿಗೆ ರಾಜ್ಯದಲ್ಲಿ ಶೋಕಾಚರಣೆ, ಪ್ರತಿಭಟನೆ ವಿಚಾರದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರತಿಕ್ರಿಯೆ ನೀಡಿದ್ದಾರೆ.

ಹೌದು ಇಂದು ವಿಜಯಪುರದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಭಾರತ ಎಲ್ಲ ದೇಶಗಳ ಜೊತೆಗೆ ಉತ್ತಮ ಸಂಬಂಧ ಹೊಂದಿದೆ. ಈ ಯುದ್ಧದಲ್ಲಿ ನಮ್ಮದೇನು ಪಾತ್ರವಿಲ್ಲ, ನಾವು ಶಾಂತಿ ಬಯಸುತ್ತೇವೆ ಎಂದರು

ರಾಜ್ಯದಲ್ಲಿ ಪ್ರತಿಭಟನೆ ಮಾಡುವವರು ದೇಶದ್ರೋಹಿಗಳು, ನಾಲಾಯಕರು ಅಲ್ಲಿನ ಘಟನೆಗೂ ಇಲ್ಲಿಗೂ ಏನು ಸಂಬಂಧ. ಭಾರತದಲ್ಲಿ ಆರಾಮಾಗಿದ್ದಾರೆ, ಆರಾಮಾಗಿ ಇರಿ ಅಲ್ಲಿ ಸತ್ತಿದಕ್ಕೆ ಇಲ್ಲಿ ಹೋರಾಟ ಮಾಡುತ್ತಿರಿ ಯಾಕೆ ಎಂದು ಪ್ರಶ್ನಿಸಿದರು.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದಾಳಿಯಾದಾಗ ಯಾಕೆ ಹೋರಾಟ ಮಾಡಲಿಲ್ಲ..? ಪೆಹ್ಲಗಾಂನಲ್ಲಿ ಹಿಂದೂಗಳ ಕೊಲೆಯಾದಾಗ ಯಾಕೆ ಕಣ್ಣೀರು ಬರೋದಿಲ್ಲ..? ನಿಮಗೆ ಈ ದೇಶಕ್ಕೆ ನಿಷ್ಟೆ ಇಲ್ಲ. ಈ ದೇಶದ ಅನ್ನ ತಿಂದು ನೀರು ಕುಡಿದು ಯಾವುದೋ ದೇಶದಲ್ಲಿ ಸತ್ರೆ ಇಲ್ಲಿ ಯಾಕೆ ಪ್ರತಿಭಟನೆ ಮಾಡುತ್ತಿರೀ ಪ್ರತಿಭಟನೆ ಮಾಡುವವರ ಬಗ್ಗೆ ಸಿದ್ದರಾಮಯ್ಯ, ಪ್ರಯಾಂಕ ಖರ್ಗೆ ಉತ್ತರ ಕೊಡಬೇಕು ಎಂದು ಟಾಂಗ್ ನೀಡಿದರು. ಭಾರತದಲ್ಲಿ ಪ್ರತಿಭಟನೆ ಮಾಡಿ ಶಾಂತಿ ಕದಡಬಾರದು, ಒಂದು ವೇಳೆ ದಾಳಿ ಮಾಡಿದರೆ ಅವರ ಮೇಲೆ ಗುಂಡಿನ ದಾಳಿ ಮಾಡಿ ಮುಗಿಸಬೇಕು.

ಇವರು ದೇಶದ್ರೋಗಿಗಳು, ದೇಶಪ್ರೇಮಿಗಳಲ್ಲ ಎಂದು ಶಾಸಕ ಬಸನಗೌಡ ಪಾಟೀಲ್ ಕಿಡಿಕಾರಿದ್ದಾರೆ.

# ಪೂರ್ಣಕುಂಭ ಕಳಸ: ನಿಸಾರ್ ಖಾನ್‌ಗೆ ಆಹ್ವಾನ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಗೋವಾದ ಬಿಟ್ಟೋಲಿಯಂನ ಕರ್ಮ ಭೂಮಿ ಕನ್ನಡ ಕನ್ನಡ ಸಂಘ, ಕರ್ನಾಟಕ ಜಾಗೃತಿ ವೇದಿಕೆ ಬೆಂಗಳೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿಯ ಸಹಭಾಗಿತ್ವದಲ್ಲಿ ನಡೆಯುವ ಕನ್ನಡಿಗರ 16ನೇ ಸಾಂಸ್ಕೃತಿಕ ಸಮ್ಮೇಳನದಲ್ಲಿ ಸಮ್ಮೇಳಾಧ್ಯಕ್ಷರ ಮೆರವಣಿಗೆಯಲ್ಲಿ ಭಾಗವಹಿಸಲಿರುವ 501 ಪೂರ್ಣಕುಂಭ ಕಳಸ ಹೊತ್ತ ಸುಮಂಗಲಿಯರಿಗೆ ಚಾಲನೆ ನೀಡಲು ಅಯ್ಕೆಯಾಗಿರುವ ಬೆಂಗಳೂರಿನ ಹೆಗ್ಗನಹಳ್ಳಿಯ ಕೆಪಿಸಿಸಿ ಕಾರ್ಮಿಕ ಘಟಕದ ರಾಜ್ಯ ಜಂಟಿ ಕಾರ್ಯದರ್ಶಿ , ಹೆಗ್ಗನಹಳ್ಳಿ ಜಿಬಿಎ ಅಕಾಂಕ್ಷಿ ನಿಸಾರ್ ಖಾನ್ ರವರಿಗೆ ಸಮ್ಮೇಳನಾಧ್ಯಕ್ಷರಾದ ಡಾ.ಸಂಗನ ಬಸಪ್ಪ ಬಿರಾದಾರ್ ಹಾಗೂ ಸಾಂಸ್ಕೃತಿಕ ಸಮ್ಮೇಳನದ ಸಂಘಟಕರಾದ ಮಹೇಶ್ ಬಾಬು ಸುರ್ವೆ, ಸಂಘಟಕರು ಆಹ್ವಾನ ಪತ್ರಿಕೆ ನೀಡಿ ಸಾಂಸ್ಕೃತಿಕ ಸಮ್ಮೇಳನಕ್ಕೆ ಆಹ್ವಾನ ನೀಡಿದರು.

ಈ ಸಂದರ್ಭದಲ್ಲಿ ಅಹಿಂದ ಹಕ್ಕುಗಳ ಹೋರಾಟ ವೇದಿಕೆಯ ರಾಜ್ಯಾಧ್ಯಕ್ಷ ಜಿ ಅಂಜನಪ್ಪ, ಕೆಪಿಸಿಸಿ ಸಂಯೋಜಕರಾದ ರಮೇಶ್, ಕಾರ್ಯನಿರತ ಪತ್ರಕರ್ತರ ಸಂಘದ ಪಧಾದಿಕಾರಿಗಳಾದ ಹೆಚ್.ಆರ್ ರವೀಶ್ ಹಾಗೂ ಹನುಮಂತರಾಜು ,ಪತ್ರಕರ್ತ ಜಿ ನಂದೀಶ್ ಉಪಸ್ಥಿತರಿದ್ದರು.

# ಸದೃಢವಾದ ದೇಹದಲ್ಲಿ ಮನಸ್ಸಿರುತ್ತದೆ: ಅಶೋಕ್ ಕಡತಡ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯವಾಗಿದೆ, ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸಿರುತ್ತದೆ ಎಂಬ ಸ್ವಾಮಿ ವಿವೇಕಾನಂದರ ಮಾತುಗಳನ್ನು ಮಕ್ಕಳಿಗೆ ಸಿ.ಆರ್.ಪಿ ಅಶೋಕ್ ಕಡತಡ ಅವರು ಹೇಳಿದರು. ಯಾದಗಿರಿಯ ಪಟ್ಟಣದ ಬೋಸ್ಕೋ ಸಮಾಜ ಸೇವಾ ಕೇಂದ್ರದಲ್ಲಿ ನಡೆದ ಎಂ.ಐ.ಎನ್.ಡಿ.ಎಸ್ ಯೋಜನೆ ವತಿಯಿಂದ ಡಾನ್ ಬೋಸ್ಕೋ ಸಮಾಜ ಸೇವಾ ಕೇಂದ್ರ, ಬ್ರೆಡ್ಸ್ ಸಂಸ್ಥೆ ಬೆಂಗಳೂರು, ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಯಾದಗಿರಿ ಇವರ ಸಹಯೋಗದಲ್ಲಿ ಮಾನಸಿಕ ಆರೋಗ್ಯದ, ಕಲಾ, ಆಟ ಹಾಗೂ ವೃತ್ತಿಪರ ಚಿಕಿತ್ಸೆಗಳ ಚಟುವಟಿಕೆ ಆಧಾರಿತ 3ನೇ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಡಾನ್ ಬೋಸ್ಕೋ ಇನ್ಸಿಟ್ಯೂಟ್‌ನ ರೆಕ್ಟರ್, ಮತ್ತು ಮ್ಯಾನೇಜರ್ ಫಾ. ಸಜ್ಜಿ ಜಾರ್ಜ್ ಅವರು ಕಾರ್ಯಾಗಾರವನ್ನು ಉದ್ಘಾಟಿಸಿ, ಮಕ್ಕಳ ಪ್ರತಿಭೆಯನ್ನು ಗುರುತಿಸಿ ಅವರಿಗೆ ಗೌರವ ನೀಡುವುದು ಅವರ ಕಲಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಪ್ರೇರೇಪಿಸಿದರು.

ಅಧ್ಯಕ್ಷತೆ ವಹಿಸಿದ ಡಾನ್ ಬೋಸ್ಕೋ ಸಮಾಜ ಸೇವ ಕೇಂದ್ರದ ನಿರ್ದೇಶಕರಾದ ಫಾ. ಶಾಬು ಫ್ರಾನ್ಸಿಸ್ ಅವರು ಯಾದಗಿರಿ ಭಾಗದ ಕೆಲ ವಿದ್ಯಾರ್ಥಿಗಳು ಮಂದಗತಿಯಲ್ಲಿ ಕಲಿಯುತ್ತಿರುವ ವಿಚಾರವನ್ನು ಉಲ್ಲೇಖಿಸಿದರು. ಮಂದಗತಿಯಲ್ಲಿ ಕಲಿಯುವ ಮಕ್ಕಳನ್ನು ತಪ್ಪಾಗಿ ಅರ್ಥೈಸಬಾರದು ಹಾಗೂ ತಪ್ಪು ಕಲ್ಪನೆ ಮಾಡಬಾರದು ಎಂದು ಹೇಳಿದರು.

ಪೋಷಕರು ಮತ್ತು ಶಿಕ್ಷಕರು ಮಕ್ಕಳನ್ನು ಪ್ರೀತಿ, ಸಹನೆ ಮತ್ತು ಸಹಾನುಭೂತಿಯೊಂದಿಗೆ ನೋಡಬೇಕು ಎಂದು ತಿಳಿಸಿದರು. ಆಲ್ಬರ್ಟ್ ಐನ್ಸ್ಟೀನ್ ಹಾಗೂ ಥಾಮಸ್ ಆಲ್ವಾ ಎಡಿಸನ್ ಅವರ ಉದಾಹರಣೆಗಳನ್ನು ನೀಡಿ, ಬಾಲ್ಯದಲ್ಲಿ ಕಲಿಕೆಯ ಸಮಸ್ಯೆಗಳನ್ನು ಎದುರಿಸಿದರೂ ನಂತರ ವಿಶ್ವಪ್ರಸಿದ್ಧ ವ್ಯಕ್ತಿಗಳಾದರು ಎಂದು ವಿವರಿಸಿದರು. ಪ್ರತಿಯೊಬ್ಬ ಮಕ್ಕಳನ್ನು ವೈಯಕ್ತಿಕವಾಗಿ ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯವೆಂದರು.

ಈ ಕಾರ್ಯಾಗಾರಕ್ಕೆ ಡಾಕ್ಟರ್ ಶರಣಗೌಡ ಮನುಶಾಸ್ತ್ರಜ್ಞರು ಯಿಮ್ಸ್ ಆಸ್ಪತ್ರೆ ಯಾದಗಿರಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಮಕ್ಕಳ ಬುದ್ಧಿಮತ್ತೆ ಪರೀಕ್ಷೆಯನ್ನು ನಡೆಸಿಕೊಟ್ಟರು. ಮತ್ತು ಎ ಪಿ ಡಿ ಸಂಸ್ಥೆಯಿಂದ ರಮೇಶ್ ರಾಜ್ಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ಅಪಫ್ ಸಂಸ್ಥೆಯಿಂದ ಮಧುಶ್ರೀ ಮತ್ತು ಆನಂದ್ ಅವರು ತರಬೇತಿದಾರರಾಗಿ ಆಗಮಿಸಿದ್ದರು. ಈ ಕಾರ್ಯಕ್ರಮವನ್ನು ಮಲ್ಲಿಕಾರ್ಜುನ ಕುರುಕುಂದಿ ಡಿ, ಬಿ. ಟೆಕ್ ನ ಸಂಯೋಜಕರು ನಿರೂಪಿಸಿದರು, ಮೈಂಡ್ಸ್ ಯೋಜನೆಯ ಆಪ್ತ ಸಮಾಲೋಚಕರಾದ ಸೂರ್ಯಕಾಂತ್ ಅವರು ಸ್ವಾಗತಿಸಿದರು, ಮೈಂಡ್ಸ ಯೋಜನೆಯ ಸಂಯೋಜಕರಾದ ಶರಣಪ್ಪಸಿ ಅಮರಾಪುರ ವಂದನಾರ್ಪಣೆ ಸಲ್ಲಿಸಿದರು. ಜೀವನೋಪಾಯ ಕಾರ್ಯಕ್ರಮದ ಸಂಯೋಜ-ಕರಾದ ದೇವೇಂದ್ರಪ್ಪ ತೆಲುಗುರ್ ಮತ್ತು ಸ. ಹಿ. ಪ್ರಾ./ಪ್ರೌ. ಶಾಲೆ. ಸ್ಟೇಷನ್ ಬಜಾರ್. ಕೋಲಿವಾಡ. ಜೂನಿಯರ್ ಕಾಲೇಜ್ ಪ್ರೌಢ ಶಾಲೆಯ ಒಟ್ಟು 45 ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಾಗಾರದ ಪ್ರಮುಖ ಚಟುವಟಿಕೆಗಳು ರಾಕ್ ಪೇಂಟಿಂಗ, ಪೇಪರ್ ಪೇಂಟಿಂಗ್ ಮೈಂಡ್ ಆಕ್ಟಿವಿಟೀಸ್, ವಿದ್ಯಾರ್ಥಿಗಳ ಬುದ್ಧಿಮತ್ತೆ ಮೌಲ್ಯಮಾಪನ ಮೆಮೊರಿ ಅಭಿವೃದ್ಧಿ ಚಟುವಟಿಕೆಗಳು ಹೈಪರ್ ಆಕ್ಟಿವಿಟಿ ನಿಯಂತ್ರಣ ಹಾಗೂ ಅದರ ಪರಿಣಾಮಗಳ ಕುರಿತು ಅರಿವು ಮೂಡಿಸುವದು ನಡೆದವು. ವಿದ್ಯಾರ್ಥಿಗಳು ಎಲ್ಲಾ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ತಮ್ಮ ಸೃಜನಶೀಲತೆ ಮತ್ತು ಕೌಶಲ್ಯಗಳನ್ನು ಪ್ರದರ್ಶಿಸಿದರು.



# ವಿದ್ಯೆಯ ಜೊತೆಗೆ ಕಮ್ಯೂನಿಕೇಶನ್ಸ್ ಸ್ಕಿಲ್ ಅಳವಡಿಸಿಕೊಳ್ಳಿ: ಶರಣಪ್ರಕಾಶ ಪಾಟೀಲ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಟಿಟಿಸಿ ವಿದ್ಯಾಭ್ಯಾಸ ನಂತರ ವಿದ್ಯಾರ್ಥಿಗಳಿಗೆ ನೌಕರಿ ಕಟ್ಟಿಟ್ಟ ಬುತ್ತಿ. ಆದರೆ ನೀವು ಕೌಶಲ್ಯದ ಜೊತೆಗೆ ಮಾತನಾಡುವ ಶಿಸ್ತು ಹಾಗೂ ಇಂಗ್ಲಿಷ್ ಜ್ಞಾನವನ್ನು ಅಳವಡಿಸಿಕೊಳ್ಳಬೇಕೆಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ




ಪಾಟೀಲ ಹೇಳಿದರು. ಯಾದಗಿರಿ ಜಿಲ್ಲೆಯ ಸೈದಾಪುರ ಹತ್ತಿರದ ಕಡೆಚೂರು, ಬಾಡಿಯಾಳ್ ಕೈಗಾರಿಕ ಸ್ಥಳದಲ್ಲಿರುವ ಸರಕಾರಿ ಉಪಕರಣಾಗಾರ ತರಬೇತಿ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿದ ಸಚಿವ ಡಾ.ಶರಣಪ್ರಕಾಶ ಪಾಟೀಲ ಕೇಂದ್ರದ ವ್ಯವಸ್ಥೆ ಬಗ್ಗೆ ಖುದ್ದು ಪರಿಶೀಲನೆ ನಡೆಸಿ ವಿದ್ಯಾರ್ಥಿಗಳ ಜೊತೆ ಮಾತನಾಡಿದರು. ಜಿಟಿಟಿಸಿ ಕೋರ್ಸ್ ಮೂಲಕ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ನಿಮಗೆ ಅನುಕೂಲಕ್ಕೆ ತಕ್ಕಂತೆ ನೌಕರಿಗಳನ್ನು ಪಡೆದುಕೊಳ್ಳಬಹುದು. ಜೊತೆಗೆ ವಿದೇಶಗಳಲ್ಲಿಯೂ ಸೇವೆ ಸಲ್ಲಿಸಬಹುದೆಂದು ಕಿವಿ ಮಾತು ಹೇಳಿದರು.

ಟಿಎನ್ ಸಿ, ಇಡಿಯಂ, ಪಿಲ್ಲಿಂಗ್ ಮಷಿನ್ ಸೇರಿದಂತೆ ಹಲವು ಮಷಿನರಿಗಳ್ಳುಳ್ಳ ಕಾರ್ಯಾಲಕ್ಕೆ ಭೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳ ಜೊತೆ ಕೆಲ ಕಾಲ ಸಂವಾದ ನಡೆಸಿ, ವಾಸ್ತವ ಪರಿಸ್ಥಿತಿ ಬಗ್ಗೆ ಮಾಹಿತಿ ಪಡೆದರು. ಸೂಕ್ತವಾದ ಹಾಸ್ಟೆಲ್ ವ್ಯವಸ್ಥೆ ಸೇರಿದಂತೆ ಊಟದ ವ್ಯವಸ್ಥೆ ಜೊತೆಗೆ ಬಸ್ ನಿಲುಗಡೆ ಕುರಿತು ಸಂಬಂಧಿಸಿದ ಅಧಿಕಾರಿಗಳ ಜೊತೆ ಕರೆ ಮೂಲಕ ಸಚಿವ ಡಾ.ಶರಣಪ್ರಕಾಶ ಪಾಟೀಲ ಮಾತನಾಡಿದರು. ಕೋಣೆಗಳಿಗೆ ಪೆಂಟೆಂಗ್ ಮಾಡಿಸಿ, ಅಚ್ಚುಕಟ್ಟಾಗಿ ತರಗತಿ ಕೋಣೆಗಳನ್ನು ಮೇಲ್ವಿಚಾರಣೆ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಎಂದು ಆಡಳಿತ ಮಂಡಳಿಯವರಿಗೆ ಸೂಚನೆ ನೀಡಿದರು. ಜಿಟಿಟಿಸಿ ಪ್ರಾಂಶುಪಾಲ ಶಿವಕುಮಾರ್ ಜೊತೆಗಿದ್ದರು.

# 50 ವಿದ್ಯಾರ್ಥಿ ಗೈರು ಹಾಜರಿ

ರಾಯಚೂರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ 2026ರ ಮಾರ್ಚ್ 02ರ ಸೋಮವಾರ ದಂದು ನಡೆದ ದ್ವಿತೀಯ ಪಿಯುಸಿ-01ರ ಭೂಗೋಳ ಶಾಸ್ತ್ರ ಹಾಗೂ ಸಂಖ್ಯಾಶಾಸ್ತ್ರ ವಿಷಯದ ಪರೀಕ್ಷೆಯಲ್ಲಿ ಒಟ್ಟು 50 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ.

ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ಭೂಗೋಳ ಶಾಸ್ತ್ರ ವಿಷಯದಲ್ಲಿ ಒಟ್ಟು 586 ನೋಂದಣೆಯಾಗಿದ್ದು, 557 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ. 29 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ.

ಸಂಖ್ಯಾಶಾಸ್ತ್ರ ವಿಷಯದಲ್ಲಿ ಒಟ್ಟು 700 ನೋಂದಣೆಯಾಗಿದ್ದು, 679 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ. 21 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವಜನಾಂಗಕ್ಕೆ ಉದ್ಯೋಗ ಕಲ್ಪಿಸಲು ಉದ್ಯೋಗ ಮೇಳ ಸಹಕಾರಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ಜಿಲ್ಲೆಯ ನಿರುದ್ಯೋಗಿ ಯುವಜನಾಂಗಕ್ಕೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಉದ್ಯೋಗ ಮೇಳ ಸಹಕಾರಿಯಾಗಿದೆ ಎಂದು ರಾಜ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಹೇಳಿದರು. ನಗರದಲ್ಲಿಂದು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್ ಬೆಂಗಳೂರು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕೌಶಲ್ಯ ಮಿಷನ್ ಯಾದಗಿರಿ ಇವರ ಸಂಯುಕ್ತ ಆಶ್ರಯದಲ್ಲಿ ಡಿಡಿಯು ಜಿಕೆವೈ ಯೋಜನೆಯಡಿ ಯಾದಗಿರಿ ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಯುವಜನಾಂಗಕ್ಕೆ ಉದ್ಯೋಗಾವಕಾಶ ಕಲ್ಪಿಸಲು ಇಂತಹ ಜಿಲ್ಲಾ ಮಟ್ಟದ ಉದ್ಯೋಗ ಮೇಳಕ್ಕೆ ಅವಕಾಶ ಕಲ್ಪಿಸಿದೆ. ಇಂದು ಬೆಳಿಗ್ಗೆ ವರೆಗೆ ಸುಮಾರು 5000 ಉದ್ಯೋಗಾಂಕ್ಷಿಗಳು ಹೆಸರು ನೊಂದಾಯಿಸಿಕೊಂಡಿದ್ದಾರೆ ಎಂದು ಸಚಿವರು ಹೇಳಿದರು. ರಾಜ್ಯದ ವಿವಿಧ ಭಾಗಗಳಿಂದ ಹಾಗೂ ಸ್ಥಳೀಯವಾಗಿ ಸುಮಾರು 41ಕ್ಕೂ ಹೆಚ್ಚು ಬೃಹತ್, ಮಧ್ಯಮ ಮತ್ತು ಸಣ್ಣ ಪ್ರಮಾಣದ ಪ್ರತಿಷ್ಠಿತ ಉದ್ಯಮಗಳ ಪ್ರತಿನಿಧಿಗಳು ಮೇಳದಲ್ಲಿ ಭಾಗವಹಿಸಿದ್ದಾರೆ. ಜಿಲ್ಲೆಯ ವಿದ್ಯಾವಂತ ಯುವಕ ಯುವತಿಯರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳ

ಬಹುದಾಗಿದೆ ಎಂದು ಅವರು ಹೇಳಿದರು. ಖಾಸಗಿ ವಲಯದಲ್ಲಿ ಉದ್ಯೋಗಾವಕಾಶ ಕಲ್ಪಿಸುವುದು ಮೇಳದ ಮುಖ್ಯ ಉದ್ದೇಶವಾಗಿದೆ. ವಿವಿಧ ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಜೊತೆಗೆ, ಉದ್ಯೋಗಾಕಾಂಕ್ಷಿಗಳು ತಮ್ಮ ವಿದ್ಯಾರ್ಹತೆ ಮತ್ತು ಕೌಶಲ್ಯಕ್ಕೆ ಅನುಗುಣವಾಗಿ ಉದ್ಯೋಗ ಆಯ್ಕೆ ಮಾಡಿಕೊಳ್ಳಲು ಇಲ್ಲಿ ಅವಕಾಶವಿರುತ್ತದೆ.

ಈ ಹಿನ್ನೆಲೆಯಲ್ಲಿ ಇಂದು ಪ್ರಾಯೋಗಿಕವಾಗಿ ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿ ಪತ್ರ ವಿತರಿಸಲಾಗಿದೆ ಎಂದು ಸಚಿವರು ಹೇಳಿದರು. ಈ ಉದ್ಯೋಗ ಮೇಳದಲ್ಲಿ ಎಸ್ ಎಸ್ ಎಲ್ ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಸಿ ಈ, ಸ್ನಾತಕೋತ್ತರ ಪದವಿ ಹಾಗೂ ಇತ-ರೆ ಯಾವುದೇ ವಿದ್ಯಾರ್ಹತೆ ಹೊಂದಿದ



ಅಭ್ಯರ್ಥಿಗಳು 18ರಿಂದ 45ವರ್ಷರೊಳಗಿನ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ,ವಿಶೇಷ ಚೇತನ ರು ಭಾಗವಹಿಸಿದ್ದಾರೆ. ಇನ್ಫರ್ಮೇಷನ್ ಟೆಕ್ನಾಲಜಿ, ಸಿವಿಲ್ ಕನ್ಸ್ಟ್ರಕ್ಷನ್, ಫುಡ್ ಪ್ರೊಸೆಸ್ಸಿಂಗ್, ಮ್ಯಾನುಫ್ಯಾಕ್ಚರಿಂಗ್, ಅಟೋಮೋಬೈಲ್ಸ್, ಎಲೆಕ್ಟ್ರಾನಿಕ್, ಬ್ಯಾಂಕಿಂಗ್, ಇನ್ಸುರೆನ್ಸ ,ಎಜುಕೇಶನ್, ಬಿಪಿಓ, ರಿಟಾಯಿ, ಆಗ್ರೋ, ಸರ್ವಿಸಿಂಗ್, ಹೆಲ್ತ್ ಕೇರ್ ಇತ್ಯಾದಿ ವಲಯಗಳಲ್ಲಿ ಅವಕಾಶದ ಲಾಭ ಪಡೆದಿದ್ದಾರೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ನಗರ ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲದಾಪುರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಾಮಗಾರಿ ಪೂರ್ಣಗೊಳ್ಳದೆ ನನೆಗುದ್ದಿಗೆ ಬಿದ್ದ ಅರಸು ಭವನ


• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಜನಪ್ರತಿನಿಧಿಗಳ ನಿರ್ಲಕ್ಷತೆಯಿಂದ ಅರಸು ಭವನ ಕಾಮಗಾರಿ ಪೂರ್ಣಗೊಳ್ಳದೆ ನೆನೆಗುದಿಗೆ ಬಿದ್ದಿದೆ ಎಂದು ಸತ್ಯ ಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ರವರು ವಿಷಾದ ವ್ಯಕ್ತಪಡಿಸಿದರು.*

ನಂತರ ಪತ್ರಿಕಾ ಹೇಳಿಕೆ ನೀಡಿ ಹುಣಸೂರು ಮಾಜಿ ಮುಖ್ಯಮಂತ್ರಿ ಡಿ ದೇವರಾಜ ಅರಸುರವರ ಕರ್ಮಭೂಮಿಯಾಗಿದ್ದು ಅರಸುರವರ ಹೆಸರಿನಲ್ಲಿ 9.5 ಕೋಟಿ ವೆಚ್ಚದಲ್ಲಿ ಅರಸು ಕಲಾಭವನ 2015ರಲ್ಲೇ ನಿರ್ಮಾಣಗೊಂಡಿದ್ದು ಇದರ ಕಾಮಗಾರಿಯನ್ನು ಮೈಸೂರಿನ ನಿರ್ಮಿತಿ ಕೇಂದ್ರ ವಹಿಸಿಕೊಂಡಿದ್ದು ಜನಪ್ರತಿನಿಧಿಗಳ ಹೆಚ್ಚು ಇಚ್ಛಾಶಕ್ತಿ ಕೊರತೆಯಿಂದಾಗಿ ಕಳೆದ ಒಂದು ದಶಕ ಕೂಡ ಪಾಳು ಬಿದ್ದಿದೆ. ದೃಶ್ಯ ಇದು

ಸದರಿ ಭವನಕ್ಕೆ ಬೆಲೆಬಾಳುವ ಕಿಟಕಿ ಗಾಜುಗಳನ್ನು ಅಳವಡಿಸಿದ್ದು ಕಿಡಿಗೇಡಿಗಳು ಈ ಕಿಟಕಿ ಗಾಜುಗಳನ್ನು ಒಡೆದು ಹಾಕಿದ್ದಾರೆ. ಇದನ್ನು ಮೈಸೂರಿನ ನಿರ್ಮಿತಿ ಕೇಂದ್ರ ಮತ್ತೆ ಅಳವಡಿಸಿದ್ದು ಸರ್ಕಾರದ ಹಣ ವ್ಯರ್ಥ ಪೋಲಾಗುತ್ತಿದೆ. ಈ ಹಣವು ಸಹ ಸಾರ್ವಜನಿಕರ ತೆ-ರಿಗೆ ಹಣವಾಗಿರುತ್ತದೆ. ದಿಕ್ಕು ದೆಶೆ ಇಲ್ಲದೆ ಭವನ ಪಾಳು ಬಿದ್ದದಿದೆ

ಅರಸು ಭವನ ಪೂರ್ಣಗೊಳಿಸಲು ಅನುದಾನ ತರುವಲ್ಲಿ ಹಾಗೂ ಚುನಾಯಿತಿ ಪ್ರತಿನಿಧಿಗಳು ಸಂಪೂರ್ಣ ವಿಫಲರಾಗಿದ್ದಾರೆ. ತಮ್ಮ ಭಾಷಣಗಳಲ್ಲಿ ಡಿ ದೇವರಾಜ ಅರಸುರವರ ಬಗ್ಗೆ ಉದ್ದುದ್ದ ಭಾಷಣ ಮಾಡಿ ಜನರಿಂದ ಶಭಾಷ್ ಗಿರಿ



ಎನಿಸಿಕೊಳ್ಳುವ ಜನಪ್ರತಿನಿಧಿಗಳು ರಾಜ್ಯ ಕಂಡ ಧೀಮಂತ ನಾಯಕ, ಸಾಮಾಜಿಕ ನ್ಯಾಯದ ಹರಿಕಾರ, ಭೂ ಸುಧಾರಣೆಯನ್ನು ಜಾರಿಗೆ ತಂದ ಡಿ ದೇವರಾಜ ಅರಸುರವರ ಹೆಸರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಕಲಾಭವನದ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದು ಅರಸುರವರ ಹೆಸರಿಗೆ ಮಾಡಿದ ಅಪಮಾನವಾಗಿರುತ್ತದೆ. ಎಂದು ಬೇಸರ ವ್ಯಕ್ತಪಡಿಸಿದರು

ನಮ್ಮ ಸಂಸ್ಥೆ ವತಿಯಿಂದ ಕಳೆದ ಹತ್ತು ವರ್ಷಗಳಿಂದಲೂ ಅನುದಾನ ಬಿಡುಗಡೆ ಮಾಡಿ ಅರಸು ಕಲಾಭವನವನ್ನು ಉದ್ಘಾಟಿಸಬೇಕೆಂದು ಚುನಾಯಿತಿ ಪ್ರತಿನಿಧಿಗಳಿಗೆ ಮನವಿ ಪತ್ರ ಸಲ್ಲಿಸುತ್ತಲೇ ಬರುತ್ತಿದೆ. ಆದರೆ ಇದುವರೆಗೂ ಗಮನ ಹರಿಸದೆ ಸ್ಪಂದನೆ ದೊರಕಿರುವುದಿಲ್ಲ. ಇದು ಅತ್ಯಂತ ನೋವಿನ ಸಂಗತಿಯಾಗಿದ್ದು ಅರಸುರವರ ಹುಟ್ಟೂರಿನಲ್ಲಿ ನಿರ್ಮಾಣಗೊಂಡಿರುವ ಅರಸು ಕಲಾಭವನ ಪಾಳು ಬಿದ್ದಿರುವ ನಾಗರಿಕರು ತಲೆತಗ್ಗಿಸುವಂತಹ ದೊಡ್ಡ ವಿಚಾರವಾಗಿದೆ.

ಈ ಕಲಾಭವನವು ಅರಸು ಕುಟುಂಬಕ್ಕೂ ಸಹ ಒಂದು ಗೌರವದ ವಿಷಯವಾಗಿದ್ದು ತಾಲೂಕು ಆಡಳಿತ ಜಿಲ್ಲಾ ಆಡಳಿತ, ಆಡಳಿತಾ ಕಲಾಭವನದ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ನಿರ್ಲಕ್ಷತೆ ವಹಿಸಿ ಅಗೌರವವನ್ನು ತೋರಿಸುತ್ತಿದ್ದಾರೆ. ಒಂದೆಡೆ ಅರಸುರರ ಹುಟ್ಟೂರನ್ನು ಸಹ ಅಭಿವೃದ್ಧಿಪಡಿಸದೆ ಮತ್ತೊಂದೆಡೆ ನಗರದಲ್ಲಿ ನಿರ್ಮಾಣಗೊಂಡಿರುವ ಅರಸು ಭವನವು ಬಾಳು ಬೀಳುತ್ತಿರುವುದನ್ನು ಅರಸು ಕುಟುಂಬ ಅತ್ಯಂತ ನೋವಿನಿಂದ ನೋಡುತ್ತಿದೆ.

ಮುಖ್ಯಮಂತ್ರಿಗಳೇ ತಮ್ಮ ತವರು ಜಿಲ್ಲೆಯಲ್ಲಿರುವ ಅರಸು ಕಲಾಭವನಕ್ಕೆ ಈ ಬಾರಿ ಬಜೆಟ್ ನಲ್ಲಿ ಅನುದಾನ ಘೋಷಣೆ ಮಾಡಿ ಅತಿ ಶೀಘ್ರವಾಗಿ ಅರಸು ಕಲಾಭವನವನ್ನು ಉದ್ಘಾಟಿಸಬೇಕೆಂದು ನಾಗರಿಕರ ಪರವಾಗಿ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ತಾಲೂಕು ಎಮ್ಮಿಗನೂರು ಗ್ರಾಮದ ಎಸ್ ಡಬ್ಲ್ಯೂ ಎಸ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ-ಯ ಪ್ರಯುಕ್ತ ವಿಜ್ಞಾನ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು

ಈ ವೇಳೆ ಮುಖ್ಯ ಶಿಕ್ಷಕ ಮಂಜಪ್ಪ ಹೂಗಾರ ಮಾತನಾಡಿ ವಿಜ್ಞಾನ ವಿಷಯವನ್ನು ಕಬ್ಬಿಣದ ಕಡಲೆ ಎಂದು ಭಾವಿಸದೆ ಪ್ರಯೋಗಗಳ ಮೂಲಕ ಅರ್ಥ ಮಾಡಿಕೊಳ್ಳಬೇಕು, ವಿದ್ಯಾರ್ಥಿಗಳು ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವನೆ ರೂಡಿಸಿಕೊಳ್ಳಬೇಕು, ಜಗತ್ತನ್ನೇ ಬದಲಾಯಿಸುವ ಶಕ್ತಿ ವಿಜ್ಞಾನಕ್ಕಿದೆ ಎಂದು ಹೇಳಿದರು. ನಂತರ ವಿದ್ಯಾರ್ಥಿಗಳು ಪಾಠ ಆಧಾರಿತ ವಿಜ್ಞಾನದ ಪ್ರಯೋಗಗಳನ್ನು ಪ್ರದರ್ಶಿಸಿ ವಿವರಿಸಿದರು,

ಈ ಸಂದರ್ಭದಲ್ಲಿ ಸಹ ಶಿಕ್ಷಕರಾದ ಜ್ಯೋತಿ, ಸಂಗಮ್ಮ, ಲಕ್ಷ್ಮಿ, ಶಂಕ್ರಮ್ಮ, ವೀರೇಶ, ಮಲ್ಲೇಶ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಇರಾನ್ ಮೇಲೆ ಅಮೆರಿಕಾ ಇಸ್ರೇಲ್ ದಾಳಿ ಸಾಮ್ರಾಜ್ಯವಾದಿ ರಕ್ತಪಾತಕ್ಕೆ ತೀವ್ರ ಖಂಡನೆ



**ಸಾಮ್ರಾಜ್ಯವಾದಕ್ಕೆ ಮರಣ ಜನರ ಹೋರಾಟಕ್ಕೆ ಜಯ**

"ಇರಾನ್ ಮೇಲಿನ ಅಮೇರಿಕ ಇಸ್ರೇಲ್ ಮಿಲಿಟರಿ ದಾಳಿಯ ವಿರುದ್ಧ ಘೋಷಣೆ ಕೂಗಿ, ಟ್ರಂಪ್ ಹಾಗೂ ನೆತಾನ್ಯಾಹು ಬಂಧಿಸಿ, ಯುದ್ಧ ನಿಲ್ಲಿಸಿ ಶಾಂತಿ ಕಾಪಾಡಬೇಕು, ಮೌನ ವಹಿಸಿದ ಮೋದಿ ಮಾತನಾಡಬೇಕೆಂದು ವಿವಿಧ ಸಂಘಟನೆಗಳು ಆಗ್ರಹಿಸಲಾಯಿತು.

- ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಇರಾನ್ ಮೇಲೆ ಅಮೆರಿಕಾ–ಇಸ್ರೇಲ್ ಯುದ್ಧ ದಾಳಿ ಮತ್ತು ಇರಾನ್ ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖೈಮನಿ ಅವರು ಹತ್ಯೆ ಜನವಿರೋಧಿ ಸಾಮ್ರಾಜ್ಯವಾದಿ ಅಪರಾಧ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿಯಾತಕ್ಕಾಗಿ ಸಿಪಿಐ (ಎಂ ಎಲ್ ) ರೆಡ್ ಸ್ಟಾರ್ . ಕರ್ನಾಟಕ ಕೃಷಿ ಕೂಲಿಕಾರರ ಸಂಘ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ದಲಿತ ದಲಿತ ವಿದ್ಯಾರ್ಥಿ ಪರಿಷತ್ ಸೇರಿದಂತೆ ವಿವಿಧ ಸಂಘಟನೆಗಳು ಒತ್ತಾಯವಾಗಿದೆ

ನಗರದ ಗಾಂಧಿ ವೃತ್ತದಲ್ಲಿ ಪ್ರತಿಮೆ ಮುಂದೆ ಸಿಪಿಐ (ಎಂ ಎಲ್) ರೆಡ್ ಸ್ಟಾರ್ ಕರ್ನಾಟಕ ಕೃಷಿ ಕೂಲಿಕಾರರ ಸಂಘ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ದಲಿತ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ಪ್ರೊಟೆಸ್ಟ್ ಮಾಡಿ ಪ್ರತಿಭಟಿಸಿದರು

ಈ ಪ್ರತಿಭಟನೆ ಕುರಿತು ಮಾತನಾಡಿದ ಸಿಪಿಐ ಎಂ ಎಲ್ ರೆಡ್ ಸ್ಟಾರ್ ಸಮಿತಿ ರಾಜ್ಯ ಸಮಿತಿ ಸದಸ್ಯರು ಎಂ. ಗಂಗಾಧರ್ ಅವರು ನಿನ್ನೆ ನಡೆಯದೆ ಇರಾನ್ ಮೇಲೆ ಅಮೆರಿಕಾ–, ಇಸ್ರೇಲ್ ಸಾಮ್ರಾಜ್ಯವಾದಿ ಶಿಬಿರ ನಡೆಸುತ್ತಿರುವ ಯುದ್ಧ ದಾಳಿ ಪ್ರಚೋದನೆ ಮತ್ತು ಅಸ್ಥಿರಗೊಳಿಸುವ ಕಾರ್ಯಾಚರಣೆಗಳು ಮುಂದುವರಿಕೆ ಯಾಗಿ. ಇರಾನ್ ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖೈಮನಿ ಅವರನ್ನು ಹತ್ಯೆ ಮಾಡಿದ್ದು ಅತ್ಯಂತ ಗಂಭೀರ. ಅಪಾಯಕಾರಿ ಬೆಳವಣಿಗೆಯಾಗಿದ್ದನ್ನು. ಸಿಪಿಐ ಎಂ ಎಲ್ ರೆಡ್ ಸ್ಟಾರ್ ಹಾಗೂ ಪ್ರಗತಿಪರ ಸಂಘಟನೆಗಳು ಈ ರಾಜಕೀಯ ಹತ್ಯೆಯನ್ನು ಯಾವುದೇ ಗೊಂದಲವಿಲ್ಲದೆ ತೀಕ್ಷ್ಣವಾಗಿ ಮತ್ತು ಕ್ರಾಂತಿಕಾರಿ ಸಂಘಟನೆ ದೃಢತೆ ಯಿಂದ ಖಂಡಿಸುತ್ತದೆ ಎಂದು ಹೇಳಿದರು

ಇದು ಒಬ್ಬ ವ್ಯಕ್ತಿಯ ಮೇಲಿನ ದಾಳಿಯಲ್ಲ ಇದು ಒಂದು ಸ್ವತಂತ್ರ ರಾಷ್ಟ್ರದ ಸ್ವಾಯತ್ತತೆಯ ಮೇಲಿನ ನೇರ ಸಾಮ್ರಾಜ್ಯವಾದಿ ಆಕ್ರಮಣ. ತನ್ನ ಮಾತಿಗೆ ಬಗ್ಗದ ಶೋಷಣೆಗೆ ಶರಣಾಗದ ರಾಷ್ಟ್ರಗಳನ್ನು ನಾಶಗೊಳಿಸಲು ಅಮೆರಿಕಾ ನೇತೃತ್ವದ ಸಾಮ್ರಾಜ್ಯವಾದ ಯುದ್ಧ. ಆರ್ಥಿಕ ನಿಷೇಧ ಅಸ್ಥಿರತೆ ಮತ್ತು ರಾಜಕೀಯ ಹತ್ಯೆಗಳನ್ನು ತನ್ನ ನಿಯಮಿತ ಉಪಕರಣಗಳಾಗಿಸಿಕೊಂಡದೆ. ಖೈಮನಿ ಅವರು ಹತ್ಯೆ ಈ ಜನವಿರೋಧಿ ಯಂತ್ರದ ಮತ್ತೊಂದು ಕ್ರೂರ ಕೊಂಡಿಯಾಗದೆ. ಬಂಡವಾಳವಾದ ತನ್ನ ಸಂಕಷ್ಟಗಳನ್ನು ಬಗೆಹರಿಸಲು ಹಿಂಸೆಯ ದಾರಿಯನ್ನು ಆರಿಸುತ್ತದೆ ಇಂದಿನ ಅಮೆರಿಕಾ ಸಾಮ್ರಾಜ್ಯವಾದ ಆ ಹಿಂಸೆಯ ಅತ್ಯಂತ ಕ್ರೂರ ರೂಪವಾಗಿದೆ

ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಅಧ್ಯಕ್ಷರು ಅಪ್ಪಣ್ಣ ಕಾಂಬ್ಳೆ, ದಲಿತ ವಿದ್ಯಾರ್ಥಿ ಪರಿಷತ್(ಡಿವಿಪಿ)ನ ನರಸಪ್ಪ ಬಡಿಗೇರ್, ದುರುಗೇಶ ಕಲಮಂಗಿ, ಶಿವಪುತ್ರ, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ, ಬಸವರಾಜ ಗೋಡಿಹಾಳ, ಸಿಪಿಐಎಂಎಲ್ ನ ಹೆಚ್ ಆರ್ ಹೊಸಮನಿ, ಮುದಿಯಪ್ಪ ಹೆಚ್ ಎನ್ ಕ್ಯಾಂಪ್, ಧರಗಯ್ಯ, ಸಂಗಪ್ಪ, ಹುಲುಗಪ್ಪ ಬಳ್ಳಾರಿ, ಎಂ. ನಿರಂಜನಕುಮಾರ್, ಎಂ. ಎಸ್ ರಾಜಶೇಖರ್, ಬಾಲಪ್ಪ, ಕರಿಯಮ್ಮ ವಿರುಪಾಪುರ, ರಂಗಮ್ಮ, ಶರಣಮ್ಮ, ದೇವಕೇಮ್ಮ, ಆಂಜನೇಯ್ಯ ಸೇರಿದಂತೆ ಇತರರು ಇದ್ದರು.

# ಮಧ್ಯಪ್ರಾಚ್ಯ ದೇಶಗಳಲ್ಲಿನ ಬಿಕ್ಕಟ್ಟು ಪ್ರಯಾಣಿಕರ ನೆರವಿಗಾಗಿ ಸಹಾಯವಾಣಿ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಪ್ರಚಲಿತದಲ್ಲಿರುವ ಅಸ್ಥಿರ ಪರಿಸ್ಥಿತಿಯಿಂದಾಗಿ ಅಂತರಾಷ್ಟ್ರೀಯ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲಾಡಳಿತವು ಈ ಕೆಳಗಿನ ಮಾಹಿತಿಯನ್ನು ಹಂಚಿಕೊಂಡಿದೆ:

ವೈಮಾನಿಕ ನಿರ್ಬಂಧ ಮತ್ತು ಪ್ರಚಲಿತ ಸ್ಥಿತಿ ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು (Air-space) ಮಾರ್ಚ್ 2ರವರೆಗೆ ಮುಚ್ಚಲಾಗಿದೆ.

ಈ ಅನಿರೀಕ್ಷಿತ ಅಡಚಣೆಯಿಂದಾಗಿ ಹಾಗೂ ಕರ್ನಾಟಕದ ಅನೇಕ ಪ್ರಯಾಣಿಕರು ಯುಎಇ (ದುಬೈ) ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಿಲುಕಿಕೊಂಡಿದ್ದಾರೆ.

ಜಿಲ್ಲಾಡಳಿತದ ಕ್ರಮಗಳು :

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ನಿರ್ದೇಶನದಂತೆ, ರಾಜ್ಯ ಮತ್ತು ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 24ಥ7 ಕಾರ್ಯನಿರ್ವಹಿಸುತ್ತಿವೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ರಾಯಭಾರಿ ಕಚೇರಿಗಳು ನೀಡುವ ಸೂಚನೆಗಳನ್ನು ಜಿಲ್ಲಾಡಳಿತವು ನಿರಂತರವಾಗಿ ಗಮನಿಸುತ್ತಿದೆ.

ಸಹಾಯವಾಣಿ ಸಂಖ್ಯೆಗಳಿಗೆ

ಬಳ್ಳಾರಿ ಜಿಲ್ಲೆಯ ನಿವಾಸಿಗಳು ಅಥವಾ ಅವರ ಸಂಬಂಧಿಕರು ಹೆಚ್ಚಿನ ಮಾಹಿತಿಗಾಗಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದು:

ಬಳ್ಳಾರಿ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 08392–277100,

1077 ಟೋಲ್ ಫ್ರೀ ಸಂಖ್ಯೆ,

ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ 080–22340676, 080–22253707 , ಟೋಲ್ ಫ್ರೀ ಸಂಖ್ಯೆ: 1070 ಗೆ ಕರೆ ಮಾಡಿ ಮಾಹಿತಿ ಹಾಗೂ ಸಹಾಯ ಪಡೆಯಬಹುದು.

ಸಾರ್ವಜನಿಕರಿಗೆ ಪ್ರಮುಖ ಸೂಚನೆಗಳು:

ಮಧ್ಯಪ್ರಾಚ್ಯ ದೇಶಗಳಲ್ಲಿರುವ ಕರ್ನಾಟಕದ ನಿವಾಸಿಗಳು ಹಾಗೂ ಜಿಲ್ಲೆಯವರಿದ್ದಲ್ಲಿ ಅಲ್ಲಿನ ಸ್ಥಳೀಯ ಸರ್ಕಾರಗಳು ನೀಡುವ ಸುರಕ್ಷತಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ಸಂಕಷ್ಟದಲ್ಲಿರುವವರು ಆಯಾ ದೇಶದ ಭಾರತೀಯ ರಾಯಭಾರಿ ಕಚೇರಿಯ ಸಹಾಯವಾಣಿಗೆ ಕರೆ ಮಾಡಬೇಕು ಅಥವಾ 'ಸಾರಥಿ ಸಹಾಯತಾ' (Sarthi Sahayata) ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ವಿಸಾ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ಹತ್ತಿರದ ಎಫ್.ಆರ್.ಆರ್.ಒ (FRRO) ಕಚೇರಿಯನ್ನು ಸಂಪರ್ಕಿಸಬೇಕೆಂದು ಜಿಲ್ಲಾಧಿಕಾರಿ ಕೆ ನಾಗೇಂದ್ರ ಪ್ರಸಾದ್ ರವರು ತಿಳಿಸಿದ್ದಾರೆ.

# ಕೋಟದ ಶ್ರೀ ಅಮೃತೇಶ್ವರಿ ದೇಗುಲದಲ್ಲಿ ಏಕಃಪವಿತ್ರ ನಾಗಮಂಡಲ ಸೇವೆ ಸಂಪನ್ನ



- ಮಲ್ಲಮ್ಮ ನುಡಿ ವಾರ್ತೆ ಕೋಟ

ಕೋಟದ ಶ್ರೀ ಅಮೃತೇಶ್ವರಿ ಹಲವು ಮಕ್ಕಳ ತಾಯಿ ದೇವಸ್ಥಾನದ ವತಿಯಿಂದ ಭಾನುವಾರ ಕೋಟದ ಗಾಂಧಿ ಮೈದಾನದಲ್ಲಿ ವೈಭವದ ಏಕಃಪವಿತ್ರ ನಾಗಮಂಡಲ ಸೇವೆ ಸಂಪನ್ನಗೊಂಡಿತು.

ಮಂಡಲೋತ್ಸವದಲ್ಲಿ ಸುಮಾರು 40,000 ಅಧಿಕ ಮಂದಿ ಭಕ್ತಾಧಿಗಳು ಅನ್ನಪ್ರಸಾದ ಸ್ವೀಕರಿಸಿ ನಾಗಮಂಡಲೋತ್ಸವದಲ್ಲಿ ಭಾಗಿಯಾದರು.

ಸಂಜೆ 7.00 ಗಂಟೆಗೆ ನಾಗನಿಗೆ ಹಾಲಿಟ್ಟು ಸೇವೆ ನಡೆದು 9:30 ರಿಂದ ನಾಗಮಂಡಲೋತ್ಸವಕ್ಕೆ ಚಾಲನೆ ದೊರಕಿದ್ದು ಮಣೂರು ಮಧುಸೂದನ ಬಾಯರಿ ಮತ್ತು ಬಳಗದವರ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳು ನಾಗಮಂಡಲದ ಕೇಂದ್ರದಲ್ಲಿ ನೆರವೇರಿತು.

ಮಂಡಲೋತ್ಸವದಲ್ಲಿ ಪಾತ್ರಿಗಳಾಗಿ ಕಾರ್ಕಡ ವೆಂಕಟರಮಣ ಹೊಳ್ಳ ಮತ್ತು ವೈದ್ಯರಾಗಿ ರಾಘವೇಂದ್ರ ವೈದ್ಯ ಮತ್ತು ಬಳಗ ಬಾಗಿಯಾದರು.

ಸಹಸ್ರ ಸಂಖ್ಯೆಯಲ್ಲಿ ಮಂಡಲ ಸೇವೆಯನ್ನು ಕಣ್ತುಂಬಿಕೊಂಡರು. ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಆನಂದ ಸಿ.ಕುಂದರ್, ಸದಸ್ಯರಾದ ಕೆ.ಸುಬ್ರಾಯ ಜೋಗಿ, ಸುಭಾಷ್ ಶೆಟ್ಟಿ, ಗಣೇಶ್ ಕೆ. ನೆಲ್ಲಿಬೆಟ್ಟು, ಜ್ಯೋತಿ ದೇವದಾಸ್ ಕಾಂಚನ್, ಸುಧಾ ಎ. ಪೂಜಾರಿ, ರತನ್ ಐತಾಳ, ಶಿವ ಪೂಜಾರಿ, ಚಂದ್ರಶೇಖರ ಆಚಾರ್, ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

# ಪೂರ್ವಭಾವಿ ಸಭೆ



- ಮಲ್ಲಮ್ಮ ನುಡಿ ವಾರ್ತೆ ಕಾಳಗಿ

ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ದೀನ ದಲಿತರ

ಆಶಾಕಿರಣರಾದ ಡಾ.ಬಾಬು ಜಗಜೀವನರಾಮ್ ಅವರ 119ನೇ

ಜಯಂತೋತ್ಸವದ ಅಂಗವಾಗಿ ಮಾರ್ಚ್ 6ರಂದು ಶುಕ್ರವಾರ ಬೆಳಗ್ಗೆ 11ಕ್ಕೆ ಕಾಳಗಿ

ತಾಲೂಕಿನ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ ಎಂದು ಹಸಿರು ಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ ರಾಮ ರವರ 118ನೇ ಜಯಂತೋತ್ಸವವನ್ನು ಸಮಿತಿಯ ಕಾಳಗಿ ತಾಲೂಕು ಅಧ್ಯಕ್ಷರಾದ ಮಲ್ಲಿಕಾರ್ಜುನ ಸಿಂಗೆ ಗೊಟೂರ ಅವರು ತಿಳಿಸಿದ್ದಾರೆ.

ಈ ಸಭೆಯಲ್ಲಿ ಜಯಂತೋತ್ಸವದ ಅಧ್ಯಕ್ಷ ಹಾಗೂ ಇತರ ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು. ಸಮಾಜದ ಹಿರಿಯ ಮುಖಂಡರು, ಹೋರಾಟಗಾರರು,

ಮಾದಿಗ ಸಮಾಜ ಎಲ್ಲಾ ಕುಲಬಾಂಧವರು ಸಭೆಯಲ್ಲಿ ಭಾಗವಹಿಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಶಾಸಕ ಭರತ್ ರೆಡ್ಡಿ ಸೇರಿ 35 ಕ್ಕೂ ಹೆಚ್ಚು ಜನ ದುಬೈನಲ್ಲಿ



- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇರಾನ್ ಇಸ್ರೇಲ್ ಯುದ್ಧದಿದ್ದಾಗಿ ನಿನ್ನೆಯಿಂದ ದುಬೈನಿಂದ ಅಂತರರಾಷ್ಟ್ರೀಯ ವಿಮಾನ ಹಾರಾಟ ಬಂದ್ ಮಾಡಲಾಗಿದೆ ಇದರಿಂದಾಗಿ. ನಗರದ ಶಾಸಕ ಭರತ್ ರೆಡ್ಡಿ ಸೇರಿದಂತೆ ಬಳ್ಳಾರಿ ಜಿಲ್ಲೆಯಿಂದ ಪ್ರವಾಸಕ್ಕೆ ತೆರಳಿದ್ದ 35 ಕ್ಕೂ ಹೆಚ್ಚು ಜನರು ದುಬೈನಲ್ಲಿ ಸಧ್ಯ ಹಿಂತಿರುಗಿ ಬರಲು ಪ್ಲೈಟ್ ಇಲ್ಲದೆ ಸಿಲುಕಿದ್ದಾರೆ.

ದುಬೈ ಪ್ರವಾಸಕ್ಕೆ ಶಾಸಕ ಭರತ್ ರೆಡ್ಡಿ ಕುಟುಂಬ ಸಮೇತ ತೆರಳಿದ್ದಾರಂತೆ. ಅವರು ದುಬೈನಲ್ಲಿ ಸುರಕ್ಷಿತವಾಗಿದ್ದಾರೆಂದು ತಿಳಿದು ಬಂದಿದೆ.

ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಯಾಳ್ಪಿ ಮೇಟಿ ಪಂಪನಗೌಡ, ಅವರ ಸಹೋದರ ಬಸನಗೌಡ, ನಿವೃತ್ತ ಪ್ರಾಂಶುಪಾಲ ಕೆ.ಎ. ನಾಗಭೂಷಣ ಸೇರಿದಂತೆ 35 ಜನರು ಹಾಗು ಚಿತ್ರ ದುರ್ಗ ಜಿಲ್ಲೆಯ 15 ಜನರ ತಂಡ ಬೆಂಗಳೂರಿನಿಂದ ಫೆಬ್ರವರಿ 24ರಂದು ದುಬೈ ಪ್ರವಾಸಕ್ಕೆ ತೆರಳಿದ್ದರು.

ನಿನ್ನೆ ಪ್ರವಾಸ ಮುಗಿಸಿ ಹಿಂದಿರುಗಬೇಕಿತ್ತು. ರಾತ್ರಿ 9 ಗಂಟೆಗೆ ವಿಮಾನ ಇತ್ತು. ಇವರು ಏರ್ ಪೋರ್ಟ್ ಗೆ ಹೋದರೆ ಯುದ್ಧದ ಭೀತಿ ಹಿನ್ನಲೆಯಲ್ಲಿ ಅಂತರ ರಾಷ್ಟ್ರೀಯ ವಿಮಾನ ಹಾರಾಟ ಬಂದ್ ಮಾಡಲಾಗಿದ್ದರಿಂದ ಇವರು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಬಹುತೇಖ ಎಲ್ಲರೂ ವೃದ್ದರಾಗಿದ್ದಾರೆ. ವಿಮಾನ ರದ್ದಾಗಿರುವುದರಿಂದ ದುಬೈ ನ ಬುರ್ಜ್ ಖಲೀಫಾ ಕಟ್ಟಡದ ಪಕ್ಕದ ಲಾಡ್ಜ್ ನಲ್ಲಿ ಸಧ್ಯ ತಂಗಿದ್ದಾರೆ. ಸರ್ಕಾರದ ಪ್ರತಿನಿಧಿಗಳ ಸಂಪರ್ಕ ಮಾಡಿದ್ದಾರೆ. ವಾಪಸ್ ಭಾರತಕ್ಕೆ ಕರೆದುಕೊಂಡು ಬರುವ ಭರವಸೆ ನೀಡಿದ್ದಾರೆಂದು ಪಂಪನಗೌಡ ಅವರ ಪುತ್ರ ದಿವಾಕರಗೌಡ ಹೇಳಿದ್ದಾರೆ.

# ಮುದಗಲ ಶಾಂತಿ ಸೌಹಾರ್ದತೆಗೆ ಹೆಸರು



- ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಹಬ್ಬಗಳ ಆಚರಣೆಯಲ್ಲಿ ಮುದಗಲ್ ಪಟ್ಟಣ ಶಾಂತಿ ಸೌಹಾರ್ದತೆಗೆ ಹೆಸರು ವಾಸಿಯಾಗಿದೆ ಎಂದು ಪಿಎವೆಂಕಟೇಶ ಮಾಡಗೇರಿ ಹೇಳಿದರು.

ಪಟ್ಟಣದ ಪೋಲಿಸ್ ಠಾಣೆಯಲ್ಲಿ ಹಮ್ಮಿಕೊಂಡಿದ್ದ ಹೋಳಿ ಹುಣ್ಣಿಮೆ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸರ್ವರೂ ಹಬ್ಬವನ್ನು ಶಾಂತಿ ಸೌಹಾರ್ದತೆಯಿಂದ ಆಚರಣೆ ಮಾಡಬೇಕು. ಸ್ನೇಹ ಸೌಹಾರ್ದತೆಗೆ ಮತ್ತು ಬಣ್ಣಗಳ ಆಚರಣೆಯಾಗಿದೆ, ಹೋಳಿ ಹಬ್ಬ ಆಚರಣೆ ಯಲ್ಲಿ ಯಾರಿಗೂ ತೊಂದರೆಯಾಗದಂತೆ ನೋಡಿಕೊಳ್ಳುವದು ಮತ್ತು ಸಹೋದರತೆ ಕಾಪಾಡುವದು ಮುಖ್ಯವಾಗಿದೆ. ಒತ್ತಾಯದಿಂದ ಬಣ್ಣ ಹಾಕಬೇಡಿ, ಯಾವುದೇ ಅಹಿತಕರ ಘಟನೆ ಜರುಗದಂತೆ ಹಬ್ಬ ಆಚರಣೆ ಮಾಡಿ ಎಂದು ತಿಳಿಸಿದರು.

ರಾಘವೇಂದ್ರ ಗುಮಸ್ತೆ, ಶರಣಪ್ಪ ಕಟ್ಟಿಮನಿ ಮಾತನಾಡಿದರು.

ಮುಖಂಡರಾದ ಕರಿಯಪ್ಪ ಯಾದವ, ಸಿದ್ದಯ್ಯ ಸ್ವಾಮಿ, ಕಾಂತಕುಮಾರ ಪತ್ತಾರ, ನಾಗರಾಜ ತಳವಾರ, ಮಲ್ಲಪ್ಪ ಹೂಗಾರ, ರಮೇಶ, ಹನುಮಂತ, ಬಸವರಾಜ ಬಂಕದಮನಿ, ವಿರೇಶ ಉಪ್ಪಾರ ಸೇರಿದಂತೆ ಇತರರಿದ್ದರು.

# ನೀರು ಹರಿಸಲು ರೈತರಿಂದ ಆಗ್ರಹ ರಾಷ್ಟ್ರೀಯ ಹೆದ್ದಾರಿ ಬಂದ್ ಎಚ್ಚರಿಕೆ



- ಮಲ್ಲಮ್ಮ ನುಡಿ ವಾರ್ತೆ ಇಂಡಿ

ಉಪಕಾಲುವೆಯ 35, 36ನೇ ನಂಬರಿನ ಮೂಲಕ ನೀರು ಹರಿಸಲಾಗದೇ ಇರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಇಂದು ವಿಜಯಪುರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಜಿಲ್ಲಾ ಅಧ್ಯಕ್ಷ ಸಂಗಮೇಶ ಸಾಗರ ಅವರು, ವಿಜಯಪುರ ಜಿಲ್ಲೆಯ ಚಡಚಣ ಹಾಗೂ ಇಂಡಿ ತಾಲೂಕಿನ ಮಣಂಕಲಗಿ, ಏಳಗಿ, ಕೆರೂರ, ತದ್ದೇವಾಡಿ, ಹಲಸಂಗಿ, ಉಮಾಣಿ, ಲೋಣಿ ಬಿ.ಕೆ. ಸೇರಿದಂತೆ ಹಲವು ಗ್ರಾಮಗಳಿಗೆ ಹಾದು ಹೋಗುವ ಇಂಡಿ ಉಪಕಾಲುವೆಯ 35 ಮತ್ತು 36ನೇ ನಂಬರಿಗೆ ಇದುವರೆಗೆ ನೀರು ಬಂದಿಲ್ಲ ಎಂದು ಆರೋಪಿಸಿದರು. ಈ ಭಾಗದ ರೈತರು ಹಾಗೂ

ಜನಜಾನುವಾರುಗಳು ಬೇಸಿಗೆ ಕಾಲದಲ್ಲಿ ತೀವ್ರ ನೀರಿನ ಸಂಕಷ್ಟ ಎದುರಿಸುತ್ತಿದ್ದಾರೆ. ಕುಡಿಯುವ ನೀರಿಗಾಗಿ ಉಪಕಾಲುವೆ ಮೂಲಕ ತಕ್ಷಣ ನೀರು ಹರಿಸಬೇಕಾಗಿದ್ದು, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ನೀರು ಹರಿಸಲಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಕುರಿತು ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಜಿಲ್ಲಾಧಿಕಾರಿಗಳು ವಿಶೇಷ ಗಮನ ಹರಿಸಿ ತಕ್ಷಣ ಕ್ರಮ ಕೈಗೊಂಡು ರೈತರು

ಹಾಗೂ ಜಾನುವಾರುಗಳಿಗೆ ನೀರು ಒದಗಿಸಬೇಕು ಎಂದು ಆಗ್ರಹಿಸಿದರು. ಇಲ್ಲವಾದಲ್ಲಿ ಮಾರ್ಚ್ 15ರಂದು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

# ಕಲ್ಯಾಣ ನಿರ್ಲಕ್ಷಿಸಿದ ಕಾಂಗ್ರೆಸ್ ಸರ್ಕಾರ: ನಿಖಿಲ್ ಕುಮಾರಸ್ವಾಮಿ



- ಮಲ್ಲಮ್ಮ ನುಡಿ , ಹಗರಿಬೊಮ್ಮನಹಳ್ಳಿ

ಕಲ್ಯಾಣ ಕರ್ನಾಟಕದಲ್ಲಿ ಆಡಳಿತ ಪಕ್ಷದ ಬಹುದೊಡ್ಡ ಪ್ರಭಾವಿಗಳು, ಹೆಚ್ಚು ಸಂಖ್ಯೆಯಲ್ಲಿ ಕಾಂಗ್ರೆಸ್ ಶಾಸಕರಿದ್ದರೂ ನಿಜವಾದ ಕಲ್ಯಾಣ ಆಗಿಲ್ಲ, ಎಂದು ಜೆಡಿಎಸ್ ಪಕ್ಷದ ಯುವ ಘಟಕದ ರಾಜ್ಯದ್ಯಕ್ಷ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

1983ರಲ್ಲಿ ರಾಜ್ಯ ವಿಧಾನಸಭೆಯಲ್ಲಿ ಕೇವಲ 02 ಸ್ಥಾನಗಳನ್ನು ಹೊಂದಿದ್ದ ಜನತಾದಳ ಪ್ರಾದೇಶಿಕ ಪಕ್ಷವಾಗಿದ್ದು, ಅದೇ ಪಕ್ಷದಿಂದ ದೇವೇಗೌಡರು ಈ ದೇಶದ ಪ್ರಧಾನಿ ಆಗಿದ್ದು, ಕುಮಾರಣ್ಣನವರು ಮೂರು ಬಾರಿ ಈ ರಾಜ್ಯದ ಮುಖ್ಯಮಂತ್ರಿಯಾದದ್ದು ಇದು ಚರಿತ್ರಾರ್ಹ ಎಂದು ಭಾವಿಸುತ್ತೇನೆ ಎಂದು ರಾಜ್ಯ ಯುವಜನತಾದಳದ ಅಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅಂದರು. ಅವರು ಪಟ್ಟಣದ ಯು. ಕೆ.ಕೊಟ್ರಬಸಪ್ಪ ಅವರ ಬಯಲು ಜಾಗದಲ್ಲಿ ತಾಲ್ಲೂಕು ಜನತಾದಳ ಏರ್ಪಡಿಸಿದ್ದ ಜನರೊಂದಿಗೆ ಜನತಾದಳ, ವಿಜಯನಗರ ನೂತನ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭ ಹಾಗೂ ಜನತಾದಳದ ಬೆಳ್ಳಿಹಬ್ಬದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ರಾಜ್ಯದಲ್ಲಿರುವ ಆಡಳಿತ ಪಕ್ಷ ಕೇವಲ ಗ್ಯಾರಂಟಿಗಳನ್ನು ತಂದು ಅದರ ಭ್ರಮೆಯಲ್ಲಿ ಕೆಲಸ ಮಾಡುತ್ತಿದ್ದು, ತನ್ನ ತಪ್ಪುಗಳನ್ನು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂಡಿಸುತ್ತಿದೆ ಎಂದು ಕಾಂಗ್ರೆಸ್ ಸರಕಾರದ ವಿರುದ್ಧ ಹರಿಹಾಯ್ದರು. ಜನತಾದಳ ಪಕ್ಷ ಈ ರಾಜ್ಯದ ಜನರ ಹೃದಯದಲ್ಲಿದೆ ಎಂದು ಅವರು ಹೇಳಿದರು.

ಮಾಜಿ ಪ್ರಧಾನಿ ದೇವೇಗೌಡರು ಉತ್ತರ ಕರ್ನಾಟಕದಲ್ಲಿ ಕೃಷ್ಣ ಮೇಲ್ದಂಡೆ ಹಂತ 1 ಹಂತ 2 ನ್ನು ನಿರ್ಮಿಸುವುದರ ಮೂಲಕ ನೀರಿನ ಮಹತ್ವವನ್ನು ತೋರಿಸಿಕೊಟ್ಟರು. ತದನಂತರ ಬಂದ ಕುಮಾರಸ್ವಾಮಿ ಅವರು ಸುಮಾರು 25 ಸಾವಿರ ಕೋಟಿ ರೂಪಾಯಿಗಳ ರೈತರ ಸಾಲಮನ್ನಾ ಮಾಡುವುದರ ಮೂಲಕ ರಾಜ್ಯದ ಜನತೆಯ ಮನದಲ್ಲಿ ಮನೆ ಮಾಡಿದ್ದಾರೆ ಎಂದು ನುಡಿದರು.

ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ ಮಾತನಾಡಿ, ಈ ರಾಜ್ಯದಲ್ಲಿ ರೈತರಿಗಾಗಿ ಕೆಲಸ ಮಾಡಿದ ಪಕ್ಷವೇನಾದರೂ ಇದ್ದರೆ ಅದು ಕುಮಾರಣ್ಣರ ಜಾತ್ಯತೀತ ಜನತಾದಳ, ಇಡೀ ಜಗತ್ತಿನಲ್ಲಿ ಗ್ರಾಮ ವಾಸ್ತವ್ಯದ ಪರಿಕಲ್ಪನೆಯನ್ನು ಕೊಟ್ಟ ಪಕ್ಷವಿದ್ದರೆ ಅದು ದೇವೇಗೌಡರ ಜನತಾದಳ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮೂಗುತಿ ಕೊಟ್ಟವರ ಬದಲಾಗಿ ಮೂಗು ಕೊಟ್ಟವರನ್ನು ಎಂದಿಗೂ ಮರೆಯಬಾರದು ಎಂಬುವುದರ ಮೂಲಕ ಈವತ್ತು ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ ಎಂದರೆ ದೇವೇಗೌಡರನ್ನು ಮರೆಯಬಾರದು ಎಂದು ಮಾರ್ಮಿಕವಾಗಿ ನುಡಿದರು.

ಕ್ಷೇತ್ರದ ಶಾಸಕ ನೇಮಿರಾಜ್ ನಾಯ್ಕ್ ಮಾತನಾಡಿ, 2023 ರಲ್ಲಿ ನನ್ನ ಜೇಬಲ್ಲಿ ಹಣವಿಲ್ಲದಿದ್ದರೂ, ನಿಮ್ಮ ಮತ ಭಿಕ್ಷೆಯಿಂದ ನನ್ನನ್ನು ವಿಜಯಶಾಲಿಯನ್ನಾಗಿ ಮಾಎಇದ ಕ್ಷೇತ್ರದ ಮತದಾರರೆಲ್ಲರಿಗೂ ನನ್ನ ಅಭಿನಂದನೆಗಳು, 2028ರ ವಿಧಾನ ಸಭಾ ಚುನಾವಣೆಯಲ್ಲಿ ಜಾ.ಜನತಾದಳ ಪಕ್ಷವನ್ನು ಅಧಿಕ ಬಹುಮತದ ಮೂಲಕ ಗೆಲ್ಲಿಸಿ ಮತ್ತೊಮ್ಮೆ ಕುಮಾರಸ್ವಾಮಿ ಅವರನ್ನು ಈ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡುತ್ತೀರೆಂದು ನಂಬಿದ್ದೇನೆ ಎಂದರು.

ಹರಿಹರದ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ಮುಂದಿನ ದಿನಮಾನಗಳಲ್ಲಿ ಈ ಕ್ಷೇತ್ರ ಶಾಸಕ ನೇಮಿರಾಜ್ ನಾಯ್ಕ ಹಾಗೂ ಜಿಲ್ಲಾಧ್ಯಕ್ಷ ಬದಾಮಿ ಮೃತ್ಯುಂಜಯ ಇವರ ನೇತೃತ್ವದಲ್ಲಿ ಜನತಾದಳ ಹೆಚ್ಚು ಪ್ರವರ್ಧಮಾನಕ್ಕೆ ಬರಲಿ ಎಂದು ಆಶಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನೂತನ ಜಿಲ್ಲಾಧ್ಯಕ್ಷ ಬದಾಮಿ ಮೃತ್ಯುಂಜಯ ಮಾತನಾಡಿ, ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರು ಜಾತ್ಯತೀತ ಜನತಾದಳವನ್ನು ಕಟ್ಟಿ ಬೆಳೆಸಿದ ಪರಿಯನ್ನು ಕೊಂಡಾಡಿದರು.

ವೇದಿಕೆಯ ಮುಂಭಾಗ ಜನರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅದಕ್ಕೂ ಮುಂಚೆ

ಪಟ್ಟಣದ ಮಿನಿ ವಿಧಾನ ಸೌಧದಿಂದ ಲಾರಿಯಲ್ಲಿ ನಿಖಿಲ್ ಕುಮಾರಸ್ವಾಮಿ, ಶಾಸಕ ನೇಮಿರಾಜ್ ನಾಯ್ಕ, ಮಾಜಿ ಶಾಸಕ ಅನಿಲ್ ಲಾಡ್ ಅವರನ್ನು ಒಳಗೊಂಡಂತೆ, ಜೊತೆಗೆ ಸುಮಾರು 500 ಆಟೋಗಳು, 300 ಸೈಕಲ್ ಮೋಟಾರ್ ಗಳು ಮತ್ತು ಸಹಸ್ರಾರು ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು. ವೇದಿಕೆಯಲ್ಲಿ ಪಕ್ಷದ ಕಾರ್ಯಕರ್ತರಾದ ಮೀನಳ್ಳಿ ತಾಯಣ್ಣ, ರಾರಾಳ್ ಶೇಖರಪ್ಪ, ಜಾತ್ಯತೀತ ದಳದ ಕ್ಷೇತ್ರದ ಅಧ್ಯಕ್ಷರಾದ ವೈ. ಮಲ್ಲಿಕಾರ್ಜುನ, ಸೇರಿದಂತೆ ಗಣ್ಯರು ಹಾಜರಿದ್ದರು.

# ಪೋಲಿಸ್ ಮ್ಯಾರಥಾನ್‌ಗೆ ಡಿಸಿ,ಎಸ್‌ಪಿ ಚಾಲನೆ

- ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಶಾಂತಿ, ಸೌಹಾರ್ಧತೆ, ಭಾವೈಕ್ಯತೆಯ ಸಂದೇಶವನ್ನು ಸಾರುವ ಉದ್ದೇಶದಿಂದ ನಗರದಲ್ಲಿ ಹಮ್ಮಿಕೊಂಡ 5ಕೆ ಮ್ಯಾರಥಾನ್‌ಗೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಜಂಟಿಯಾಗಿ ಚಾಲನೆ ನೀಡಿದರು.

ರವಿವಾರ ನಗರದ ಬಸವೇಶ್ವರ ಸರ್ಕಲ್ ಹತ್ತಿರ ಬಾಗಲಕೋಟೆ ಜಿಲ್ಲಾ ಪೊಲೀಸ್ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಸಹಯೋಗದಲ್ಲಿ ಹಮ್ಮಿಕೊಂಡ ಮ್ಯಾರಥಾನ್‌ಗೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿಗಳು, ಮ್ಯಾರಥಾನ್‌ಗಳು ಸಮಾಜದಲ್ಲಿ ಒಗ್ಗಟ್ಟಿನ ಭಾವನೆಯನ್ನು ಬಲಪಡಿಸುತ್ತವೆ. ಆರೋಗ್ಯಕರವಾದ




ಸಮಾಜ ಇದ್ದಾಗ ಮಾತ್ರ ನಾವೆಲ್ಲರೂ ಚೆನ್ನಾಗಿ ಇರಲು ಸಾಧ್ಯವಾಗುತ್ತದೆ. ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಾಗ ಮಾನಸಿಕವಾಗಿ ಬಲಿಷ್ಠವಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ, ಪೊಲೀಸ್ ಇಲಾಖೆ ವತಿಯಿಂದ ಬಾಗಲಕೋಟೆ ನಗರದಲ್ಲಿ ಸೌಹಾರ್ದತೆ ಮತ್ತು ಭಾವೈಕ್ಯತೆಗಾಗಿ ನಮ್ಮ ಓಟ ಎಂಬ ಧ್ಯೇಯ ವ್ಯಾಕ್ಯದೊಂದಿಗೆ ಮ್ಯಾರಥಾನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಸಾಕಷ್ಟು ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿರುವುದು ಸಂತೋಷದ ವಿಷಯವಾಗಿದೆ ಎಂದು ಹೇಳಿದರು.

ಮ್ಯಾರಥಾನ್ ನಗರದ ಬಸವೇಶ್ವರ ಸರ್ಕಲ್‌ನಿಂದ ಪ್ರಾರಂಭವಾಗಿ ಪಂಕಾ ಮಸೀದಿ, ಹಳೆ ಪೋಸ್ಟ ಆಫೀಸ್, ಅಂಬೇಡ್ಕರ ಸರ್ಕಲ್, ಹಳೆ ನಿರೀಕ್ಷಣಾ ಮಂದಿರ ಕ್ರಾಸ್, ಕೆರೂಡಿ ಆಸ್ಪತ್ರೆ, ರೈಲು ನಿಲ್ದಾಣ ನಂತರ ಮರಳಿ ಬಸವೇಶ್ವರ ಸರ್ಕಲ್‌ಗೆ ಮುಕ್ತಾಯಗೊಂಡಿತು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ವಸತಿ ನಿಲಯದ ವಿದ್ಯಾರ್ಥಿನಿಯರು, ಕ್ರೀಡಾಪಟುಗಳು, ಕರಾಟೆ ವಿದ್ಯಾರ್ಥಿಗಳು, ಭಾರತೀಯ ಸ್ಟೇಟ್ ಬ್ಯಾಂಕನ ಅಧಿಕಾರಿ ಹಾಗೂ ಸಿಬ್ಬಂದಿಗಳು, ಸಾರ್ವಜನಿಕರು ಸೇರಿ 500 ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಪ್ರಾರಂಭದಲ್ಲಿ ಕರಾಟೆ ಕೋಚ್ ಎಸ್. ಆರ್.ರಾಠೋಡ ನೇತೃತ್ವದಲ್ಲಿ ಏರೋಬಿಕ್ಸ್ ನಡೆಯಿತು.

# ನಾವು ಸುರಕ್ಷಿತವಾಗಿದ್ದೇವೆ, ಯಾವುದೇ ಆತಂಕ ಬೇಡ



ಬಳ್ಳಾರಿ: ಇಸ್ರೇಲ್, ಅಮೆರಿಕ, ಇರಾನ್ ಮಧ್ಯೆನಡೆಯುತ್ತಿರುವ ಭೀಕರವೈಮಾನಿಕದಾಳಿಹಿನ್ನೆಲೆಯಲ್ಲಿ ದುಬೈನಲ್ಲಿ ಸಿಲುಕಿದ್ದ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ವಿಡಿಯೋ ರಿಲೀಸ್ ಮಾಡಿ, ನಾವೆಲ್ಲರೂ ಸುರಕ್ಷಿತರಾಗಿದ್ದೇವೆ, ಯಾವುದೇ ಆತಂಕ ಬೇಡ ಎಂದು ತಿಳಿಸಿದ್ದಾರೆ. ವೈಮಾನಿಕ ದಾಳಿಯ ಕಿಚ್ಚು ಕನ್ನಡಿಗರನ್ನು ಆತಂಕಕ್ಕೆ ತಳ್ಳಿದ್ದು, ಪ್ರವಾಸಕ್ಕೆಂದು ದುಬೈಗೆ ತೆರಳಿದ ಬಳ್ಳಾರಿಯ ನಗರ ಶಾಸಕ ನಾರಾ ಭರತ್ ರೆಡ್ಡಿ ಸೇರಿ 50 ಜನರ ತಂಡ ಲಾಕ್ ಆಗಿದ್ದು, ಕುಟುಂಬಸ್ಥರಲ್ಲಿ ಸಹಜವಾಗಿ ಆತಂಕ ಮನೆ ಮಾಡಿದೆ. ಬಳ್ಳಾರಿಯ 35 ಜನರ ತಂಡ ಸಿರುಗುಪ್ಪ 15 ಜನರು ಸೇರಿ 50 ಜನರ ತಂಡ ಸಿಲುಕಿಕೊಂಡಿದ್ದು, ಈ ತಂಡದ ಸದಸ್ಯರು ವಿಡಿಯೋ ಕಾಲ್ ಮಾಡಿ ಸಮಸ್ಯೆಯ ಅಳಲನ್ನು ತೋಡಿಕೊಂಡಿದ್ದರು. ಆದರೆ, 'ಗರ ಶಾಸಕ ನಾರಾ ಭರತ್ ರೆಡ್ಡಿ ಅವರು, ಮಾತನಾಡಿರಲಿಲ್ಲ. ಆಪ್ತರೊಂದಿಗೆ ಮಾತ್ರ ಕಾಲ್ ಮಾಡಿ ಮಾತನಾಡಿದ್ದರು. ಸಹಜವಾಗಿ ಅವರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರಿಗೆ ಆತಂಕ ಮನೆ ಮಾಡಿತ್ತು. ಒಂದು ನಿಮಿಷ

**ದುಬೈನಲ್ಲಿ ಸಿಲುಕಿದ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ವಿರಿಡಿಯೋ ರಿಲೀಸ್,**

ಮಾತನಾಡಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತದೆ. ನಾನು ಹಾಗೂ ನಮ್ಮ ಕುಟುಂಬದ ಸದಸ್ಯರು ಸುರಕ್ಷಿತರಾಗಿದ್ದೇವೆ, ಯಾವುದೇ ಆತಂಕ ಬೇಡ, ಜೊತೆಗೆ ನಮ್ಮ ಬಳ್ಳಾರಿಯ 35 ಜನರ ತಂಡವು ಸುರಕ್ಷಿತವಾಗಿದೆ. ಎಲ್ಲರೊಂದಿಗೂ ಸಂಪರ್ಕದಲ್ಲಿರುವೆ. ಸರ್ಕಾರವು ಎಲ್ಲ ವ್ಯವಸ್ಥೆ ಕಲ್ಪಿಸಿದೆ. ಜೊತೆಗೆ ನಮ್ಮ ಕಚೇರಿಯ ಸಿಬ್ಬಂದಿಗಳು ಎಲ್ಲ ವ್ಯವಸ್ಥೆ ಮಾಡಿದೆ. ಯಾವುದೇ ಆತಂಕ ಬೇಡ, ನಾವೆಲ್ಲರೂ ಸುರಕ್ಷಿತರಾಗಿದ್ದೇವೆ ಎಂದು ತಿಳಿಸಿದ್ದಾರೆ.

# ೨೦ರ ವಯಸ್ಸಿನಲ್ಲಿ ಎಡವಟ್ಟು ಮಾಡಿಕೊಂಡರೆ ೭೦ರ ವಯಸ್ಸಲ್ಲಿ ಕಷ್ಟ : ಕಾಳಪ್ಪ ಪತ್ತಾರ್



ಬಳ್ಳಾರಿ.: ಮಾನವನ ಜೀವನದಲ್ಲಿ ವಿದ್ಯಾರ್ಥಿ ಜೀವನ ಅತ್ಯಂತ ಪ್ರಮುಖವಾದ ಘಟ್ಟ, ಆ ಅವಧಿಯಲ್ಲಿ ನಾವು ಸರಿಯಾದ ಮಾರ್ಗವನ್ನು ಕಂಡುಕೊಳ್ಳದಿದ್ದರೆ ಜೀವನದಲ್ಲಿ ತುಂಬಾ ಕಷ್ಟ ಪಡಬೇಕಾಗುತ್ತದೆ ಒಬ್ಬ ಯುವಕ ಅಥವಾ ಯುವತಿ 20ರಲ್ಲಿ ಎಡವಿದರೆ 70ನೇ ವಯಸ್ಸಿನಲ್ಲಿ ಬಹಳ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ ಎಂದು ನಿವೃತ್ತ ಮುಖ್ಯೋಪಾಧ್ಯಾಯರಾದ ಕಾಳಪ್ಪ ಪತ್ತಾರ್ ತಿಳಿಸಿದರು.

ಅವರು ನಗರದ ಮಧಿಕೇರಿ ಭೀಮಯ್ಯ ಪ್ರೌಢಶಾಲೆಯಲ್ಲಿ ಹಳೆ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಪುನರ್ಮಿಲನ ಮತ್ತು ಗುರು ವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಉನ್ನತವಾದ ಶಿಕ್ಷಣವನ್ನು ಪಡೆದು-ಕೊಂಡು ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳಬೇಕು ಇದರಿಂದ ಸಮಾಜದಲ್ಲಿ ಮತ್ತು ಕುಟುಂಬದಲ್ಲಿ ಒಳ್ಳೆಯ ಹೆಸರು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಅದು ಬಿಟ್ಟು ನಾನಾತರದ ಅಡ್ಡದಾರಿಗಳನ್ನು ಹಿಡಿದು ಸಮಯವನ್ನು ವ್ಯರ್ಥ ಮಾಡಿದಲ್ಲಿ ಜೀವನದ ಕೊನೆಯ ದಿನಗಳಲ್ಲಿ ಬಹಳ ಪಶ್ಚತಾಪ ಪಡಬೇಕಾಗುತ್ತದೆ ಎಂದು ವಿದ್ಯಾರ್ಥಿಗಳನ್ನು ಎಚ್ಚರಿಸಿದರು.

ತಮ್ಮ ಎಂದಿನ ಶೈಲಿಯಲ್ಲಿ ಹಾಸ್ಯ ಭರಿತವಾದ ಮಾತುಗಳನ್ನಾಡಿದ ಕಾಳಪ್ಪ ಪತ್ತಾರ್, ತಮ್ಮ ಭಾಷಣ ದುದ್ದಕ್ಕೂ ಹಾಸ್ಯ ಪ್ರಸಂಗಗಳನ್ನು ಹೇಳುತ್ತಾ ಹಳೆ ವಿದ್ಯಾರ್ಥಿಗಳನ್ನು ನಗೆಗಡಲಿನಲ್ಲಿ ತೇಲಿಸಿದರು. ಜೊತೆಗೆ ಜೀವನದ ಕುರಿತು ಗಂಭೀರವಾದ ವಿಷಯಗಳನ್ನು ತಿಳಿಸಿ ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಾದ ಹಳೆ ನಾಗರಾಜರಾಯರು, ಆಶಾ ಬಾಯಿ, ಬೆಟ್ಟಪ್ಪ ಸೇರಿದಂತೆ ಅಂದು ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಬೋಧಕ ಬೋಧ-ಕೇತರ ಸಿಬ್ಬಂದಿಗಳು ಮತ್ತು ಹಾಲಿ ಮುಖ್ಯ ಉಪಾಧ್ಯಯರಾದ ಶ್ರೀನಿವಾಸ್ ಹಾಗೂ ನೂರಾರು ಜನ ಹಳೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನಕಲಿ ಡಾಕ್ಟರ್ ಮೋಹನ್ ಕ್ಲಿನಿಕ್ ಸೀಜ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆ ಕಂಪ್ಲಿ ತಾಲೂಕಿನಲ್ಲಿ ವೈದ್ಯಕೀಯ ಪದವಿ ಪಡೆಯದೇ ತಾವು ವೈದ್ಯರೆಂದು ಬಿಂಬಿಸಿ ವೈದ್ಯ ವೃತ್ತಿ ಮಾಡುತ್ತಿದ್ದ ನಕಲಿ ವೈದ್ಯರ ಕ್ಲಿನಿಕ್ ಗಳ ಮೇಲೆ ದಾಳಿ ನಡೆಸಿ ಸೀಜ್ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.




ಕಂಪ್ಲಿ ನಗರದ ಡಾಕ್ಟರ್ ಮೋಹನ್ ಕ್ಲಿನಿಕ್ ಇರುವ ಎಂಬುವವ ಯಾವುದೇ ವೈದ್ಯಕೀಯ ಪದವಿ ಮಾನ್ಯತೆ ಪಡೆಯದೇ ನಕಲಿ ವೈದ್ಯನಾಗಿದ್ದು, ತಾನು ಫೈಲ್ಸ್ ವೈದ್ಯನೆಂದು ಸಾರ್ವಜನಿಕರಲ್ಲಿ ಸುಳ್ಳು ಹೇಳಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ. ಸಾರ್ವಜನಿಕರಿಂದ ದೂರು ಬಂದ ಮೇಲೆ ಕ್ಲಿನಿಕ್ ಮೇಲೆ ದಾಳಿ ಮಾಡಿ ಕ್ಲಿನಿಕ್ ಸೀಜ್ ಮಾಡಲಾಗಿದೆ.

ಹಾಗಾಗಿ ಸಾರ್ವಜನಿಕರು ತಮ್ಮ ಆರೋಗ್ಯದ ದೃಷ್ಟಿಯಿಂದ ಅಧೀಕೃತ ವೈದ್ಯ ಪದವಿ ಪಡೆದ ವೈದ್ಯರ ಬಳಿ ತಪಾಸಣೆ ಮಾಡಿಸುವ ಮೂಲಕ ಚಿಕಿತ್ಸೆ ಪಡೆಯುವುದರಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ಗಂಭೀರ ಪರಿಣಾಮಗಳನ್ನು ತಡೆಯಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದ್ದಾರೆ.

ಗ್ರಾಮಗಳಲ್ಲಿ ವೈದ್ಯ ವೃತ್ತಿ ಮಾಡುತ್ತಿರುವವರು ಕಂಡುಬಂದಲ್ಲಿ ಸಾರ್ವಜನಿಕರು ಅವರ ವೈದ್ಯಕೀಯ ಪದವಿಯ ಮಾಹಿತಿಯನ್ನು ಪಡೆದುಕೊಂಡು ಚಿಕಿತ್ಸೆ ಪಡೆಯಬೇಕು. ಒಂದು ವೇಳೆ ನಕಲಿ ವೈದ್ಯರು ಎಂದು ಕಂಡುಬಂದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯಕ್ಕೆ ದೂರು ನೀಡಿದರೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ರ ಅಡಿಯಲ್ಲಿ ಕ್ರಮ ಜರುಗಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ದಾಳಿಯ ಸಂದರ್ಭದಲ್ಲಿ ಡಾ ವೀರೇಂದ್ರ ಕುಮಾರ್ . ತಾಲ್ಲೂಕು ಆರೋಗ್ಯಾಧಿಕಾರಿ ಡಾಕ್ಟರ್ ಅರುಣ್ ಕುಮಾರ್. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗೋಪಾಲ್ ತಾಲೂಕು ಆರೋಗ್ಯ ನಿರೀಕ್ಷಣಾಧಿಕಾರಿ ಬಸವರಾಜ್ ಪಿ ಹಾಗೂ ವೈದ್ಯರು ಇದ್ದರು.

# ಪ್ರಭಾವಿಗಳಿಂದ ಸರ್ಕಾರಿ ಗೋಮಾಳ ಅತಿಕ್ರಮಿಸುವ ಹುನ್ನಾರ : ಆರೋಪ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯ ಬೇವಿನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಹಪುರ ಗ್ರಾಮದ ಸವುಳು ಹಳ್ಳದ ಕೆರೆ ಮತ್ತು ಗೋಮಾಳ ಪ್ರದೇಶವನ್ನು ಪ್ರಭಾವಿಗಳು ಅತಿಕ್ರಮಣ ಮಾಡುವ ಹುನ್ನಾರ ನಡೆಸಿದ್ದು, ಜಿಲ್ಲಾಧಿಕಾರಿಗಳು ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.



ಶತಮಾನಗಳಿಂದಲೂ ಶಹಪುರ ಗ್ರಾಮದ ಉತ್ತರ-ಈಶಾನ್ಯ ದಿಕ್ಕಿನಲ್ಲಿರುವ ಸವುಳು ಹಳ್ಳದ ಕೆರೆ ಮತ್ತು ಸರ್ಕಾರಿ ಗೋಮಾಳ ಈ ಗ್ರಾಮದ ದನ, ಕುರಿ, ಆಡು, ಎತ್ತು, ಎಮ್ಮೆಗಳಿಗೆ ಆಸರೆಯಾಗಿದೆ. ದನ ಮತ್ತು ಕುರಿಗಾಹಿಗಳು ಕೆರೆಯ ದಡದಲ್ಲಿನ ಗೋಮಾಳದಲ್ಲಿ ಶತಮಾನಗಳಿಂದಲೂ ಬೀಡು ಬಿಟ್ಟಿದ್ದಾರೆ. ಗ್ರಾಮಕ್ಕೆ ಇದೊಂದೇ ಜಲಮೂಲ ಮತ್ತು ಆಸರೆ ಆಗಿರುವುದರಿಂದ ಅನೇಕ ಕುಟುಂಬಗಳು ಇದನ್ನೇ ಆಶ್ರಯಿಸಿವೆ. ಕೋಳಿ ಫಾರಂ ಉದ್ಯಮ ನಡೆಸುವ ಶ್ರೀಧರ್ ಎನ್ನುವ ಪ್ರಭಾವಿ ವ್ಯಕ್ತಿ ಸವುಳು ಹಳ್ಳದ ಕೆರೆ ಪಕ್ಕದಲ್ಲಿ ಅನ್ಯರ ಜಮೀನು ಖರೀದಿಸಿದ್ದಾರೆ. ಇದರ ನೆಪದಲ್ಲಿಯೇ ಸವುಳು ಹಳ್ಳದ ಕೆ-ರೆಯ ವ್ಯಾಪ್ತಿಯ ಸುಮಾರು 40 ಎಕರೆ ಜಮೀನನನ್ನು ಅತಿಕ್ರಮಣ ಮಾಡುವ ಹುನ್ನಾರ ನಡೆಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಈ ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ತುಳಸಿ ಮದ್ದಿನೇನಿ ಅವರ ಅವಧಿಯಲ್ಲಿ ಅತಿಕ್ರಮಣ ಮಾಡಲು ಮುಂದಾಗಿದ್ದ ಶ್ರೀಧರ್ ವಿರುದ್ಧ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದರು. ಈ ಕುರಿತು ಅಂದಿನ ಜಿಲ್ಲಾಧಿಕಾರಿಗಳಿಗೂ ದೂರು ನೀಡಿದ್ದರು. ಅಂದಿನಿಂದ ಗಾಯಬ್ ಆಗಿದ್ದ ಶ್ರೀಧರ್ ಎನ್ನುವ ವ್ಯಕ್ತಿ ಇದೀಗ ತಮ್ಮ ಹಿಂಬಾಲಕರನ್ನು ಮುಂದೆ ಬಿಟ್ಟು ಮತ್ತೆ ಸರ್ಕಾರಿ ಗೋಮಾಳ ಅತಿಕ್ರಮಣ ಮಾಡುವ ಹುನ್ನಾರ ನಡೆಸಿದ್ದಾರೆ. ಕುರಿ ಮತ್ತು ದನಗಾಹಿಗಳು ಮೇಯಿಸಲು ಅಡವಿಗೆ ತೆರಳುವ ಸಂದರ್ಭದಲ್ಲಿ ಹೊಂಚು ಹಾಕಿ ಗೋಮಾಳ ಅತಿಕ್ರಮಣ ಮಾಡಲು ಮುಂದಾಗಿದ್ದಾರೆ. ವಿಷಯ ಗೊತ್ತಾದ ಕೂಡಲೇ 'ಸವುಳು ಹಳ್ಳದ ಕೆರೆ ಅಭಿವೃದ್ಧಿ' ಸಮಿತಿಯ ಪದಾಧಿಕಾರಿಗಳು ಮುನಿರಾಬಾದ್ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ತೆರಳಿ ಟ್ರಾಕ್ಟರ್ ನಿಂದ ಅತಿಕ್ರಮಣ ಮಾಡಿ, ಗೋಮಾಳ ಜಾಗೆಯಲ್ಲಿ ಮಣ್ಣು ಸಮ ಮಾಡುವ ಕೆಲಸಕ್ಕೆ ಬ್ರೇಕ್ ಹಾಕಿದ್ದಾರೆ. ಮುನಿರಾಬಾದ್ ಪೊಲೀಸ್ ಠಾಣೆಯ ಪಿಎಸ್ಐ ಮತ್ತು ಸಿಬ್ಬಂದಿಯವರು ಆಗಮಿಸಿ ತೆರವುಗೊಳಿಸಿದ್ದಾರೆ.

ಈ ಭಾಗದಲ್ಲಿ ಪ್ರಭಾವಿಗಳ ಮತ್ತು ಉದ್ಯಮಿಗಳಿಂದ ಗೋಮಾಳ ಮತ್ತು ಕೆರೆ ಅತಿಕ್ರಮಣ ಮಾಡುವ ಹುನ್ನಾರ ನಡೆಯುತ್ತಿದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೆರೆ ಮತ್ತತು ಸುತ್ತಲಿನ ರೈತರ ಜಮೀನುಗಳನ್ನು ಅತಿಕ್ರಮಣ ಮಾಡುವ ದಂಧೆ ನಡೆಯುತ್ತಿದೆ. ಇದಕ್ಕೆ ಕಂದಾಯ ಅಧಿಕಾರಿಗಳ ಕುಮ್ಮಕ್ಕೂ ಇದೆ. ಜಿಲ್ಲಾಧಿಕಾರಿಗಳು ಇವರ ವಿರುದ್ಧ ಕಾನೂನು ಕ್ರಮ ಜರುಗಿಸಿ, ಕುರಿ ಮತ್ತು ದನಗಾಹಿಗಳಿಗೆ ನೆರವಾಗಬೇಕು. ಸರ್ಕಾರಿ ಸ್ವಾಮ್ಯದ ಸವುಳು ಹಳ್ಳದ ಕೆರೆ ಮತ್ತು ಗೋಮಾಳ ಜಾಗೆಯನ್ನು ಯಥಾವತ್ತಾಗಿ ಕಾಪಾಡಬೇಕೆಂದು 'ಸವುಳು ಹಳ್ಳದ ಕೆರೆ ಅಭಿವೃದ್ಧಿ ಸಮಿತಿ'ಯ ಅಧ್ಯಕ್ಷರಾದ ಮಂಜುನಾಥ ರಾಟಿ, ಉಪಾಧ್ಯಕ್ಷರಾದ ಸುರೇಶ್ ಪಾಟೀಲ್, ಕಾರ್ಯದರ್ಶಿ ಅಮರೇಶ ಕಟ್ಟಿಮನಿ, ಸದಸ್ಯರಾದ ವೀರಣ್ಣ ಕೋಮಲಾಪುರ, ಗ್ರಾಮದ ಧುರೀಣ-ರಾದ ಮಲ್ಲಿಕಾರ್ಜುನ ಕುರಿ, ನಿಂಗಜ್ಜ ಚೌಧರಿ ಮತ್ತಿತರರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

# ಸಿಎಂ ಬಳಿ ಸರ್ವ ಪಕ್ಷಗಳ ನಿಯೋಗ: ಕರಡಿ




**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ನಗರಸಭೆ ಆವರಣದಲ್ಲಿ ನಡೆದಿರುವ ಬಲ್ಡೋಟ ತೊಲಗಿಸಿ ಹೋರಾಟದ 122ನೇ ದಿನದ ಧರಣಿಯಲ್ಲಿ ಮಾಜಿ ಸಂಸದ ಸಂಗಣ್ಣ ಕರಡಿ ಮಾತನಾಡಿ, ಕಾರ್ಖಾನೆ ಬಾಧೆಗೊಳಗಾದ ಜನರ ಕಷ್ಟಕಾರ್ಪಣ್ಯ ಹೇಳತೀರದು. ತಂತ್ರಜ್ಞರ ವರದಿ ಹೇಳಿದ್ದನ್ನು ಜಾರಿ ಮಾಡಿ ಎಂದು ಕೇಳೋಣ. ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಸಮಯ ಈಗ ಬಂದಿದೆ. ಜನಜಾಗೃತಿ ಆಗುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಬಂದ್ ಹೋರಾಟದಲ್ಲಿ ಮಹಿಳೆಯರು ತೋರಿಸಿದ ಆವೇಶ ಸಾತ್ವಿಕವಾಗಿತ್ತು. ಅವರ ನೋವಿಗೆ ಪಕ್ಷಾತೀತವಾಗಿ ಮಿಡಿದು ನಾವೆಲ್ಲ ಮುಂದೆ ನಿಂತು ಸರ್ಕಾರದ ಮನವೊಲಿಸಿ ಈ ಬಲ್ಡೋಟ ತೊಲಗಿಸೋಣ. ಜನರು ಎದ್ದು ನಿಂತರೆ ಎಂತಹ ದೊಡ್ಡ ಸಮಸ್ಯೆಯಾದರೂ ಪರಿಹಾರ ಸಿಗುತ್ತದೆ. ಇತ್ತೀಚಿಗೆ ದೇವನಹಳ್ಳಿ ಭೂಸ್ವಾಧೀನ ವಿರೋಧಿಸಿದ ಹೋರಾಟ ಗೆದ್ದಿತು. ಮುಖ್ಯಮಂತ್ರಿಗಳ ಗಮನಕ್ಕೆ ಈಗಾಗಲೇ ತರಲಾಗಿದೆ. ಇದನ್ನು ಅಷ್ಟಕ್ಕೆ ಬಿಡಲ್ಲ. ಸದ್ಯದಲ್ಲೇ ಸರ್ವ ಪಕ್ಷಗಳ ಮುಖಂಡರು ಮತ್ತು ಜಂಟಿ ಕ್ರಿಯಾ ವೇದಿಕೆ ಮುಖಂಡರು ಇರುವ ನಿಯೋಗವನ್ನು ಕೊಂಡೊಯ್ಯು ಮುಖ್ಯಮಂತ್ರಿಗಳಲ್ಲಿ ಸ್ಪಷ್ಟವಾಗಿ ಮನವಿ ಮಾಡೋಣ ಎಂದರು. ಅದಕ್ಕಿಂತ ಪೂರ್ವದಲ್ಲಿ ಜಿಲ್ಲಾಧಿಕಾರಿಗಳು ಸಭೆ ಕರೆಯುವಂತೆ ಮಾಡೋಣ ಎಂದರು. ಈಗ ಪರಿಸರ ಇಲಾಖೆಯಿಂದ ಕಾರ್ಖಾನೆಗಳ ಸುತ್ತ ಮುತ್ತ ಮಾಲಿನ್ಯ ಅಳೆಯುವ ಕೆಲಸ ನಡೆಯುತ್ತಿದೆ. ಹಳ್ಳಿಯ ಜನರು ತಮ್ಮ ಸಿಟ್ಟು ಹೊರಹಾಕಿ ಸರ್ಕಾರ ಗಮನ ಸೆಳೆದರು. ಆದಾಗ್ಯೂ ಮುಂದಿನ ಹಂತದಲ್ಲಿ ನಾವೇ ಬಾಧಿತ ಹಳ್ಳಿಯ ಜನರೊಂದಿಗೆ ಕುಳಿತು ಈ ಸಮಸ್ಯೆ ಬಗೆಹರಿಸಿಕೊಳ್ಳೋಣ. ಮುಕ್ತ ಮನಸ್ಸಿನಿಂದ ಮುಂದೆ ಬನ್ನಿ ಎಂದರು. ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಗುರುಮೂರ್ತಿ ಸ್ವಾಮಿ ಅಳವಂಡಿ ಮಾತನಾಡಿ, ಇದು ನಮ್ಮ ರಾಜಕಾರಣಿಗಳಿಗೆ ದೊಡ್ಡ ವಿಷಯವಲ್ಲ. ಇಷ್ಟು ಸಮಸ್ಯೆ ಎದುರಿಸಿ ಕಾರ್ಖಾನೆ ಮಾಲೀಕರನ್ನು ಬೆಳೆಸಿ, ನಮ್ಮ ಜನರು ರೋಗಬಾಧೆ, ಜೀವ ಸಂಕಟ ಯಾಕೆ ತೆಗೆದುಕೊಳ್ಳಬೇಕು. ಪಕ್ಷಾತೀತವಾಗಿ ರಾಜಕೀಯ ಮುಖಂಡರು ಕೂಡಿ ಕಾರ್ಖಾನೆ ತೊಲಗಿಸಿ, ಜನರ ಆರೋಗ್ಯ ಕಾಪಾಡಿರಿ ಎಂದರು.

ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ ಹೋರಾಟಕ್ಕೆ ಜನರು ಮತ್ತಷ್ಟು ದೊಡ್ಡ ಸಂಖ್ಯೆಯಲ್ಲಿ ಮುಂದೆ ಬರಬೇಕು. ಈ ಹೋರಾಟ ಗೆಲುವು ಅಂದರೆ ನಮ್ಮ ಜೀವದ ಉಳಿವು. ಮುಂದಿನ ಭವಿಷ್ಯದ ಉಳಿವು ಎಂದರು.

ಧರಣಿಗೆ ಇಪ್ಪತ್ತು ವರ್ಷ ಬಲ್ಡೋಟ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ಹೋರಾಡಿದ ಸೂರ್ಯರೆಡ್ಡಿ, ನ್ಯಾಯವಾದಿ ರಾಜು ಬಾಕಳೆ ಹೋರಾಟ ಅನುಭವ ಹಂಚಿಕೊಂಡರು. ಸಾಹಿತಿ ವಿರೂಪಾಕ್ಷಪ್ಪ ಕೋರಗಲ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಚ್.ಎಸ್. ಪಾಟೀಲ್, ಭೂ ಬಾಧಿತ ಎಸ್. ನಾರಾಯಣರೆಡ್ಡಿ, ಕೃಷ್ಣ ಬೇವಿನಕಟ್ಟಿ, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ ಮತ್ತು ಮಂಜುನಾಥ ಜಿ. ಗೊಂಡಬಾಳ, ಭಾಗ್ಯನಗರ ಗ್ಯಾನೇಶ ಹ್ಯಾಟಿ, ಶಂಭುಲಿಂಗಪ್ಪ ಹರಗೇರಿ, ಎಸ್.ಬಿ. ರಾಜೂರು, ಪಿ.ಎಸ್. ಹಿರೇಮಠ, ಜಿ.ಬಿ.ಪಾಟೀಲ್, ಪುಟ್ಟರಾಜ ಪಾಟೀಲ್, ಶರಣು ಶೆಟ್ಟರ್, ಶೇಖರ್ ಎಸ್. ಇಂಗಳದಾಳ, ನಾಗರಾಜ ಕುಷ್ಟಗಿ, ರವಿ ಕಾಂತನವರ, ಮಲ್ಲಿಕಾರ್ಜುನಗೌಡ ಅಣ್ಣಿಗೇರಿ, ಗಾಳೆಪ್ಪ ಪೂಜಾರ, ವಿನಯ ಸಜ್ಜನ್, ಬಿ.ಜಿ. ಕರಿಗಾರ, ಶಿವರಾಜ ಕನಕಗಿರಿ, ಕಾಶಪ್ಪ ಚಲವಾದಿ, ಹನುಮಪ್ಪ ಚಿಂಚಲಿ, ರತ್ನಮ್ಮ ದೊಡ್ಡಮನಿ, ಯಮನೂರಪ್ಪ ಹಾಲಳ್ಳಿ, ಶರಣು ಗಡ್ಡಿ, ವೈ. ಸತ್ಯನಾರಾಯಣ, ಮಹಾದೇವಪ್ಪ ಮಾವಿನಮಡು, ಆಟೋ ಮಂಜಪ್ಪ, ವಿಜಯ ಮಹಾಂತೇಶ ಹಟ್ಟಿ, ಯಂಕಪ್ಪ ಡೊಳ್ಳಿನ, ಟಿ ಕೊಟ್ರೇಶ್ ಗಂಗಮ್ಮ ಕೊಡೇಕಲ್, ಶಿವಪ್ಪ ಜಲ್ಲಿ ಇತರರಿದ್ದರು.



ಹುಣಸೂರು ತಾಲೂಕಿನ ಬನ್ನಿಕುಪ್ಪೆ: ಗ್ರಾಮದ ಗ್ರಾಮ ದೇವತೆ ಶ್ರೀ ಬನ್ನಮ್ಮ ಹಾಗೂ ವೀರಭದ್ರೇಶ್ವರಸ್ವಾಮಿಯ ಜಾತ್ರಾ ಕಾರ್ಯಕ್ರಮಕ್ಕೆ ರಥ ಮುಹೂರ್ತಕ್ಕೆ 7 ಹಳ್ಳಿಯ ಯಜಮಾನರಾದ ಶ್ರೀ ಕೂಸಪ್ಪ ಹಾಗೂ 7 ಹಳ್ಳಿಯ ಯಜಮಾನರು ಮುಖಂಡರು ಗ್ರಾಮಸ್ಥರಿಂದ ತೇರು ಮಹೂರ್ತ ಕಾರ್ಯಕ್ರಮವು ಜರುಗಿತು. ಮಾರ್ಚ್ 11ರಂದು ಕೊಂಡ ಮಾರ್ಚ್ 12ರಂದು ನೀರು ಓಕಳಿ ಮಾರ್ಚ್ 13ರಂದು ಕನ್ಯ ಕರಡಿ ಉತ್ಸವ ಮಾರ್ಚ್ 14ರಂದು ದೊಡ್ಡ ತೇರು ಮಾರ್ಚ್ 15ರಂದು ಪಾರೋಟೆ ಉತ್ಸವ ಜರುಗುತ್ತದೆ. ಇದಕ್ಕೂ ಮುನ್ನ ಶಾಸಕ ಜಿ.ಡಿ ಹರೀಶ್‌ಗೌಡ ರವರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಗ್ರಾಮ ಪಂಚಾಯತಿ ಅಧಿಕಾರಿಗಳು ಗ್ರಾಮದ ಮುಖಂಡರು ಜನಪ್ರತಿನಿಧಿಗಳು ಸಭೆ ಸೇರಿ ಐದು ದಿನ ಜಾತ್ರೆಗೆ ಬರುವ ಭಕ್ತರಿಗೆ ಕುಡಿಯುವ ನೀರು ವಿದ್ಯುತ್ ಸಾರಿಗೆ ವ್ಯವಸ್ಥೆ ಹಾಗೂ ವೈದ್ಯಕೀಯ ಸೇವೆ ಮುಂತಾದ ಮೂಲಭೂತ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಶಾಸಕ ಜಿ.ಡಿ ಹರೀಶ್‌ಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು ಗ್ರಾಮಸ್ಥರು ಹಾಗೂ ಜನಪ್ರತಿನಿಧಿಗಳು ಭಾಗವಹಿಸಿದ್ದರು.

# ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದು ಸರ್ಕಾರದ ಪ್ರಮುಖ ಆದ್ಯತೆ: ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಹೇಳಿದರು.

ಅವರು ಸೋಮವಾರ ಹುಮನಾಬಾದ ಮತಕ್ಷೇತ್ರದ ಚಿಟ್ಟಗುಪ್ಪ ತಾಲ್ಲೂಕಿನ ತಾಳಮಡಗಿ (ಹಿಪ್ಪರ್ಗಾ) ಬಳಿ 16.75 ಕೋಟಿ ರೂ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಸಂಕೀರ್ಣದ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿದರು.

ವಸತಿ ಶಾಲೆಗಳ ಮೂಲಕ ಶೈಕ್ಷಣಿಕ ಸಮಾನತೆ ಸಾಧಿಸಿ, ಮಕ್ಕಳ ಭವಿಷ್ಯಕ್ಕೆ ಬಲವಾದ ಅಡಿಪಾಯ ಹಾಕುವ ಉದ್ದೇಶ ನಮ್ಮದು ಎಂದು ತಿಳಿಸಿದರು. ಈ ಶಾಲಾ ಸಂಕೀರ್ಣವು ಈ ಭಾಗದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮಹತ್ವದ ಮೈಲಿಗಲ್ಲಾಗಲಿದೆ. ಅಭಿವೃದ್ಧಿ ಕೆಲಸಗಳು ನಿರಂತರವಾಗಿ ನಡೆಯುತ್ತವೆ. ಇದಕ್ಕೆ ಅಡ್ಡಿಪಡಿಸಿ ರಾಜಕೀಯ ಮಾಡಲು ಬಯಸುವವರು, ತಮ್ಮ ಕ್ಷೇತ್ರದ ಜನತೆಗೆ ಮಾಡುವ ಮಹಾಮೋಸವೆಂಬುದು ಅರ್ಥಮಾಡಿಕೊಳ್ಳಬೇಕು. ಜನರ ಹಿತ, ಮಕ್ಕಳ ಭವಿಷ್ಯ ಹಾಗೂ ಪ್ರದೇಶದ ಸಮಗ್ರ ಅಭಿವೃದ್ಧಿಯೇ ನಮ್ಮ ಮೊದಲ ಆದ್ಯತೆ; ಯಾವುದೇ ಅಡ್ಡಿ ಅವಾಂತರಗಳಿಗೂ ಜಗ್ಗದೆ ಅಭಿವೃದ್ಧಿ ಪಥವನ್ನು ಮುಂದುವರಿಸಲಾಗುತ್ತದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕ ಡಾ.ಚಂದ್ರಶೇಖರ ಬಿ.ಪಾಟೀಲ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಯೋಗೇಶ, ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರಾದ ಶಾಂತಯ್ಯ ಮಠಪತಿ ಸೇರಿದಂತೆ ವಸತಿ ಶಾಲಾ ಸಿಬ್ಬಂದಿಗಳು, ಗ್ರಾಮದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಸಂಸ್ಕಾರ, ಸಂಸ್ಕೃತಿ ಪಾಲನೆಯಿಂದ ಜೀವನಕ್ಕೆ ಅಮೂಲ್ಯ ಬೆಲೆ: ಶಂಭುಲಿಂಗ ಶಿವಾಚಾರ್ಯರು

• ವರದಿ:ಪರಮೇಶ ರಾಂಪುರೆ
ಮಲ್ಲಮ್ಮ ನುಡಿ ವಾರ್ತೆ
ಕಮಲನಗರ



ಮಾನವ ಜೀವನಕ್ಕೆ ಸಂಸ್ಕಾರ ಮತ್ತು ಸಂಸ್ಕೃತಿಗಳ ಪರಿಪಾಲನೆಯಿಂದ ಮಾತ್ರ ಅಮೂಲ್ಯವಾದ ಬೆಲೆ ದೊರೆಯುತ್ತದೆ ಎಂದು ಡೋಣಗಾಂವ್(ಎಂ)-ಉದಗೀರ ಹಾವಗಿಸ್ವಾಮಿ ಮಠದ ಪೀಠಾಧಿಪತಿಗಳಾದ ಪೂಜ್ಯ ಡಾ. ಶಂಭುಲಿಂಗ ಶಿವಾಚಾರ್ಯರು ಅಭಿಮತ ವ್ಯಕ್ತಪಡಿಸಿದರು.

ತಾಲೂಕಿನ ಡೋಣಗಾಂವ(ಎಂ) ಗ್ರಾಮದ ಹಾವಗೀಸ್ವಾಮಿ ಮಠದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಜಗದ ಜನರ ಮನದ ಅಜ್ಞಾನವನ್ನು ಕಳೆದು, ಜ್ಞಾನದ ಬುತ್ತಿಯನ್ನು ನೀಡಿದ ಮಹಾನ್ ಶ್ರೇಯಸ್ಸು ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ಮಹಿಳೆಯರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ತಂದುಕೊಟ್ಟ ಮೊದಲ ಕೀರ್ತಿ ರೇಣುಕಾಚಾರ್ಯರದ್ದು. ಶಿವಜ್ಞಾನದ ಅರಿವು ಮತ್ತು ಆಚರಣೆಯಿಂದ ಮಾತ್ರ ಬದುಕಿನಲ್ಲಿ ಶಾಂತಿ, ಸಮಾಧಾನ ಕಂಡುಕೊಳ್ಳಲು ಸಾಧ್ಯ ಎಂದು ಅವರು ತಿಳಿಸಿದರು.

> “ ವಿಶ್ವಶಾಂತಿಗೆ ಧರ್ಮವೇ ಆಧಾರ: "ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ತತ್ವವನ್ನು ಪ್ರತಿಯೊಬ್ಬರೂ ಅರಿಯಬೇಕು. ರೇಣುಕಾಚಾರ್ಯರ ತತ್ವಾದರ್ಶಗಳು ನಮ್ಮ ಭವಿಷ್ಯಕ್ಕೆ ಭದ್ರ ಬುನಾದಿಯಾಗಲಿವೆ" ಎಂದು ಶ್ರೀಗಳು ಮಾರ್ಮಿಕವಾಗಿ ನುಡಿದರು.

ಕಾರ್ಯಕ್ರಮದಲ್ಲಿ ಮಠದ ಉಮಾಕಾಂತ ದೇಶಿಕೇಂದ್ರ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು.

ವೇದಿಕೆಯ ಮೇಲೆ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಅಪ್ಪಾಸಾಬ ದೇಶಮುಖ, ಪ್ರಮುಖರಾದ ಸಿದ್ದು ಕೌಟಗೆ, ವಿಶಾಲ ದೇಶಮುಖ, ಶ್ರೀನಿವಾಸ ಅಪ್ಪಾಸಾಬ, ಶೈಲೇಶ ಪೇನೆ, ಚನ್ನಯ್ಯ ಹಿರೇಮಠ ಸೇರಿದಂತೆ ಗ್ರಾಮದ ಹಿರಿಯರು, ಮಹಿಳೆಯರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.


# NAME OF CHANGE

**IMOHAMADNASERHUSAIN,** HNo. 3-3-69, Mangalpet Road, Noorkhan Taleem, BIDAR 585401. I have changed my name from **MOHAMMAD NASER HUSSAIN to MOHAMADNASERHUSAIN,** I before public notary advocate Samad Siddiqui on 02 Mar 2026 henceforth call me as

**MOHAMAD NASER HUSAIN**



# CITATION

IN THE COURT OF THE PRL. CIVIL JUDGE AND JMFC., AT HUMNABAD. CRL. MISC. No.123/2026.

**Petitioners:**

1. Sangamnath S/o Late Eshwar, Age: 42-yrs. Occu : Agriculture.
2. Chinnamma W/o Late Eshwar, Age: 61-yrs. Occu: House hold. Both R/o Village Kattahalli, Tq. Humnabad. Dist. Bidar.

**Respondent:**

The Registrar of Birth and Death through The Tahasildar Humnabad. Dist. Bidar.

**Sub:-Petition U/Sec.13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Grand Father of petitioner No.1 and husband of petition No.2 by namely LATE. ESHWAR S/O MAHALINGAPPA, who was died on 21.05.2020 at Village Kattahalli, Humnabad, Tq. Humnabad Dist. Bidar.

The petitioner claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 26.03.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 24-02-2026.

**//By order of the court//**
**Chief Ministerial Officer,**
**Prl. Civil Judge & JMFC Court,**
**Humnabad.**

## ದಿ.ಎಚ್.ವೈ.ಮೇಟಿ ಬಳಗದಿಂದ ಹೋಳಿ ಆಚರಣೆ ಸೋಗಿನ ಬಂಡಿಗಳಿಗೆ ಆಕರ್ಷಕ ಬಹುಮಾನ




**ಹೋಳಿ ಹಬ್ಬದ ನಿಮಿತ್ತ ನಗರದಲ್ಲಿ ನಡೆಯುವ ಸೋಗಿನ ಬಂಡಿ ಪ್ರದರ್ಶನ ಹಾಗೂ ಬಣ್ಣದ ಬಂಡಿಗಳನ್ನು ತಯಾರಿಸುವ ಯುವ ತಂಡಗಳಿಗೆ ಬಹುಮಾನ ನೀಡಲಾಗುತ್ತಿದ್ದು, ಉತ್ತಮ ಪ್ರದರ್ಶನ ನೀಡುವ ಸೋಗಿನ ಬಂಡಿಗೆ ಪ್ರಥಮ ಬಹುಮಾನ 25 ಸಾವಿರ ರೂ., ದ್ವಿತೀಯ ಬಹುಮಾನ 10 ಸಾವಿರ ರೂ. ಹಾಗೂ ತೃತೀಯ ಬಹುಮಾನ 5 ಸಾವಿರ ರೂ. ನೀಡಲಾಗುವುದು. ಜೊತೆಗೆ ಹೆಚ್ಚಿನ ಬಣ್ಣದ ಗಾಡಿಗಳನ್ನು ಮಾಡುವ ಓಣಿಗೆ ಪ್ರಥಮ ಬಹುಮಾನ 15 ಸಾವಿರ ರೂ., ದ್ವಿತೀಯ ಬಹುಮಾನ 10 ಸಾವಿರ ರೂ. ಹಾಗೂ ತೃತೀಯ ಬಹುಮಾನ 5 ಸಾವಿರ ನೀಡುವುದಾಗಿ ಮಲ್ಲಿಕಾರ್ಜುನ ಮೇಟಿ ತಿಳಿಸಿದರು.**

ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ದಿವಂಗತ ಶಾಸಕ ಎಚ್.ವೈ.ಮೇಟಿ ಅಭಿಮಾನಿಗಳ ಬಳಗದಿಂದ ಹೋಳಿ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದೆ ಎಂದು ಮೇಟಿ ಅವರ ಪುತ್ರ ಮಲ್ಲಿಕಾರ್ಜುನ ಮೇಟಿ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಶಾಸಕರಾಗಿದ್ದ ದಿ.ಎಚ್.ವೈ.ಮೇಟಿ ಸನಾತನ ಸಂಸ್ಕೃತಿ ಉಳಿಸುವ ಕಾಳಜಿಯಿಂದ ಪ್ರತಿ ವರ್ಷ ಹೋಳಿ ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸುತ್ತಿದ್ದರು. ಜೊತೆಗೆ ಭಾವೈಕ್ಯತೆಯ ಹೋಳಿ ಹಬ್ಬವನ್ನು ಸಂಭ್ರಮದಿಂದ ಸ್ನೇಹಪರವಾಗಿ ಆಚರಿಸುವಂತೆ ಹೇಳುತ್ತಿದ್ದರು. ಅವರ ಆಶಯದಂತೆ ಈ ವರ್ಷವೂ ಹೋಳಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ಪ್ರತಿಯೊಬ್ಬರೂ ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸುವಂತೆ ಮಲ್ಲಿಕಾರ್ಜುನ ಮನವಿ ಮಾಡಿದರು.

ಹೋಳಿ ಆಚರಣೆಗೆ ಮೇಟಿ ಅವರ ಅಭಿಮಾನಿ ಬಳಗ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಬಾಗಲಕೋಟೆ ನಗರ, ವಿದ್ಯಾಗಿರಿ ಹಾಗೂ ನವನಗರ ಭಾಗಗಳ ಪ್ರಮುಖ ಸ್ಥಳಗಳಲ್ಲಿ ಒಟ್ಟು 10 ಕೌಂಟರ್‌ಗಳನ್ನು ತೆರೆಯಲಾಗುತ್ತಿದೆ. ಅರವಟಿಗೆಗಳ ಮೂಲಕ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದ್ದು, ವಿವಿಧ ತರಹದ ಬಣ್ಣಗಳನ್ನು ಸಹ ಎಲ್ಲರಿಗೂ ಉಚಿತವಾಗಿ ವಿತರಣೆ ಮಾಡಲಾಗುವುದು ಎಂದು ಹೇಳಿದ ಅವರು, ಕಿಲ್ಲಾ ಪ್ರದೇಶ, ಬಸವೇಶ್ವರ ವೃತ್ತ, ವಿದ್ಯಾಗಿರಿ ವೃತ್ತ, ಇಂಜನಿಯರಿಂಗ್ ಕಾಲೇಜ ವೃತ್ತ, ಜಿಲ್ಲಾ ಆಸ್ಪತ್ರೆ ಸರ್ಕಲ್ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಈ ಕೌಂಟರ್‌ಗಳು ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದರು.

ನಗರದ ಯುವಕರು, ಹಿರಿಯರು ಊರು ಬಿಟ್ಟು ತೆರಳದೆ ಊರಲ್ಲೇ ಇದ್ದು ಉತ್ಸಾಹದಿಂದ ಹೋಳಿ ಹಬ್ಬ ಆಚರಿಸಬೇಕು. ಹಬ್ಬವನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದ ಅವರು, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಸಿಬ್ಬಂದಿಗೆ ಸಹಕರಿಸಬೇಕು. ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಬಣ್ಣದಾಟ ನಡೆಸುವಂತೆ ಕೋರಿದರು.

## ಐತಿಹಾಸಿಕ ಹೋಳಿ ಹಬ್ಬಕ್ಕೆ ಇಂದು ಚಾಲನೆ 4 ಕಾಮದಹನ, 5 ರಿಂದ ಮೂರು ದಿನ ಬಣ್ಣದಾಟ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ಐತಿಹಾಸಿಕ ಹೋಳಿ ಹಬ್ಬಕ್ಕೆ ಮಾರ್ಚ 3 ರಂದು ಚಾಲನೆ ದೊರೆಯಲಿದ್ದು, ಮಾ.4 ಕಾಮದಹನ, 5 ರಿಂದ ಮೂರು ದಿನಗಳ ಕಾಲ ರಂಗಿನಾಟ(ಬಣ್ಣದಾಟ)ನಡೆಯಲಿದೆ.

ಹೋಳಿ ಆಚರಣಾ ಸಮಿತಿ ಅಧ್ಯಕ್ಷ ಕಳಕಪ್ಪ ಬಾದೋಡಗಿ ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಮಾ.3 ಮಂಗಳವಾರ ಸಾಯಂಕಾಲ 7 ಗಂಟೆಗೆ ನಗರದ ಬಸವೇಶ್ವರ ವೃತ್ತದ ಬಳಿಯ ಹೊಳೆ ಆಂಜನೇಯ ದೇವಸ್ಥಾನ ಆವರಣದಲ್ಲಿ ಹೋಳಿ ಉತ್ಸವದ ಉದ್ಘಾಟನೆ ನಡೆಯಲಿದೆ ಎಂದರು.

ಹೋಳಿ ಉತ್ಸವ-2026 ಕಾರ್ಯಕ್ರಮವನ್ನು ಯುವ ಮುಖಂಡ ಮಲ್ಲಿಕಾರ್ಜುನ ಮೇಟಿ ಉದ್ಘಾಟಿಸಲಿದ್ದು, ಹೋಳಿ ಆಚರಣಾ ಸಮಿತಿ ಅಧ್ಯಕ್ಷ ಕಳಕಪ್ಪ ಬಾದೋಡಗಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಉದ್ಯಮಿ ಮಾರುತಿ ಶಿಂಧೆ, ಬಾಬುದಾರ ನರಸಿಂಹ ಮಧ್ವರಾಜ ಕುಲಕರ್ಣಿ, ಪತ್ರಕರ್ತ ರವಿ ಹಳ್ಳೂರ, ಉಪನ್ಯಾಸಕ ಮೋಹನ ದೇಶಪಾಂಡೆ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಹೋಳಿ ಆಚರಣಾ ಸಮಿತಿ ಪ್ರಧಾನ ಕಾರ್ಯದರ್ಶಿ ಮಹಾಬಳೇಶ ಗುಡಗುಂಟಿ ಮಾತನಾಡಿ, ಮಂಗಳವಾರ ಸಂಜೆ ಹೋಳಿ ಹಬ್ಬಕ್ಕೆ ಚಾಲನೆ ದೊರೆತ ನಂತರ ಕಿಲ್ಲಾ ಓಣಿಯ ಕಾಮದಹನ ನಡೆಯಲಿದೆ. ಮಾ.4 ಬೆಳಿಗ್ಗೆಯಿಂದ ರಾತ್ರಿಯವರೆಗೂ ಬಾಗಲಕೋಟೆ ನಗರ, ವಿದ್ಯಾಗಿರಿ, ನವನಗರದಲ್ಲಿ ಕಾಮದಹನ ಜರುಗಲಿದ್ದು, ಮಾ.5 ರಿಂದ 7 ರವರೆಗೆ ಬಣ್ಣದಾಟ ಮತ್ತು ಇದೇ ಸಮಯದಲ್ಲಿ ಮಾ.4 ರಿಂದ ನಿತ್ಯ ಬೆಳಗಿನ ಜಾವ 5 ಓಣಿಗಳ ಸೋಗಿನ ಬಂಡಿಗಳ ಪ್ರದರ್ಶನ ನಡೆಯುವುದು ಎಂದು ತಿಳಿಸಿದರು.

ವಿದ್ಯಾಗಿರಿ, ನವನಗರದಲ್ಲಿಯೂ ಸಹ ಸೋಗಿನ ಬಂಡಿಗಳ ಪ್ರದರ್ಶನ, ಬಣ್ಣದ ಗಾಡಿಗಳು ನಡೆಯಲಿವೆ. ನಗರದ ಯುವಕರು, ಹಿರಿಯರು ಊರು ಬಿಟ್ಟು ಬೇರೆಡೆ ತೆರಳದೇ ನಗರದಲ್ಲಿದ್ದು ಶಾಂತಿ, ಸೌಹಾರ್ದತೆಯಿಂದ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿ ಬಾಗಲಕೋಟೆ ಹೋಳಿ ಪರಂಪರೆಗೆ ಮೆರಗು ತರಬೇಕೆಂದು ಗುಡಗುಂಟಿ ಮನವಿ ಮಾಡಿದರು.

ರೇನ್ ಡ್ಯಾನ್ಸ್: ಹೋಳಿ ಹಬ್ಬದ ಎರಡನೇ ದಿನ ಮಾ.6 ರಂದು ನಗರದ ಬಸವೇಶ್ವರ ವೃತ್ತದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 4.30 ರವರೆಗೆ ರೇನ್ ಡ್ಯಾನ್ಸ್ ಆಯೋಜನೆ ಮಾಡಲಾಗಿದೆ. ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಒದಗಿಸಲಾಗುವುದು. ಹುಬ್ಬಳ್ಳಿಯಿಂದ ಡಿಜೆ ಆಪರೇಟರ್ ಹಾಗೂ ಡ್ಯಾನ್ಸರ್ ಆಗಮಿಸಲಿದ್ದಾರೆಂದು ವೀರಣ್ಣ ಬಂಗಾರಶೆಟ್ಟಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಶಿವುಕುಮಾರ ಮೇಲ್ನಾಡ, ಸಂಜೀವ ವಾಡಕರ್, ರಾಜು ನಾಯಕ ಉಪಸ್ಥಿತರಿದ್ದರು.




## ಉಪಚುನಾವಣೆ ಕುಟುಂಬದಲ್ಲಿ ಗೊಂದಲವಿಲ್ಲ ಮೇಟಿ ಸ್ಪಷ್ಟನೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ವಿಷಯದಲ್ಲಿ ನಮ್ಮ ಕುಟುಂಬದಲ್ಲಿ ಯಾವುದೇ ಗೊಂದಲವಿಲ್ಲ. ಪಕ್ಷ ಯಾರಿಗೆ ಟಿಕೆಟ್ ನೀಡಿದರೂ ಎಲ್ಲರೂ ಒಗ್ಗಟ್ಟಾಗಿರುತ್ತೇವೆ ಎಂದು ಶಾಸಕ ದಿ.ಎಚ್.ವೈ.ಮೇಟಿ ಪುತ್ರ ಮಲ್ಲಿಕಾರ್ಜುನ ಮೇಟಿ ಹೇಳಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ತಾವು ನಮ್ಮ ಕುಟುಂಬಕ್ಕೆ ಟಿಕೆಟ್ ನೀಡುವಂತೆ ಪಕ್ಷಕ್ಕೆ ಮನವಿ ಮಾಡಿಕೊಂಡಿದ್ದು, ಪಕ್ಷದ ನಾಯಕರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದಕ್ಕೆ ಬದ್ಧರಾಗುತ್ತೇವೆ. ಅದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಉಪಚುನಾವಣೆ ಸ್ಪರ್ಧೆಗೆ ಹಲವಾರು ಜನ ಆಕಾಂಕ್ಷಿಗಳಾಗಿದ್ದಾರೆ. ನಮ್ಮ ತಂದೆಯವರು ನಿಧನರಾದ ಪ್ರಯುಕ್ತ ಅನುಕಂಪದ ಆಧಾರದಿಂದ ನಮ್ಮ ಕುಟುಂಬಕ್ಕೆ ಟಿಕೆಟ್ ದೊರೆಯುವ ವಿಶ್ವಾಸ ನನಗಿದೆ. ಆದರೆ ಸ್ಪರ್ಧೆಗೆ ಅವಕಾಶ ಕೊಡುವುದು ಬಿಡುವುದು ರಾಜ್ಯ ನಾಯಕರ ತೀರ್ಮಾನ. ಅದಕ್ಕೆ ಜಿಲ್ಲೆಯ ಪಕ್ಷದ ಹಿರಿಯರು ಕೈಗೊಳ್ಳುವ ನಿರ್ಧಾರ ಪ್ರಮುಖವಾಗುತ್ತದೆ ಎಂದು ಹೇಳಿದರು.

ಈಚೆಗೆ ಪಕ್ಷದ ಜಿಲ್ಲಾ ಅಧ್ಯಕ್ಷರಾದ ಎಸ್.ಜಿ.ನಂಜಯ್ಯನಮಠ ಅವರ ಜೊತೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದು, ಉಪಚುನಾವಣೆ ಕುರಿತಂತೆ ಚರ್ಚೆ ಮಾಡಲಾಗಿದೆ ಎಂದು ಮಲ್ಲಿಕಾರ್ಜುನ ಮೇಟಿ ಹೇಳಿದರು.

## ಪ್ರಭು ಶೀಲವಂತರಗೆ ಪಿಎಚ್‌ಡಿ ಪದವಿ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ನಗರದ ವಿದ್ಯಾಗಿರಿಯ ಪ್ರಭು ಗುರುನಾಥಪ್ಪ ಶೀಲವಂತರ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಸಿವ್ಹಿಲ್ ಇಂಜನಿಯರಿಂಗ್‌ನಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಡಾ.ಪೂರ್ಣಚಂದ್ರ ಪಂಡಿತ ಹಾಗೂ ಡಾ.ಶ್ರೀಲಕ್ಷ್ಮೀ ಪ್ರಶಾಂತ ಇವರ ಮಾರ್ಗದರ್ಶನದಲ್ಲಿ 'ದಿ ಇಫೆಕ್ಟ್ ಆಫ್ ರಿಬಾರ್ ಕೊರೋಜನ್ ಆನ್ ಬಾಂಡ್ ಕ್ಯಾರೆಕ್ಟರಸ್ಟಿಕ್ಸ್ ಆ್ಯಂಡ್ ಫರಫಾರ್ಮನ್ಸ್ ಆಫ್ ಅಲ್ಕೆಲಿ ಆ್ಯಕ್ಟಿವೇಟೆಡ್ ಆರ್‌ಸಿಸಿ ಬೀಮ್ಸ್' ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿಯನ್ನು ಪೂರೈಸಿದ್ದಾರೆ.

ಪ್ರಭು ಶೀಲವಂತರ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕ ಜಿ.ಎಸ್.ಶೀಲವಂತರ ಅವರ ಸುಪುತ್ರ.

## ಗೋಕರ್ಣದ ಪ್ರಮುಖ ಕಡಲತೀರದಲ್ಲಿಯೂ ತಲೆ ಎತ್ತಿದ ಅನಧಿಕೃತ ಹೋಟೇಲ್‌ಗಳು

ಗೋಕರ್ಣ: ನಾಡುಮಾಸ್ಕೇರಿ ಗ್ರಾ.ಪಂ.ವ್ಯಾಪ್ತಿಯಲ್ಲಿ ಮಾತ್ರ ಅನಧಿಕೃತ ರೆಸಾರ್ಟ್, ಹೊಟೇಲ್‌ಗಳು ತಲೆ ಎತ್ತಿಲ್ಲ. ಬದಲಾಗಿ ಗೋಕರ್ಣದ ಮುಖ್ಯ ಕಡಲತೀರದಲ್ಲಿಯೂ ಕೂಡ ರೆಸಾರ್ಟ್, ಹೋಮ್‌ಸ್ಟೇಗಳು ತಲೆ ಎತ್ತಿವೆ. ಸಿಆರ್‌ಝಡ್ ನಿಯಮವನ್ನು ಉಲ್ಲಂಘಿಸಿ ಮುಖ್ಯ ಕಡಲತೀರದಲ್ಲಿಯೂ ಕೂಡ ಅತಿಕ್ರಮಣ ಮಾಡಲಾಗಿದೆ.

ಅಧಿಕಾರಿಗಳು ಕೇವಲ ದುಬ್ಬನಶಶಿ, ಗಂಗೆಕೊಳ್ಳವನ್ನು ಮಾತ್ರ ಟಾರ್ಗೇಟ್ ಮಾಡಲಾಗುತ್ತಿದೆ. ಬದಲಾಗಿ ಖುಲ್ಲಾಪಡಿಸುವುದಿದ್ದರೆ ಗೋಕರ್ಣದಲ್ಲಿರುವ ಎಲ್ಲ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲಿ. ಬದಲಾಗಿ ಕೆಲವರನ್ನೇ ಟಾರ್ಗೇಟ್ ಮಾಡುತ್ತಿರುವುದು ಸರಿಯಲ್ಲ ಎಂದು ಸ್ಥಳೀಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಗೋಕರ್ಣದಾದ್ಯಂತ ಸಾಕಷ್ಟು ಕಾನೂನು ಉಲ್ಲಂಘನೆ ಮಾಡಿ ಐಶಾರಾಮಿ ಬಂಗಲೆಯನ್ನು ನಿರ್ಮಿಸಲಾಗಿದೆ. ಹೋಮ್‌ಸ್ಟೇ, ರೆಸಾರ್ಟ್‌ಗಳನ್ನು



ನಿರ್ಮಿಸುವಾಗ ಅದಕ್ಕೆ ತನ್ನದೇ ಆದ ನಿಯಮಗಳಿವೆ. ಅನುಮತಿ ಪಡೆದವರಲ್ಲಿಯೂ ಕೂಡ ಕೆಲವು ಕಾನೂನುಗಳನ್ನು ಉಲ್ಲಂಘನೆ ಮಾಡಿದ್ದಾರೆ. ಹೀಗಾಗಿ ಕ್ರಮವಾಗುವುದಿದ್ದರೆ ಎಲ್ಲರಿಗೂ ಆಗಲಿ ನಮ್ಮನ್ನು ಮಾತ್ರ ಟಾರ್ಗೆಟ್ ಮಾಡಬೇಡಿ ಎಂದು ದುಬ್ಬನಶಶಿ ಭಾಗದ ಅಂಗಡಿಕಾರರು ತಮ್ಮ ಅಳಲನ್ನು ವ್ಯಕ್ತಪಡಿಸಿದರು.

## ಮಹಿಳೆಯರು ದಿನಾಚರಣೆ ಭಾರತಕ್ಕೆ ವೇಗೋತ್ಕರ್ಷಕ ಪ್ರೇರಣಾದಾಯಕ : ರಜನೀಶ್ ವಾಲಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಬಿ.ವಿ.ಭೂಮರೆಡ್ಡಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗು ಬಿ. ವಿ. ಬಿ. ಶಾಲಾ ಕಾಲೇಜು ಆವರಣದ ಸಂಚಾಲಕರಾದ ಡಾ. ರಜನೀಶ ಎಸ್ ವಾಲಿ ಯವರ ಅಮೃತ ಹಸ್ತದಿಂದ ಸಸಿಗೆ ನೀರೆರುವುದರ ಮುಖಾಂತರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ಇಂದು ನಮ್ಮ ಜಗತ್ತು ವಿಜ್ಞಾನದ ಹಲವಾರು ಆವಿಷ್ಕಾರಗಳಿಂದ ದೇಶ ವಿದೇಶಗಳಲ್ಲಿ ನಮ್ಮ ಭಾರತೀಯ ವಿಜ್ಞಾನಿಗಳು ಸಂಶೋಧನೆಗಳನ್ನು ನಡೆಸಿ ಮಂಗಳಗ್ರಹ ಮತ್ತು ಚಂದ್ರಲೋಕದಲ್ಲಿ ಮಾನವಸಹಿತ ಅಂತರಿಕ್ಷ ನೌಕೆಗಳನ್ನು ಹಾರಿಸಿ ಭಾರತೀಯ ಮೂಲದ ಕಲ್ಪನಾ ಚಾವ್ಲಾ ಹಾಗೂ ಇತ್ತೀಚಿಗೆ ನಮ್ಮ ಭಾರತ ಮೂಲದ ಸುನೀತಾ ವಿಲಿಯಮ್ಸ್ ಇಬ್ಬರ ಹೆಣ್ಣುಮಕ್ಕಳ ಸಾಧನೆ ಇಡೀ ಜಗತ್ತು ಬೆರಗಾಗುವಂತೆ ನೋಡಲು ಇವರು ಪಡೆದ ವಿಜ್ಞಾನ ಶಿಕ್ಷಣ ಹಾಗು ಇವರನ್ನು ಭೋದಿಸಿದ ಗುರುಗಳ ಸಾಧನೆ ಮೆಚ್ಚುವಂತದ್ದು ತಾವು ಸಹ ಇಂದಿನ ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅಧ್ಯಯನ ಮಾಡಿ ಗುರುತರವಾದ ಶಿಕ್ಷಣ ಪಡೆದು ಮಹಾವಿದ್ಯಾಲಯದ ಮತ್ತು ನಿಮ್ಮ ಪಾಲಕರ ಹಾಗೂ ಗುರುಗಳ ಹೆಸರುಗಳನ್ನೂ ದೇಶ ವಿದೇಶಗಳಲ್ಲಿ ಹರಡಿಸಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ನ್ಯಾಷನಲ್ ಕಾಲೇಜಿನ ನಿಕಟಪೂರ್ವ ಪ್ರಾಚಾರ್ಯರು ಮತ್ತು ಸರಕಾರಿ



ಪದವಿ ಮಹಾವಿದ್ಯಾಲಯ ತುಮಕೂರಿನ ಡಾ. ಕಮಲಾ ವೈ. ಸಿ. ಅವರು ಮಾತನಾಡುತ್ತಾ ವಿಜ್ಞಾನಕ್ಕೆ ಪ್ರಥಮ ಬಾರಿಗೆ ನೋಬಲ್ ಪಡೆದ ಭಾರತೀಯ ವಿಜ್ಞಾನಿ ಎಂದರೆ ಸರ್ ಸಿ ವಿ ರಾಮನ್ ಇವರ ಬೆಳಕಿನ ಪ್ರತಿಫಲನಕ್ಕೆ ವಿಶ್ವವೇ ನಿಬ್ಬೆರಗಾಗಿ ನೋಡಿತ್ತು ಇವರು ಕಂಡು ಹಿಡಿದ ರಾಮನ್ ಎಫೆಕ್ಟ್ ಗೆ ಕ್ರಿಶ. 1930 ರಲ್ಲಿ ಪ್ರಥಮಬಾರಿಗೆ ನೋಬಲ್ ದೊರಕಿತು ಇವರ ಸಾಧನೆ ಭಾರತಕಷ್ಟೆ ಅಲ್ಲ ಇಡೀ ವಿಶ್ವ ನಮ್ಮ ದೇಶದ ಕಡೆಗೆ ತಿರುಗಿನೋಡುವಂತೆ ಮಾಡಿದ ಮಹಾನ್ ವಿಜ್ಞಾನಿ ಸರ್ ಸಿ ವಿ ರಾಮನರ ಪ್ರತಿಭೆ ಇಂದಿನ ಇಂದಿನ ಮಕ್ಕಳಿಗೆ ದಾರಿದೀಪವಾಗಿದೆ ಎಂದು ಮಾರ್ಮಿಕವಾಗಿ ನುಡಿದರು.

ಇನ್ನೊರ್ವ ಅತಿಥಿಗಳಾದ ಪ್ರೊ. ಎಂ. ಎಸ್. ಜೋಗದ ರವರು ಮಾತನಾಡುತ್ತ ಇವತ್ತಿನ ವಿಜ್ಞಾನ ಪ್ರಪಂಚದಲ್ಲಿ ಕೇವಲ ಪುರುಷರಿಗೆ ಮಾತ್ರ ಸೀಮಿತವಲ್ಲ ಮಹಿಳೆಯರು ಸಹ ವಿಜ್ಞಾನದ ಅಂಶಗಳು ಅರಿತು ಹೊಸ ಹೊಸ ಲೇಖನಗಳ ಜೊತೆಗೆ ಸಂಶೋಧನೆಗಳನ್ನು ಮಾಡಿ ವಿಜ್ಞಾನ ಲೋಕಕ್ಕೆ ಮಾದರಿಯಾಗಿದ್ದಾರೆ ಉದಾ : ನಮ್ಮ ಪಕ್ಕದ ಜಿಲ್ಲೆಯ ಡಾ. ವಿಜಯಲಕ್ಷ್ಮಿ ದೇವಮಾನೇ ಅವರ ಕ್ಯಾನ್ಸರ್ ಚಿಕಿತ್ಸೆಗೆ ಔಷಧಿ ಕಂಡು ಹಿಡಿದು ಪದ್ಮಶ್ರೀ ಪ್ರಶಸ್ತಿ ಪಡೆದುಕೊಂಡ ಕೀರ್ತಿ ಇಡೀ ಮುಂಬರುವ ಮಹಿಳಾ ವಿಜ್ಞಾನಿಗಳಿಗೆ ಸ್ಫೂರ್ತಿದಾಯಕವಾಗಿದೆ ಎಂದು ನುಡಿದರು

ಕಾರ್ಯಕ್ರಮದ ವೇದಿಕೆಯಮೇಲೆ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗಾ ಹಾಗೂ ಬೀದರ್ ಜಿಲ್ಲಾ ಘಟಕದ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕಲಾಲ ದೇವಿ ಪ್ರಸಾದ ರವರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಯನ್ನು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಸಂಯೋಜ-ಕರು ಹಾಗೂ ಕಾರ್ಯದರ್ಶಿಗಳು ಸ್ವದೇಶಿ ವಿಜ್ಞಾನ ಆಂದೋಲನ ಬೆಂಗಳೂರು ಆದಂತಹ ಶ್ರೀ ದಾನಿ ಬಾಬುರಾವ ಅವರು ನುಡಿದರು

ಈ ಕಾರ್ಯಕ್ರಮದಲ್ಲಿ ಅತ್ಯುತ್ತಮ ವಿಜ್ಞಾನ ಶಿಕ್ಷಕರಿಗೆ ಪ್ರಶಸ್ತಿ ಹಾಗು ಪ್ರಮಾಣಪತ್ರಗಳನ್ನು ವಿತರಿಸಲಾಯಿತು ಹಾಗೂ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗು ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ರೇಣುಕಾ ಎಂ ಸ್ವಾಮಿ ಯವರು ಪ್ರಾರ್ಥನಾಗೀತೆ ಹಾಡಿದರೆ, ಡಾ. ಶಿವಲೀಲಾ ಮಠಪತಿ ನಿರೂಪಿಸಿದರೆ, ಡಾ. ಮಲ್ಲಿಕಾರ್ಜುನ ಕೋಟೆ ವಂದಿಸಿದರು, ಈ ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲೆಯ ವಿವಿಧ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಹಾಗೂ ಎನ್.ಎಸ್.ಎಸ್./ಎನ್.ಸಿ.ಸಿ. ವಿದ್ಯಾರ್ಥಿಗಳು ಮತ್ತು ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

## ಮದ್ಯ ಮಾರಾಟ, ಸಾಗಣೆ ನಿಷೇಧ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಹೋಳಿ ಹಬ್ಬದ ಪ್ರಯುಕ್ತ ಬಾಗಲಕೋಟೆ ಜಿಲ್ಲೆಯಾದ್ಯಂತ ಮಾರ್ಚ 3 ರಿಂದ 8 ವರೆಗೆ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಠಿಯಿಂದ ಮದ್ಯ ಮಾರಾಟ ಹಾಗೂ ಸಾಗಾಣಿಕೆಯನ್ನು (ಕೆ.ಎಸ್.ಬಿ.ಸಿಎಲ್ ಡಿಪೋ ಬಾಗಲಕೋಟೆ ಸಾಗಾಣಿಕೆ ಹೊರತುಪಡಿಸಿ) ನಿಷೇಧಿಸಿ ಜಿಲ್ಲಾಧಿಕಾರಿಗಳೂ ಆಗಿರುವ ಜಿಲ್ಲಾ ದಂಡಾಧಿಕಾರಿ ಸಂಗಪ್ಪ ಆದೇಶ ಹೊರಡಿಸಿದ್ದಾರೆ.

ಬಾಗಲಕೋಟೆ ತಾಲೂಕಿನ ಬಾಗಲಕೋಟೆ ಶಹರ ಠಾಣೆ, ನವನಗರ ಠಾಣೆ ವ್ಯಾಪ್ತಿಯಲ್ಲಿ ಮಾರ್ಚ 3ರ ಮಧ್ಯರಾತ್ರಿಯಿಂದ ಮಾರ್ಚ 7ರ ಮಧ್ಯರಾತ್ರಿಯವರೆಗೆ, ಬಾಗಲಕೋಟೆ ಗ್ರಾಮೀಣ ಠಾಣೆ ಮತ್ತು ಕಲಾದಗಿ ಠಾಣಾ ವ್ಯಾಪ್ತಿಯಲ್ಲಿ ಮಾರ್ಚ 2ರ ಮಧ್ಯರಾತ್ರಿಯಿಂದ ಮಾರ್ಚ 5ರ ಮಧ್ಯರಾತ್ರಿವರೆಗೆ, ಬೀಳಗಿ ತಾಲೂಕಿನ ಬೀಳಗಿ ಠಾಣಾ ವ್ಯಾಪ್ತಿಯಲ್ಲಿ ಮಾರ್ಚ 3ರ ಮಧ್ಯರಾತ್ರಿಯಿಂದ ಮಾರ್ಚ 4ರ ಮಧ್ಯರಾತ್ರಿವರೆಗೆ, ಹುನಗುಂದ ಠಾಣೆ, ಕಮತಗಿ ಪಟ್ಟಣ, ಇಲಕಲ್ಲ ಶಹರ ಠಾಣೆ, ಇಲಕಲ್ಲ ಗ್ರಾಮೀಣ ಠಾಣಾ ವ್ಯಾಪ್ತಿಯಲ್ಲಿ ಮಾರ್ಚ 3ರ ಮಧ್ಯರಾತ್ರಿಯಿಂದ ಮಾ.4ರ ಮಧ್ಯರಾತ್ರಿವರೆಗೆ, ಅಮೀನಗಡ ಠಾಣಾ ವ್ಯಾಪ್ತಿಯಲ್ಲಿ ಮಾ.2 ರಿಂದ 3 ವರೆಗೆ ನಿಷೇಧ ಜಾರಿಯಲ್ಲಿರುತ್ತದೆ.

ಬಾದಾಮಿ ಠಾಣಾ ವ್ಯಾಪ್ತಿಯಲ್ಲಿ ಮಾ.2 ರಿಂದ 4 ವರೆಗೆ, ಕೆರೂರ ಠಾಣಾ ಮಾ.2 ರಿಂದ 5ವರೆಗೆ, ಗುಳೇದಗುಡ್ಡ ಠಾಣಾ ಮಾ.2 ರಿಂದ 4, ಜಮಖಂಡಿ ಶಹರ, ಗ್ರಾಮೀಣ ಹಾಗೂ ಸಾವಳಿಯಲ್ಲಿ ಮಾ.2 ರಿಂದ 4 ವರೆಗೆ, ಬನಹಟ್ಟಿ, ತೇರದಾಳ ಠಾಣಾ ಮಾ.2 ರಿಂದ 4, ಮಹಾಲಿಂಗಪೂರ ಠಾಣೆ ಮಾ.2 ರಿಂದ 3, ಮುಧೋಳ ಮತ್ತು ಲೋಕಾಪೂರ ಠಾಣಾ ಮಾ.3 ಮಧ್ಯರಾತ್ರಿಯಿಂದ ಮಾ.4ರ ಮಧ್ಯರಾತ್ರಿಯವರೆಗೆ ಮದ್ಯ ಮಾರಾಟ ಹಾಗೂ ಸಾಗಾಣಿಕೆಯನ್ನು ನಿಷೇಧಿಸಲಾಗಿದೆ.

ಆದೇಶ ಉಲ್ಲಂಘಿಸಿದವರಿಗೆ ಕರ್ನಾಟಕ ಅಬಕಾರಿ ಕಾಯ್ದೆ 1965ರಡಿ 6 ತಿಂಗಳಿಂದ 5 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ 10 ಸಾವಿರ ರೂ.ವರೆಗೆ ದಂಡ ವಿಧಿಸಲಾಗುವುದು. ಆದ್ದರಿಂದ ಜಿಲ್ಲೆಯ ಎಲ್ಲ ಅಬಕಾರಿ ಪರವಾನಗಿ ಹೊಂದಿದವರು ಹಾಗೂ ಸಾರ್ವಜನಿಕರು ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಉಪವಿಭಾಗಾಧಿಕಾರಿಗಳು, ಜಿಲ್ಲಾ ಅಬಕಾರಿ ಅಧಿಕಾರಿಗಳು, ತಹಶೀಲ್ದಾರರು ಮತ್ತು ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿಗಳು ಈ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

## ಮಧ್ಯಪ್ರಾಚ್ಯ ದೇಶಗಳಲ್ಲಿನ ಬಿಕ್ಕಟ್ಟು ಪ್ರಯಾಣಿಕರ ನೆರವಿಗಾಗಿ ಸಹಾಯವಾಣಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಪ್ರಚಲಿತದಲ್ಲಿರುವ ಅಸ್ಥಿರ ಪರಿಸ್ಥಿತಿಯಿಂದಾಗಿ ಅಂತರಾಷ್ಟ್ರೀಯ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆಯ ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲಾಡಳಿತವು ಈ ಕೆಳಗಿನ ಮಾಹಿತಿಯನ್ನು ಹಂಚಿಕೊಂಡಿದೆ.

ವೈಮಾನಿಕ ನಿರ್ಬಂಧ ಮತ್ತು ಪ್ರಚಲಿತ ಸ್ಥಿತಿಯಿಂದಾಗಿ ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು (ಯಥಿಠಿಚಿಥಿಜ) ಮಾರ್ಚ್ 2 ರವರೆಗೆ ಮುಚ್ಚಲಾಗಿದೆ. ಈ ಅನಿರೀಕ್ಷಿತ ಅಡಚಣೆಯಿಂದಾಗಿ ಹಾಗೂ ಕರ್ನಾಟಕದ ಅನೇಕ ಪ್ರಯಾಣಿಕರು ಯುಎಇ (ದುಬೈ) ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಿಲುಕಿಕೊಂಡಿದ್ದಾರೆ.

ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ನಿರ್ದೇಶನದಂತೆ, ರಾಜ್ಯ ಮತ್ತು ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 24*7 ಕಾರ್ಯನಿರ್ವಹಿಸುತ್ತಿವೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ರಾಯಭಾರಿ ಕಚೇರಿಗಳು ನೀಡುವ ಸೂಚನೆಗಳನ್ನು ಜಿಲ್ಲಾಡಳಿತವು ನಿರಂತರವಾಗಿ ಗಮನಿಸುತ್ತಿದೆ. ಈ ಕೆಳಗಿನ ಸಹಾಯವಾಣಿ ಸಂಖ್ಯೆಗಳಿಗೆ ಬಾಗಲಕೋಟೆ ಜಿಲ್ಲೆಯ ನಿವಾಸಿಗಳು ಅಥವಾ ಅವರ ಸಂಬಂಧಿಕರು ಹೆಚ್ಚಿನ ಮಾಹಿತಿಗಾಗಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾಗಿದೆ.

ಬಾಗಲಕೋಟೆ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 08354-252100, ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ 080-22340676, 080-22253707, ಟೋಲ್ ಫ್ರೀ ಸಂಖ್ಯೆ 1070ಗೆ ಕರೆ ಮಾಡಿ ಮಾಹಿತಿ ಹಾಗೂ ಸಹಾಯ ಪಡೆಯಬಹುದು.

**ಸಾರ್ವಜನಿಕರಿಗೆ ಪ್ರಮುಖ ಸೂಚನೆಗಳು:**

ಮಧ್ಯಪ್ರಾಚ್ಯ ದೇಶಗಳಲ್ಲಿರುವ ಕರ್ನಾಟಕದ ನಿವಾಸಿಗಳು ಹಾಗೂ ಜಿಲ್ಲೆಯವರಿದ್ದಲ್ಲಿ ಅಲ್ಲಿನ ಸ್ಥಳೀಯ ಸರ್ಕಾರಗಳು ನೀಡುವ ಸುರಕ್ಷತಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಕಷ್ಟದಲ್ಲಿರುವವರು ಆಯಾ ದೇಶದ ಭಾರತೀಯ ರಾಯಭಾರಿ ಕಚೇರಿಯ ಸಹಾಯವಾಣಿಗೆ ಕರೆ ಮಾಡಬೇಕು ಅಥವಾ 'ಸಾರಥಿ ಸಹಾಯತಾ' (Sarthi Sahayata) ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ವಿಸಾ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ಹತ್ತಿರದ ಎಫ್.ಆರ್.ಆರ್.ಒ (FRRO) ಕಚೇರಿಯನ್ನು ಸಂಪರ್ಕಿಸಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

## ವಿದ್ಯಾಗಿರಿಯಲ್ಲಿ ರೇಣುಕಾಚಾರ್ಯ ಜಯಂತಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,2-ನಗರದ ವಿದ್ಯಾಗಿರಿಯ ರೇಣುಕಾಚಾರ್ಯ ವೃತ್ತದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಸಮಸ್ತ ಜಂಗಮ ಸಮಾಜ ಬಾಂಧವರು ಆಚರಿಸಿದರು.

ರೇಣುಕಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಪಣೆ ಮಾಡಿದರು. ಸಮಾಜದ ಹಿರಿಯರಾದ ಪ್ರಭುಸ್ವಾಮಿ ಸರಗಣಾಚಾರಿ ಹಾಗೂ ಸುರೇಶ ವಸ್ತ್ರದ ರೇಣುಕಾಚಾರ್ಯರ ಬದುಕು, ತತ್ವದಾರ್ಶಗಳು ಅವರು ಸಮಾಜದ ಒಳಿತಿಗೆ ತೆ-ೋರಿದ ಮಾರ್ಗದರ್ಶನ ಕುರಿತು ಮಾತನಾಡಿ, ಶ್ರೀ ರೇಣುಕರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕಬೇಕು ಎಂದರು.

ಸಮಾಜದ ಪ್ರಮುಖರಾದ ಚನ್ನಯ್ಯ ವಾರಿಮಠ, ಶಿವಪುತ್ರಯ್ಯ ಹೊದ್ಲೂರಮಠ, ವಿಶ್ವೇಶ್ವರಯ್ಯ ಪಾಟೀಲ, ಮಹಾಂತೇಶ ಕೋಟಿ, ಕುಮಾರ ಚಿತ್ತರಗಿ, ವಿ.ಜಿ.ಮಠಪತಿ, ಮಹಾಂತೇಶ ಹಿರೇಮಠ, ಯಾವಗಲ್ಲಮಠ, ವಿರುಪಾಕ್ಷಯ್ಯ ಹಿರೇಮಠ, ಸಂಗಯ್ಯ ಸರಗಣಾಚಾರಿ, ಮೃತ್ಯುಂಜಯ ವಸ್ತ್ರದ, ಸಿದ್ದು, ವೀರೇಶ ಮತ್ತಿತರರು ಪಾಲ್ಗೊಂಡಿದ್ದರು.

## ಪ್ರಯಾಣಿಕರ ನೆರವಿಗಾಗಿ ಸಹಾಯವಾಣಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಪ್ರಚಲಿತದಲ್ಲಿರುವ ಅಸ್ಥಿರ ಪರಿಸ್ಥಿತಿಯಿಂದಾಗಿ ಅಂತರಾಷ್ಟ್ರೀಯ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಈ ಹಿನ್ನೆಲೆಯಲ್ಲಿ, ವಿಜಯನಗರ ಜಿಲ್ಲೆಯ ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲಾಡಳಿತವು ಈ ಕೆಳಗಿನ ಪ್ರಮುಖ ಮಾಹಿತಿಯನ್ನು ಹಂಚಿಕೊಂಡಿದೆ.

ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು ಮಾರ್ಚ್ 2ರವರೆಗೆ ಮುಚ್ಚಲಾಗಿದ್ದು, ಇದರಿಂದಾಗಿ ದುಬೈ ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಅನೇಕ ಪ್ರಯಾಣಿಕರು ಸಿಲುಕಿಕೊಂಡಿದ್ದಾರೆ. ಜಿಲ್ಲಾಡಳಿತದ ಕ್ರಮಗಳು: ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ನಿರ್ದೇಶನದಂತೆ, ರಾಜ್ಯ ಮತ್ತು ಜಿಲ್ಲಾ ಮಟ್ಟದ ತುರ್ತು ಕಾರ್ಯಾಚರಣೆ ಕೇಂದ್ರಗಳು 24ಥ7 ಕಾರ್ಯನಿರ್ವಹಿಸುತ್ತಿವೆ.

# ಭಾರತದಲ್ಲಿ ಪ್ರತಿಭಟನೆ ಎಂಬಿ ಪಾಟೀಲ ಸಮರ್ಥನೆ




**ವಿಜಯಪುರ:** ಇರಾನ್ ಅಧ್ಯಕ್ಷನ ಹತ್ಯೆ ಖಂಡಿಸಿ ಭಾರತದಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಸಚಿವ ಎಂ.ಬಿ.ಪಾಟೀಲ್ ಸಮರ್ಥನೆ ಮಾಡಿಕೊಂಡಿದ್ದಾರೆ. ಹಿಂದು ಇಂದು ವಿಜಯಪುರದಲ್ಲಿ ಮಾದ್ಯಮ ಪ್ರತಿಕ್ರಿಯೆ ನೀಡಿದ ಸಚಿವರು ಪ್ರತಿಭಟನಾಕಾರರ ಪರ ಬ್ಯಾಟ್ ಬೀಸಿದರು, ಅಮೇರಿಕಾದ ಅಧ್ಯಕ್ಷ ಡೋನಲ್ಡ್ ಟ್ರಂಪ್ ಮಾಡಿದ್ದು ತಪ್ಪು ಒಂದು ದೇಶದ ಅಧ್ಯಕ್ಷರನ್ನ ಅಪಹರಿಸುತ್ತಾರೆ, ಒಂದು ದೇಶದ ಅಧ್ಯಕ್ಷರನ್ನ ಹತ್ಯೆ ಮಾಡ್ತಾರೆ ಇದು ಸರಿಯಲ್ಲ, ಇಂದು ಅವರಿಗೆ ಮಾಡಿದ್ದಾರೆ, ನಾಳೆ ನಮಗೆ ಕೂಡ ಮಾಡುತ್ತಾರೆ. ಇರಾನ್ ಅಧ್ಯಕ್ಷ ಖಮೇನಿ ಹತ್ಯೆಯಿಂದ ಸಿಯಾ ಸಮುದಾಯಕ್ಕೆ ನೋವಾಗಿದೆ , ಖಮೇನಿ ಒರ್ವ ರಾಷ್ಟದ ಅಧ್ಯಕ್ಷ ಅಷ್ಟೆ ಅಲ್ಲ, ಸಿಯಾ ಸಮುದಾಯದ ಧರ್ಮಗುರು ಆಗಿದ್ದರು. ಅದಕ್ಕಾಗಿ ತಮ್ಮ ಧರ್ಮುಗುರು ಕಳೆದುಕೊಂಡು ಅವರು ಪ್ರತಿಭಟಿಸುತ್ತಿದ್ದಾರೆ ಎಂದು ಸಚಿವ ಎಂ ಬಿ ಪಾಟೀಲ್ ಸಮರ್ಥನೆ ನೀಡಿದ್ದಾರೆ.

# ಹೋಳಿ ಹಬ್ಬ: ಮಾರ್ಚ್ 4ರವರೆಗೆ ಮದ್ಯ ಮಾರಾಟ ನಿಷೇಧ

**ಕೊಪ್ಪಳ:** ಹೋಳಿ ಹಬ್ಬದ ಪ್ರಯುಕ್ತ ಜಿಲ್ಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ, ಕಾನೂನು ಸುವ್ಯವಸ್ಥೆ ಮತ್ತು




ಶಾಂತಿ ಹಾಗೂ ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಮಾರ್ಚ್ 4ರ ವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು ಆದೇಶ ಹೊರಡಿಸಿದ್ದಾರೆ.

ಮಾರ್ಚ್ 3 ರಿಂದ 4ರ ವರೆಗೆ ಕೊಪ್ಪಳ ಜಿಲ್ಲೆಯಾದ್ಯಂತ ಕಾಮದಹನ ಮತ್ತು ಹೋಳಿ ಹಬ್ಬದ ಸಮಯದಲ್ಲಿ ಶಾಂತತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಿಗೊಳಪಟ್ಟಂತೆ ಮದ್ಯ ಮಾರಾಟವನ್ನು ನಿಷೇಧಿಸಬೇಕೆಂಬ ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರ ಕೋರಿಕೆ ಮೇರೆಗೆ ಕರ್ನಾಟಕ ಅಬಕಾರಿ ಕಾಯ್ದೆ-1965ರ ಕಲಂ 21 ರನ್ವಯ ಕೊಪ್ಪಳ ಜಿಲ್ಲೆಯ ಅಳವಂಡಿ, ಹನುಮಸಾಗರ ಮತ್ತು ಯಲಬುರ್ಗಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾ. 2ರ ಸಂಜೆ 6 ಗಂಟೆಯಿಂದ ಮಾ. 3ರ ಮಧ್ಯರಾತ್ರಿಯವರೆಗೆ ಮದ್ಯಮಾರಾಟವನ್ನು ನಿಷೇಧಿಸಿದೆ. ಅದೇ ರೀತಿ ಈ ಮೂರು ಪೊಲೀಸ್ ಠಾಣೆಗಳ ವ್ಯಾಪ್ತಿ ಹೊರತುಪಡಿಸಿ ಕೊಪ್ಪಳ ಜಿಲ್ಲೆಯಾದ್ಯಂತ ಮಾ. 3ರ ಸಂಜೆ 6 ಗಂಟೆಯಿಂದ ಮಾ. 4ರ ಮಧ್ಯರಾತ್ರಿಯವರೆಗೆ ಮದ್ಯಮಾರಾಟವನ್ನು ನಿಷೇಧಿಸಲಾಗಿದೆ.

ಈ ವಿಷಯವಾಗಿ ಅಬಕಾರಿ ಉಪ ಆಯುಕ್ತರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿ, ಅದರಲ್ಲಿ ಆರಕ್ಷಕರ ವೃತ್ತ ನಿರೀಕ್ಷಕರು ಹಾಗೂ ಅಬಕಾರಿ ವೃತ್ತ ನಿರೀಕ್ಷಕರು ಕಾರ್ಯನಿರ್ವಹಿಸಲು ಆದೇಶಿಸಿದೆ. ಈ ಆದೇಶವನ್ನು ಜಾರಿಗೆ ತರುವಲ್ಲಿ ನಿರ್ಲಕ್ಷತನ ತೋರಿದವರ ವಿರುದ್ಧ ಕಾನೂನು ರೀತಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಈ ಆದೇಶದಲ್ಲಿ ತಿಳಿಸಿದ್ದಾರೆ.

## ಆಲಿ ಖಾಮಿನ್ಯೆ ಹತ್ಯೆ: ಅಲಿಪುರದಲ್ಲಿ ಮೂರು ದಿನಗಳ ಶೋಕಾಚರಣೆ, ಅಘೋಷಿತ ಬಂದ್



**ಚಿಕ್ಕಬಳ್ಳಾಪುರ:** ಇಸ್ರೇಲ್-ಅಮೆರಿಕ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಆಲಿ ಖಾಮಿನ್ಯೆ ಹತ್ಯೆಯಾಗಿರುವ ಸುದ್ದಿ ತಿಳಿಯುತ್ತಿದ್ದಂತೆಯೇ ಜಿಲ್ಲೆಯ ಅಲಿಪುರ ಗ್ರಾಮದಲ್ಲಿ ತೀವ್ರ ದುಃಖದ ವಾತಾವರಣ ನಿರ್ಮಾಣವಾಗಿದೆ.

ಅಲಿಪುರದಲ್ಲಿ ಶಿಯಾ ಮುಸ್ಲಿಮರ ಸಂಖ್ಯೆ ಹೆಚ್ಚಿದ್ದು ಸಂತಾಪ ಸೂಚಿಸಲು ಸ್ವಯಂಪ್ರೇರಿತವಾಗಿ ಮೂರು ದಿನಗಳ ಕಾಲ ಶೋಕಾಚರಣೆ ನಡೆಸಲು ತೀರ್ಮಾನಿಸಿದ್ದಾರೆ ಇದರ ಭಾಗವಾಗಿ ಗ್ರಾಮದಲ್ಲಿ ಅಘೋಷಿತ ಬಂದ್ ಜಾರಿಯಾಗಿದ್ದು,ಅಂಗಡಿ-ಮುಗ್ಗಟ್ಟುಗಳು ಸಂಪೂರ್ಣವಾಗಿ ಬಂದ್ ಆಗಿವೆ.

ಶೋಕಾಚರಣೆಯ ವೇಳೆ ಕೆಲವರು ಖಾಮಿನ್ಯೆ ಅವರ ಫೋಟೋಗಳನ್ನು ಹಿಡಿದು ಕಣ್ಣೀರು ಹಾಕಿ ದುಃಖ ವ್ಯಕ್ತಪಡಿಸಿದರು.ಮಾನವೀಯತೆಗೆ ಪ್ರತಿಬಿಂಬವಾಗಿದ್ದ ಖಾಮಿನ್ಯೆ ಅವರನ್ನು ಹತ್ಯೆ ಮಾಡಿರುವ ಅಮೆರಿಕ ಹಾಗೂ ಇಸ್ರೇಲ್ ರಾಷ್ಟ್ರಗಳು ಮುಂದಿನ ದಿನಗಳಲ್ಲಿ ತಕ್ಕ ಪಾಠ ಎದುರಿಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.ಕಪ್ಪು ಬಟ್ಟೆ ಧರಿಸಿ ಗ್ರಾಮದಲ್ಲಿ ಮೆರವಣಿಗೆ ನಡೆಸಿದ ಶಿಯಾ ಸಮುದಾಯದ ಸದಸ್ಯರು ಇಸ್ರೇಲ್ ಹಾಗೂ ಅಮೆರಿಕ ವಿರುದ್ಧ ದಿಕ್ಕಾರ ಕೂಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.ಶಾಂತಿಯುತವಾಗಿ ನಡೆದ ಶೋಕಾಚರಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಭಾಗವಹಿಸಿದ್ದರು.

# ವ್ಯಾಲಿ ನೀರಿಗೆ 3ನೇ ಹಂತದ ಶುದ್ಧೀಕರಣಕ್ಕೆ ಅನುದಾನ: ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ



ಬರಗಾಲದಿಂದ ಬತ್ತಿಹೋಗಿದ್ದ ಚಿಕ್ಕಬಳ್ಳಾಪುರ ಜಿಲ್ಲೆಗೆ ಬೆಂಗಳೂರು ಹೆಬ್ಬಾಳ-ನಾಗವಾರ ಭಾಗದಿಂದ ಹೆಚ್.ಎನ್ ವ್ಯಾಲಿ ಯೋಜನೆಯಡಿ ಎರಡನೇ ಹಂತದ ಶುದ್ಧೀಕರಿಸಿದ ಕೊಳಚೆ ನೀರನ್ನು ಹರಿಸಲಾಗುತ್ತಿದೆ ಆದರೆ ಈ ನೀರಿನಿಂದ ಬೆಳೆದ ತರಕಾರಿಗಳಲ್ಲಿ ವಿಷಕಾರಿ ಅಂಶಗಳು ಪತ್ತೆಯಾಗಿದ್ದು, ಅವು ತಿನ್ನಲು ಯೋಗ್ಯವಲ್ಲ ಎನ್ನುವ ವರದಿಗಳು ಜನರಲ್ಲಿ ಆತಂಕ ಮೂಡಿಸಿವೆ.ಕುಡಿಯುವ ನೀರಲ್ಲೂ ನೈಟ್ರೇಟ್, ಲೆಡ್,ಪೊಟಾಷಿಯಂ ಹಾಗೂ ಯುರೇನಿಯಂ ಅಂಶಗಳು ಹೆಚ್ಚಾಗಿ ಪತ್ತೆಯಾಗಿವೆ ಎನ್ನಲಾಗುತ್ತಿದೆ ಈ ಹಿನ್ನೆಲೆಯಲ್ಲಿ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿದ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ಬಿ. ರೆಡ್ಡಿ, ಇದೇ ತಿಂಗಳ 6ರಂದು ಮಂಡಿಸಲಿರುವ ರಾಜ್ಯ ಬಜೆಟ್‌ನಲ್ಲಿ ಹೆಚ್.ಎನ್ ವ್ಯಾಲಿ ನೀರಿಗೆ ಮೂರನೇ ಹಂತದ ಶುದ್ಧೀಕರಣ ವ್ಯವಸ್ಥೆ ಘೋಷಿಸಬೇಕು ಎಂದು ಆಗ್ರಹಿಸಿದರು.

ಚುನಾವಣೆಗೆ ಮುನ್ನ ಕೊಳಚೆ ನೀರಿನ ಅಪಾಯಗಳ ಬಗ್ಗೆ ಕಂಠೆಗಟ್ಟಲೆ ಮಾತನಾಡಿದ್ದ ಶಾಸಕ ಪ್ರದೀಪ್ ಈಶ್ವರ್, ಈಗ ಮೌನವಾಗಿರುವುದು ವಿಷಾದಕರ ಎಂದು ಅವರು ಟೀಕಿಸಿದರು.ಹೆಚ್.ಎನ್ ವ್ಯಾಲಿ ನೀರನ್ನು ಅಂತರ್ಜಲ ಮಟ್ಟ ಹೆಚ್ಚಿಸಲು ಮಾತ್ರ ಬಳಸಲಾಗುತ್ತದೆ ಎಂದು ಹೇಳುತ್ತಿದೆ. ಆದರೆ ಕಂದವಾರ ಕೆರೆಯಲ್ಲಿ ಸಂಗ್ರಹವಾಗುವ ಈ ನೀರಿನ ಸುತ್ತಮುತ್ತ ಕೊರೆಸಿದ ಬೋರ್‌ವೆಲ್‌ಗಳಿಂದ ನಗರದ ಐದು-ಆರು ವಾರ್ಡ್‌ಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ.ಇದೇ ನೀರನ್ನು ಮನೆಗಳಿಗೆ ನೇರವಾಗಿ ಹರಿಸಲಾಗುತ್ತಿದೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಬೆಳೆದ ತರಕಾರಿಗಳು ಬೇಗ ಕೆಡುವುದು, ಆರೋಗ್ಯ ಸಮಸ್ಯೆಗಳು ಹೆಚ್ಚಾಗಿರುವುದು ಜನರ ಅನುಮಾನಗಳಿಗೆ ಕಾರಣವಾಗಿದೆ.ಹೆಚ್.ಎನ್ ವ್ಯಾಲಿ ನೀರು ಹರಿದ ನಂತರ ಖಾಸಗಿ ಆಸ್ಪತ್ರೆಗಳಲ್ಲಿ ತಿಂಗಳಿಗೆ ಸುಮಾರು 600 ಜನರು ಡಯಾಲಿಸಿಸ್ ಮಾಡಿಸಿಕೊಳ್ಳುವ ಪರಿಸ್ಥಿತಿ ಉಂಟಾಗಿದೆ.ಇದರಿಂದ ಕ್ಯಾನ್ಸರ್,ಬ್ಲೂ ಬೇಬಿ ಸಿಂಡ್ರೋಮ್,ಥೈರಾಯ್ಡ್ ಹಾಗೂ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿವೆ.ಒಂದು ಲೆಕ್ಕದಲ್ಲಿ ಜಿಲ್ಲೆ ಡಯಾಲಿಸಿಸ್ ರೋಗಿಗಳ ರಾಜಧಾನಿಯಾಗುವ ಭೀತಿ ಎದುರಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಹೆಚ್.ಎನ್ ವ್ಯಾಲಿ ನೀರಿಗೆ ಮೂರನೇ ಹಂತದ ಶುದ್ಧೀಕರಣ ಅಗತ್ಯವಿದೆ.ಈ ಬಜೆಟ್‌ನಲ್ಲಿ ಅನುದಾನ ಮೀಸಲಿಡದಿದ್ದರೆ ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳು,ಪ್ರಗತಿಪರ ಸಂಘಟನೆಗಳು, ಬುದ್ಧಿಜೀವಿಗಳು,ಮತ್ತು ನಿರಾವರಿ ಹೋರಾಟಗಾರರೊಂದಿಗೆ ಬಂದ್ ನಡೆಸಲಾಗುತ್ತದೆ. ಆಗಲೂ ಕ್ರಮ ಕೈಗೊಳ್ಳದಿದ್ದರೆ ರೈತರು ಟ್ರ್ಯಾಕ್ಟರ್ ಹಾಗೂ ಎತ್ತಿನ ಬಂಡಿಗಳೊಂದಿಗೆ ಬೆಂಗಳೂರಿಗೆ ದಿಗ್ಬಂಧನ ಹೇರಲಾಗುವುದು ಎಂದು ಎಚ್ಚರಿಕೆ ನೀಡಿದರು.

ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ಕ್ಷೇತ್ರಗಳ ಶಾಸಕರು ಸಹ ಈ ಕಲುಷಿತ ನೀರನ್ನು ತಮ್ಮ ಕ್ಷೇತ್ರಗಳಿಗೆ ಹರಿಸಬಾರದು ಎಂದು ಸರ್ಕಾರ-ಕ್ಕೆ ತಿಳಿಸಿದ್ದಾರೆ ಎಂದು ಅವರು ತಿಳಿಸಿದರು. ಜನರು ನಿಮ್ಮ ವಿರುದ್ಧ ತಿರುಗಿಬೀಳುವ ಮೊದಲು ಎಚ್ಚೆತ್ತುಕೊಳ್ಳಿ.ಉಸ್ತುವಾರಿ ಸಚಿವರ ಮೂಲಕವಾಗಲಿ,ಮುಖ್ಯಮಂತ್ರಿ ಮಟ್ಟದಲ್ಲಾಗಲಿ ಹೆಚ್ ಎನ್ ವ್ಯಾಲಿ ನೀರನ್ನು ಮೂರನೇ ಹಂತದ ಶುದ್ಧೀಕರಣಕ್ಕೆ ಅನುಮೋದನೆ ನೀಡಬೇಕು ಎಂದು ಅವರು ಒತ್ತಾಯಿಸಿದರು.ಈ ಸಂದರ್ಭದಲ್ಲಿ ಮಂಚೇನಹಳ್ಳಿ ಮುಖಂಡ ರಿಯಾಜ್,ಬಿಜೆಪಿ ಮುಖಂಡರು ಹಾಗೂ ಚಾರಿಟೇಬಲ್ ಟ್ರಸ್ಟ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಪತ್ರಕರ್ತರ ಸಂಘಟನೆಗೆ ಹೊಸ ಸ್ವರೂಪ

• ಮಲ್ಲಮ್ಮ ನುಡಿ ವಾರ್ತೆ ಮುಂಬಯಿ




ಪತ್ರಕರ್ತರ ವೃತ್ತಿಯೇ ಸವಾಲಿನದ್ದು. ಅದನ್ನು ಧೈರ್ಯ ಮತ್ತು ನಿಷ್ಠೆಯಿಂದ ಎದುರಿಸುವ ಶಕ್ತಿಯನ್ನು ರೂಢಿಸಿಕೊಳ್ಳಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಕರೆ ನೀಡಿದರು.

ಮುಂಬಯಿ ಅಂಧೇರಿ ಪೂರ್ವದ ಕ್ಲಬ್ ಹೌಸ್‌ನ ಸಭಾಗೃಹದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ಮಹಾರಾಷ್ಟ್ರ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪತ್ರಕರ್ತರ ಸಂಘಟನೆ ಕ್ರೀಯಾಶೀಲಗೊಳಿಸಲು ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಸಂಘಟಿತ ಶಕ್ತಿಯ ಮೂಲಕ ಮಾತ್ರ ಪತ್ರಕರ್ತರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎನ್ನುವ ನಂಬಿಕೆ ನಮ್ಮದು. ಹೋರಾಟದ ಮೂಲಕವೇ ಹಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳಲಾಗಿದ್ದು, ಸರ್ಕಾರವೂ ಅದಕ್ಕೆ ಸ್ಪಂಧಿಸಿದೆ. ಮಹಾರಾಷ್ಟ್ರದಲ್ಲಿರುವ ಕನ್ನಡಿಗ ಪತ್ರಕರ್ತರು ಒಗ್ಗೂಡಿ ಕೆಲಸ ಮಾಡಬೇಕು. ನಿಮ್ಮ ಜೊತೆಗೆ ಸದಾ ನಾವಿರುತ್ತೇವೆ ಎಂದು ಹೇಳಿದರು.

ಪತ್ರಕರ್ತರ ಹಕ್ಕುಗಳು, ಭದ್ರತೆ, ಕಲ್ಯಾಣ ಯೋಜನೆಗಳಿಗಾಗಿ ಸಂಘ ಬದ್ಧವಾಗಿ ಕೆಲಸ ಮಾಡುತ್ತಿದೆ. ಹೊರನಾಡಿಗೂ ಕೆಯುಡಬ್ಲ್ಯೂಜೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ. ಎಲ್ಲರೂ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದರು. ನಮ್ಮ ಸೇವೆ ಮೂಲಕ ಎಷ್ಟು ಜನರ ಮನಸ್ಸನ್ನ ಗೆಲುತ್ತೇವೆ ಎನ್ನುವುದು ಮುಖ್ಯ. ಜನರ ಹೃದಯಗಳನ್ನು ತಲುಪುವುದು, ಸಾಧ್ಯವಾದಷ್ಟು ಜನರ ಕಣ್ಣೀರು ಒರೆಸುವುದು ಮುಖ್ಯ ಆ ಮೂಲಕ ನಮ್ಮ ಬದಕನ್ನು ಸಾರ್ಥಕಗೊಳಿಸಿಕೊಳ್ಳೋಣ. ಸಂಘಟನೆಯ ಮೂಲಕ ಪತ್ರಕರ್ತರಲ್ಲಿನ ಸಂಬಂಧಗಳು ಅನ್ಯೋನ್ಯವಾಗಿ ಸಾಂಕವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

# ಇಮಾಮ್‌ಗಳಿಗೆ ರಂಜಾನ್ ಕಿಟ್ ವಿತರಣೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ಮೈಸೂರು ಜಿಲ್ಲಾ ವಕ್ಫ್ ಬೋರ್ಡಿನ ವತಿಯಿಂದ ತಾಲ್ಲೂಕಿನ ಇಮಾಮ್-ಮೌಝುನ್‌ಗಳಿಗೆ ದಿನಸಿ ಪದಾರ್ಥಗಳನ್ನು (ರಂಜಾನ್ ಕಿಟ್)ನ್ನು ಜೊತೆಗೆ ಹಾಗೂ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ತಮ್ಮ ವ್ಯಕ್ತಿಕ ಹಣ ಸಹಾಯಧನ ಕೂಡ ವಿತರಣೆಯನ್ನು ನಗರ ಹೃದಯ ಭಾಗವಾದ ದೊಡ್ಡ ಮಸೀದಿ ಬೀದಿಯಲ್ಲಿರುವ ಮಸ್ಜಿದೇ ಆಲಾ ದಲ್ಲಿ ಸಭಾಂಗಣದಲ್ಲಿ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಹಾಗೂ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಅಜೀಜುಲ್ಲಾ ಅಜ್ಜು ಹಾಗೂ ಸದಸ್ಯರು ಅಜ್ಗರ್ ಪಾಶ ಸಿದ್ದೀಕ್ ಅಮ್ಜತ್ ವಿತರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಮಾತನಾಡಿ ಮಾಜಿ ರಂಜಾನ್ ಹಬ್ಬದ ಪುಣ್ಯ ದಿನದುಂದು ತಮ್ಮ ಸ್ವಂತ ವಾಗಿ ಇಮಾಮ್ ಮತ್ತು ಮೌಝುನ್ ಗಳಿಗೆ ನಗದು ಉಡುಗೊರೆಯನ್ನು ನೀಡಿ ಅವರನ್ನ ಶುಭಕೋರಿದರು.

ಈ ತಾಲೂಕಿನ ಮಾಜಿ ಶಾಸಕರಾದ ಎಚ್ ಪಿ ಮಂಜುನಾಥ್ ಅವರು ಅಲ್ಪಸಂಖ್ಯಾತಕರೊಂದಿಗೆ ಉತ್ತಮವಾದ ಬಾಂಧವ್ಯವನ್ನು ಇಟ್ಟುಕೊಂಡು ಅವರ ಕಷ್ಟ ಸುಖಗಳಿಗೆ ಭಾಗಿಯಾಗುವಂತಹ ಕಾರ್ಯಗಳನ್ನು ಮಾಡಿದ್ದಾರೆ ಹಾಗಾಗಿ ಅವರನ್ನು ಶ್ಲಾಘನಿಸುತ್ತೇನೆ ಎಂದರು.

ಈ ವಖ್ಫ್ ಬೋರ್ಡಿಗೆ ಹೊಸ ಮಾದರಿ, ಹೊಸ ಶೆಪ್, ಹೊಸ ದಿಕ್ಸೂಚಿ ಹಾಗೂ ಹೊಸ ದಾರಿಯನ್ನು ತೆರೆದಿದ್ದಿದ್ದೇ ಅಜೀಜುಲ್ಲಾ ಅಜ್ಜು ಅವರು ಎಲ್ಲಾರಿಗೂ ಗೊತ್ತಿತ್ತು ಅದು ಇದೆ ಅಂತ ಅದು ಏನು ಮಾಡುತ್ತೆ ಅಂತ ಯಾರಿಗೂ ಗೊತ್ತಿರಲಿಲ್ಲ ಆದರೆ ಈಗ ಹೋಗುತ್ತಿರುವ ರೀತಿ ಅವರ ಆತ್ಮದಲ್ಲೇ ಕಾಯ ವಾಚ ಮನ್ಸ ನಾನು ಒಳ್ಳೆಯದನ್ನು ಮಾಡಬೇಕು ಎಂದು ಅಜ್ಜು ಬಗ್ಗೆ ಗುಣಗಾನ ಮಾಡಿದರು.

# ಸರ್ದಾರ್ ಅಜಯ್ ಕುಮಾರ್‌ಗೆ ಬಿಇ ಪದವಿ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ




ಬೆಂಗಳೂರು ನಗರದ ಬಸವನಗುಡಿಯಲ್ಲಿ ಇರುವ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ 2026ನೇ ಸಾಲಿನ ಘಟಿಕೋತ್ಸವ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಪ್ರತಿಭಾವಂತ ವಿದ್ಯಾರ್ಥಿ ಸರ್ದಾರ್ ಅಜಯ್ ಕುಮಾರ್ ಅವರು ಬಿಇ (ಸಿವಿಲ್ ಇಂಜಿನಿಯರಿಂಗ್) ಪದವಿಯನ್ನು ಯಶಸ್ವಿಯಾಗಿ ಪಡೆದರು.

ಸರ್ದಾರ್ ಯಮನೂರಪ್ಪ ಹಾಗೂ ಸರ್ದಾರ್ ರಾಜೇಶ್ವರಿ ದಂಪತಿಗಳ ಹಿರಿಯ ಪುತ್ರರಾದ ಸರ್ದಾರ್ ಅಜಯ್ ಕುಮಾರ್ ಅವರು ತಮ್ಮ ವಿದ್ಯಾಭ್ಯಾಸದಲ್ಲಿ ಶ್ರಮ, ಶಿಸ್ತು ಮತ್ತು ಸಮರ್ಪಣೆಯೊಂದಿಗೆ ಉತ್ತಮ ಸಾಧನೆ ತೋರಿದ್ದಾರೆ. ಅವರ ಈ ಸಾಧನೆ ಕುಟುಂಬದವರಿಗೂ ಹಾಗೂ ಊರಿನವರಿಗೂ ಹೆಮ್ಮೆಯ ವಿಷಯವಾಗಿದೆ.

ಭವಿಷ್ಯದಲ್ಲಿ ಸಮರ್ಥ ಇಂಜಿನಿಯರ್ ಆಗಿ ಸಮಾಜಸೇವೆಯಲ್ಲಿ ತೊಡಗಿಕೊಳ್ಳುವ ಸಂಕಲ್ಪ ವ್ಯಕ್ತಪಡಿಸಿದ ಅವರು, ತಮ್ಮ ಸಾಧನೆಗೆ ಬೆನ್ನೆಲುಬಾಗಿದ್ದ ಗುರುಗಳು ಮತ್ತು ಪೋಷಕರಿಗೆ ಕೃತಜ್ಞತೆ ಸಲ್ಲಿಸಿದರು.

**ಅಭಿನಂದಿಸಿ ಆಶೀರ್ವದಿಸಿದರು.**

ಅಂಬಿಗರ ಚೌಡಯ್ಯ ಗುರುಪೀಠದ ಪೀಠಾಧ್ಯಕ್ಷರು ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶಾಂತ ಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಹಾವೇರಿ, ಶ್ರೀ ಡಾ.ಮಹೇಶ್ವರ ಮಹಾಸ್ವಾಮಿಗಳು, ಸುಕ್ಷೇತ್ರ ನಂದಿಪುರ, ಶ್ರೀ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು, ಹಂಪಸಾಗರ. ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಕೊಟ್ಟೂರು, ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಮರಿಯಮ್ಮನಹಳ್ಳಿ, ಶ್ರೀ ಶಿವಮಹಾಂತ ಮಹಾಸ್ವಾಮಿಗಳು ಬಾಚಿಗೊಂಡನಹಳ್ಳಿ, ಶ್ರೀ ಹಾಲಸಿದ್ದೇಶ್ವರ ಮಹಾಸ್ವಾಮಿಗಳು ಹಾಲಸ್ವಾಮಿ ಮಠ ಹಗರಿಬೊಮ್ಮನಹಳ್ಳಿ, ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳು ಚಿತ್ರದುರ್ಗ, ಶ್ರೀ ನಿರಂಜನಪ್ರಭು ಮಹಾಸ್ವಾಮಿಗಳು ಗರಗ ನಾಗಲಾಪುರ, ಶ್ರೀ ಮರಿಶಾಂತವೀರ ಮಹಾಸ್ವಾಮಿಗಳು ಕಡಲಬಾಳು, ಶ್ರೀ ಕೆ.ನೇಮಿರಾಜ ನಾಯ್ಕ ಶಾಸಕರು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ, ಹಾಗೂ ಮುಖಂಡರುಗಳು, ಕಾರ್ಯಕರ್ತರು, ಪೂಜ ಗುರುಹಿರಿಯರು, ಗಂಗಾಮತ ಸಮಾಜದ ಗುರು ಹಿರಿಯರು ಸಮಸ್ತ ಬಾಂಧವರು ಹಾಗೂ ಆಪ್ತ ಸ್ನೇಹಿತರು, ಕುಟುಂಬ ವರ್ಗದವರು ಮತ್ತು ಬಂಧು ಮಿತ್ರರು ಶುಭಕೋರಿದರು.

# ಸೂಫಿ ಪದದ ನಿಷ್ಪತ್ತಿ, ಶರಣ ವಚನ ಪರಂಪರೆ ಉಗಮ ವಿಕಾಸ




**ಧರ್ಮ-ಮರ್ಮ**

●ಡಾ.ಎಂ.ಮಹ್ಮದ್ ಬಾಷ ಗೂಳ್ಯಂ
ಪ್ರಧಾನ ಸಂಪಾದಕ, ಬೆಂಗಳೂರು

ಭಾರತೀಯ ಆಧ್ಯಾತ್ಮದ ಅನುಸಂಧಾನಕ್ಕೆ ಅಣಿಯಾದಾಗ ಸೂಫಿ ಹಾಗೂ ಶರಣ ಪರಂಪರೆಗಳು ವಿಶಿಷ್ಟವಾಗಿ ಕಾಣಸಿಗುತ್ತವೆ. ಈ ಎರಡೂ ಪರಂಪರೆಗಳು ವಿಭಿನ್ನ ಧಾರ್ಮಿಕ ನೆಲೆಗಳನ್ನು ಪ್ರತಿನಿಧಿಸಿದ್ದರೂ ಈ ಎರಡರ ಗುರಿ ಮಾತ್ರ ಭಗವಂತನ ಸನ್ನಿಧಿ ಸೇರುವುದು. ಆಯಾ ಕಾಲಘಟ್ಟದ ಆಡಳಿತ ರೂಢ ವಸಾಹತುಶಾಹಿಗಳ ದಬ್ಬಾಳಿಕೆ ವಿರುದ್ಧ ಧ್ವನಿ ಎತ್ತುವುದು, ರಾಜಪ್ರಭುತ್ವದ ಕಂದಾಚಾರ, ಕರ್ಮಠಗಳ ಬೂಟಾಟಿಕೆ ಬಯಲು ಮಾಡುವುದು, ಬಹುಮುಖ್ಯವಾಗಿ ಅಮೂರ್ತವಾಗಿದ್ದ ಆಧ್ಯಾತ್ಮ ಆಚರಣೆಗಳ ಶಕ್ತಿಯ ಅನಾವರಣಕ್ಕೆ ಭಕ್ತಿಯ ಮಾರ್ಗ ಅನುಸರಿಸುವುದು, ಇದಕ್ಕೆ ಪ್ರಮಾಣಿಕತೆ, ಸತ್ಯಶೀಲಗುಣ, ನಿರ್ಮಲ ಭಾವ, ಸಹಿಷ್ಣುವಾತಾವರಣ ಸೇರಿದಂತೆ ಅನೇಕ ವಿಚಾರಗಳು ಪರಸ್ಪರ ಪೂರಕವಾಗಿರುವುದು, ಎರಡರ ಸಮಾಜಮುಖಿ ಆಧ್ಯಾತ್ಮ ಕಾರ್ಯಗಳೂ ಬಹಳ ಸಮೀಪ್ಯ ಇರುವುದು ಗಮನಾರ್ಹ. ಸೂಫಿ ಹಾಗೂ ಶರಣ ಪರಂಪರೆಗಳು ಸಂಶೋಧನಾತ್ಮಕ ನೆಲೆಗಳಿಂದ ನೋಡಿದಾಗ ಒಂದಕ್ಕೊಂದು ಹಲವಾರು ವಿಚಾರಗಳು ಸಾಮೀಪ್ಯದಿಂದ ಕೂಡಿದ್ದು, ಪೂರಕವಾಗಿವೆ. ತುಲನಾತ್ಮಕ ವಿವೇಚನೆಯಿಂದ ವಿಶ್ಲೇಷಿಸಿದಾಗ ಅದು ವೇದ್ಯವಾಗುತ್ತದೆ.

ಸೂಫಿ ಮತವು ಕರ್ಮಾಚರಣೆಯ ಜೊತೆ ಜೊತೆಗೆ ಇತಿಹಾಸದಲ್ಲಿ ವೈಚಾರಿಕ ಸಿದ್ಧಾಂತದ ಸ್ವರೂಪ ಪಡೆದಿದೆ. ಇದು ಸಂಪೂರ್ಣ ಆತ್ಮನುಶಾಸನವಾಗಿದೆ.

ಸೂಫಿ ಪಂಥವು ಇಸ್ಲಾಮ್ ಧರ್ಮದಲ್ಲಿನ ಅಧ್ಯಾತ್ಮದ ಮುಖ್ಯ ತಿರುಳೆಂದೂ, ಇಸ್ಲಾಮಿನ ಅನುಭಾವಿ ಚಳವಳಿಯೆಂದೂ ಗುರುತಿಸಿಕೊಂಡಿದೆ. ಒಬ್ಬ ಸೂಫಿಯನ್ನು ಅಧ್ಯಾತ್ಮದ ಮೂಲಕ ದೈವಿಕ ಮಿಲನವನ್ನು ಅಥವಾ ಪುನರ್ಮಿಲನವನ್ನು ಅನ್ವೇಷಿಸುವ ಮುಸ್ಲಿಮ್ ಎಂಬ ವಿವರಣೆ ಕೊಡುವುದಿದೆ. ಯಾವುದೇ ಪದಾರ್ಥದ ಮೇಲೆ ಪ್ರಭುತ್ವ ಹೊಂದುವುದು ಅಥವಾ ಅದರ ಪ್ರಭುತ್ವಕ್ಕೆ ಒಳಗಾಗದೇ ಇರುವುದೇ ಸೂಫಿ ಮತ. ಅಂದರೆ; ಇಲ್ಲಿ ವಿಶೇಷ ವರ್ಗವಿಲ್ಲ, ಯಾವುದೇ ಕಡ್ಡಾಯ ನಿಯಮಬದ್ಧ ಪ್ರಣಾಳಿಕೆಯೂ ಇಲ್ಲ. ಸೂಫಿಗಳ ಮಾರ್ಗಗಳು ಅನಂತ. ಆದರೆ ಅವರ ಮುರ್ಷದ್ (ಸೂಫಿ ಗುರುವಿನ)ನ ಕರ್ಮಾಚರಣೆ, ವಿಚಾರಗಳೇ ಅವರಿಗೆ ಜೀವಾಳ. ಸೂಫೀ ತತ್ತ್ವದ ಧಾರ್ಮಿಕ ಪರಂಪರೆಯ ವೈಶಿಷ್ಟ್ಯಗಳ ಆಧಾರದ ಮೇಲೆ ಅದಕ್ಕೆ ಇರುವ ಬಗೆಬಗೆಯ ವಾಖ್ಯಾನಗಳನ್ನು ಗಮನಿಸಬಹುದು.



**ಶರಣರ ವಚನ ಮಹತ್ವ ಸೂಫಿಸಂ ತತ್ತ್ವ**

**'ಸ್ವಾತಂತ್ರ್ಯ, ಔದಾರ್ಯ ಹಾಗೂ ಚಿತ್ತ ನಿಗ್ರಹವೇ ಸೂಫಿ ಮತ'**

**'ಪರಮಾತ್ಮನಿಗೆ ಮಾತ್ರ ಅರಿವಾಗುವ ಕಾರ್ಯಗಳನ್ನು ಪ್ರತಿಪಾದಿಸಿ ಸದಾ ಪರಮಾತ್ಮನ ಜೊತೆ ಅವನಿಗೆ ಮಾತ್ರ ಅರ್ಥವಾಗುವಂತೆ ಜೀವಿಸುವವನೇ ಸೂಫಿ'**

ಒಬ್ಬ ದಾರ್ಶನಿಕನ ಪ್ರಕಾರ, 'ಯಾರನ್ನು ಪ್ರೇಮವು ಪವಿತ್ರಗೊಳಿಸುವುದೋ, ಅದು ಸ್ವಚ್ಛತಾ ವಸ್ತ್ರವಾಗಿದೆ. ಯಾರನ್ನು 'ಸಖಿ'ನು ಪವಿತ್ರಗೊಳಿಸಿದ್ದಾನೋ ಅವನು ಸೂಫಿಯಾಗಿದ್ದಾನೆ' ಇಲ್ಲಿ ಪರಮಾತ್ಮನ ಜೊತೆ ಸ್ನೇಹ, ಆಧ್ಯಾತ್ಮ ಸಂಬಂಧ ಹೊಂದಿ ಉಪಾಸನೆ ಮಾಡುವ ಅನುಭಾವಿ ಮುಸ್ಲಿಮರ ಉದಾರ ವರ್ಗವನ್ನೇ ಸೂಫಿ ಎನ್ನಲಾಗುತ್ತಿದೆ. ಸೂಫಿಗಳ ಅನುಭಾವವನ್ನೇ 'ತಸವ್ವುಫ್' ಎಂದೂ ಕರೆಯಲಾಗುತ್ತದೆ. ಇಸ್ಲಾಮ್ ಧಾರ್ಮಿಕ ಇತಿಹಾಸದಲ್ಲಿ ಹಾಸುಹೊಕ್ಕಾಗಿರುವ ಸೂಫಿ ಹಾಗೂ ತಸವ್ವುಫ್ ಶಬ್ದಗಳು ಪವಿತ್ರ ಖುರಾನ್ ಅಥವಾ ಅದು ಅವತರಿಸಲ್ಪಟ್ಟ 'ಅರಬ್ಬಿ' ಭಾಷೆಯ ಯಾವುದೇ ಕೃತಿಯಲ್ಲೂ ಕಾಣಸಿಗದು. ಪವಿತ್ರ ಖುರಾನಿನಲ್ಲಿ 'ವಲಿ' ಎಂಬ ಶಬ್ದವು ಸೂಫಿಯನ್ನೇ ಸೂಚಿಸುತ್ತದೆ ಎನ್ನುವವಾದ ಉಂಟು. ಇದರಿಂದ ಸೂಫಿ, ತಸವುಫ್ ಶಬ್ದ ಉತ್ಪತ್ತಿಬಗ್ಗೆ ವಿದ್ವಾಂಸರಲ್ಲಿ ಭಿನ್ನಾ ಭಿಪ್ರಾಯಗಳಿವೆ. 'ಸೂಫಿ' ಹಲವರ ಪ್ರಕಾರ, ಮಕ್ಕಾ ಪಟ್ಟಣದಲ್ಲಿ ಮಸೀದಿಯ ಎದುರು ಕುಳಿತಿರುತ್ತಿದ್ದ ದೈವಭಕ್ತ ಫಕೀರರು. ಕೆಲವರು ಹೇಳುವುದು ಹೀಗೆ; ಸುಫಾ ಎಂದರೆ ಪಂಕ್ತಿ, ಸಾಲು ಎಂದರ್ಥ. ಸದಾಚಾರ, ದೈವೀ ಆಚರಣೆಗಳಿಂದಾಗಿ ಇತರರಿಗಿಂತ ಭಿನ್ನವಾದ ಅಗ್ರ ಪಂಕ್ತಿಯಲ್ಲಿ ನಿಲ್ಲುವವರೇ ಸೂಫಿಗಳು.

ಇನ್ನೊಂದು ವಾದ; 'ಸಾಫ್' (ಶುದ್ಧ) ಶಬ್ದದಿಂದ ಬಂದ ಪದ. ಪವಿತ್ರ, ಶುಭ್ರ ಜೀವನ ನಡೆಸುವವರೇ ಸೂಫಿಗಳು. ಇದನ್ನು 'ಸೋಫಿಯಾ' (ಜ್ಞಾನ)ದ ರೂಪಾಂತರ ಎನ್ನುವುದೂ ಇದೆ. ಇವರು ಹೊಂದಿದ ಪರಮ ಜ್ಞಾನದಿಂದಾಗಿ ಇವರಿಗೆ 'ಸೂಫಿ'ಗಳೆಂದು ಹೆಸರಾಯಿತು. ಪ್ರಪ್ರಥಮವಾಗಿ ಗೌಸ್ ಬಿನ್ ಮುರ್‌ನನ್ನು ಸೂಫಿ ಎನ್ನುವ ಪ್ರತೀತಿಯೂ ಉಂಟು. ಗೌಸ್‌ನ ತಾಯಿ ಬಹಳಷ್ಟು ವರ್ಷಗಳವರೆಗೆ ಸಂತಾನ ಭಾಗ್ಯದಿಂದ ವಂಚಿತಳಾಗಿದ್ದಳು. ತನಗೆ ಗಂಡು ಮಗ ಹುಟ್ಟಿದರೆ, ಅವನನ್ನು ಕಾಬಾದ ಸೇವೆಗಾಗಿ ಸಮರ್ಪಿಸುವುದಾಗಿ ದೇವರಲ್ಲಿ ಪ್ರಾರ್ಥಿಸಿದ್ದಳು. ಹಲವು ದಿನಗಳ ಬಳಿಕ ಆಕೆಗೆ ಗಂಡು ಸಂತಾನವಾಗಿ, ಆ ಮಗುವಿಗೆ ಗೌಸ್ ಎಂದು ಹೆಸರಿಟ್ಟಿದ್ದು ಭವಿಷ್ಯದಲ್ಲಿ ಈ ಗೌಸ್ 'ಸೂಫಿ' ಆದನು. ಯಾರು ದೈವೀಗೃಹವಾದ ಕಾಬಾದ ಸೇವೆಯಲ್ಲಿ ತಮ್ಮನ್ನು ಸಮರ್ಪಿಸಿಕೊಂಡರೊ ಅವರು ಸೂಫಿಗಳೆಂದು ಗುರುತಿಸಲ್ಪಟ್ಟದ್ದು ಇತಿಹಾಸ.

-ಮುಂದುವರೆಯುವುದು

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)